ಸಂಪುಟ: 14 Volume ಸಂಚಿಕೆ: 103 Issue ಪುಟಗಳು 08 Pages ಮಂಗಳವಾರ 28 ಜುಲೈ 2026 ₹4 PRGINO.120927 (RNINO:KARKAN/2011/48371) BDR/054/2026-2027 mallammanudi@gmail.com www.mallammanudi.in 9448604450, 9845028349

ಬೆಂಗಳೂರು | ಹುಬ್ಬಳ್ಳಿ | ಬೀದರ ಆವೃತ್ತಿ: ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ನಿನ್ನನ್ನು ಪೀಡಿಸುವ ಸಂಕಟಗಳನ್ನು ನಗುನಗುತ್ತಾ ನಾಶಪಡಿಸು.
–ಸ್ವಾಮಿ ವಿವೇಕಾನಂದ



ಬಾಗಲಕೋಟೆ: ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕದ ವತಿಯಿಂದ ಸಂಘದ ಕಚೇರಿ ಮುಂಭಾಗದಿಂದ ಬೈಕ್ ರ್‍ಯಾಲಿ ನಡೆಸುವ ಮೂಲಕ ವಿಜಯೋತ್ಸವ ಆಚರಿಸಲಾಯಿತು. ಸಂಘದ ಜಿಲ್ಲಾಧ್ಯಕ್ಷ ಗದಿಗೆಪ್ಪ ಅರಕೇರಿ, ಗೌರವಾಧ್ಯಕ್ಷ ಅರ್ಜುನ ಕೋರಿ, ಪ್ರಧಾನ ಕಾರ್ಯದರ್ಶಿ ವೇಗಾನಂದ, ಸಂಘಟನಾ ಕಾರ್ಯದರ್ಶಿ ಮಂಜುನಾಥ ಚಿತ್ತರಗಿ, ಯಮನಪ್ಪ ಯಲಗನ್ನವರ ಮತ್ತಿತರರು ಇದ್ದರು.

## ವಾರ್ತಾಧಿಕಾರಿ ಸುಲೈಮಾನ್ ನಧಾಪ್‌ರ ತಂದೆ ನಿಧನ

**ಯಾದಗಿರಿ:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಯಾದಗಿರಿ ಜಿಲ್ಲೆಯ ಹಿರಿಯ ಸಹಾಯಕ ನಿರ್ದೇಶಕರಾದ ಸುಲೈಮಾನ್ ನದಾಫ್ ಅವರ ತಂದೆ ದಸ್ತಗೀರ್ ಬಡೆಸಾಹೇಬ ನದಾಫ್ (82) ಅವರು ಸೋಮವಾರ ಬೆಳಗ್ಗೆ ಮಹಾರಾಷ್ಟ್ರದ ಸಾಂಗ್ಲಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಅವರು ಪತ್ನಿ, ನಾಲ್ವರು ಪುತ್ರರು, ಓರ್ವ ಪುತ್ರಿ ಮತ್ತು ಅಪಾರ ಬಂಧು ಬಳಗವನ್ನು ಅವರು ಅಗಲಿದ್ದಾರೆ. 1944 ರಲ್ಲಿ ಜನಿಸಿದ್ದ ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ನಿವೃತ್ತ ಶಾಲಾ ಮುಖ್ಯೋಪಾಧ್ಯಾಯರಾಗಿದ್ದ ಅವರು,ಜನ ಮೆಚ್ಚಿದ ಶಿಕ್ಷಕರು ಹಾಗೂ ಡಾ.ರಾಧಾಕೃಷ್ಣನ್ ಪ್ರಶಸ್ತಿ ಪಡೆದಿದ್ದರು. ವಿದ್ಯಾರ್ಥಿಗಳಿಗೆ ಗೌರವಯುತ ಶಿಕ್ಷಕರಾಗಿದ್ದರು. ಬೆಳಗಾವಿ ಜಿಲ್ಲೆಯ ರಾಯಭಾಗದಲ್ಲಿ ಸೋಮವಾರ ಅಂತ್ಯಕ್ರಿಯೇ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.





ಮೇಕೆದಾಟು ಜಲಾಶಯ ನಿರ್ಮಾಣಕ್ಕೆ ಕರ್ನಾಟಕವು ತಮಿಳುನಾಡು, ಕೇರಳ ಹಾಗೂ ಪುದುಚೆರಿಯಂತಹ ನೆರೆ ರಾಜ್ಯಗಳ ಒಪ್ಪಿಗೆ ಪಡೆಯುವ ಅಗತ್ಯವಿಲ್ಲ ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ಸ್ಪಷ್ಟಪಡಿಸಿದೆ.

## ಪಿಎಸ್‌ಸಿ ಹಗರಣ: ತನಿಖೆಗೆ ಆಗ್ರಹ

**ಬೆಂಗಳೂರು:** ಕೆಪಿಎಸ್‌ಸಿಯ ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ₹80 ಲಕ್ಷದವರೆಗೆ ಲಂಚ ಪಡೆದಿರುವ ಗಂಭೀರ ಆರೋಪಗಳಿದ್ದು, ಸಿಬಿಐ ಅಥವಾ ಕರ್ನಾಟಕ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಯವರ ನೇತೃತ್ವದ ಸ್ವತಂತ್ರ ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ಬಿಜೆಪಿ ನಿಯೋಗವು ಒತ್ತಾಯಿಸಿದೆ. ಈ ಸಂಬಂಧ ಮನವಿ ಸಲ್ಲಿಸಿ ಆಗ್ರಹಿಸಿದೆ. ಈ ಹಗರಣವು ಕರ್ನಾಟಕದ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳ ನಂಬಿಕೆಗೆ ದೊಡ್ಡ ಆಘಾತ ನೀಡಿವೆ. ಇಂತಹ ಸಂದರ್ಭದಲ್ಲಿ ಕೆಪಿಎಸ್‌ಸಿಯೇ ತನ್ನ ವಿರುದ್ಧದ ಆರೋಪಗಳನ್ನು ಆಂತರಿಕವಾಗಿ ತನಿಖೆ ನಡೆಸುವುದರಿಂದ ಸತ್ಯ ಹೊರಬರುವುದಿಲ್ಲ; ಸಾರ್ವಜನಿಕರ ವಿಶ್ವಾಸವೂ ಮೂಡುವುದಿಲ್ಲ ಎಂದು ಮನವಿ ತಿಳಿಸಿದೆ.

## ವಿದ್ಯಾರ್ಥಿ ಭವಿಷ್ಯದೊಂದಿಗೆ ಚೆಲ್ಲಾಟ ಬೇಡ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ದೇಶದಾದ್ಯಂತ ಚರ್ಚೆಗೆ ಗ್ರಾಸವಾಗಿರುವ ನೀಟ್ (NEET) ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವು ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಕರಿನೆರಳು ಬೀರಿದೆ ಎಂದು ಮಾಜಿ ಸಚಿವ ರಾಜಶೇಖರ ಬಿ. ಪಾಟೀಲ ಆತಂಕ ವ್ಯಕ್ತಪಡಿಸಿದರು.

ಈ ಕುರಿತು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ವತಿಯಿಂದ ಆಯೋಜಿಸಿದ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಅವರು, "ವಿದ್ಯಾರ್ಥಿಗಳು ವರ್ಷಗಳ ಕಾಲ ಕಠಿಣ ಪರಿಶ್ರಮ ಪಟ್ಟು ಪರೀಕ್ಷೆಗೆ ಸಿದ್ಧತೆ ನಡೆಸುತ್ತಾರೆ. ಆದರೆ ಪ್ರಶ್ನೆಪತ್ರಿಕೆ ಸೋರಿಕೆಯಂತಹ ಘಟನೆಗಳು ಅವರ ಶ್ರಮಕ್ಕೆ ಧಕ್ಕೆ ತರುತ್ತವೆ. ಇದು ಕೇವಲ ಪರೀಕ್ಷೆಯ ವೈಫಲ್ಯವಲ್ಲ, ಶಿಕ್ಷಣ ವ್ಯವಸ್ಥೆಯ ಮೇಲಿನ ಜನರ ವಿಶ್ವಾಸಕ್ಕೂ ದೊಡ್ಡ ಹೊಡೆತವಾಗಿದೆ" ಎಂದು ಹೇಳಿದರು.



ಪ್ರಶ್ನೆಪತ್ರಿಕೆ ಸೋರಿಕೆಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರು ಎಷ್ಟೇ ಪ್ರಭಾವಿಗಳಾಗಿದ್ದರೂ ಅವರನ್ನು ಕಾನೂನಿನ ಮುಂದೆ ತರಬೇಕು. ಕೇಂದ್ರ ಸರ್ಕಾರ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಪಾರದರ್ಶಕ ಮತ್ತು ವಿಶ್ವಾಸಾರ್ಹ ಪರೀಕ್ಷಾ ವ್ಯವಸ್ಥೆಯನ್ನು ರೂಪಿಸಬೇಕು ಎಂದು ಅವರು ಆಗ್ರಹಿಸಿದರು. ದೇಶದ ಯುವಜನತೆ ಮತ್ತು ವಿದ್ಯಾರ್ಥಿಗಳ ಭವಿಷ್ಯವನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬಾರದು. ಶಿಕ್ಷಣ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಮರುಸ್ಥಾಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ರಾಜಶೇಖರ ಬಿ. ಪಾಟೀಲ ಹೇಳಿದರು.

## ಎದೆ ಸೀಳಿದರೆ ನಾಲ್ಕಕ್ಷರವಿಲ್ಲ: ಪ್ರಿಯಾಂಕ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ನೀಟ್ ಹೋರಾಟಕ್ಕೆ ಸಂಬಂಧವಿಲ್ಲದೇ ಇರುವ ವಿಡಿಯೋವನ್ನು ಹಂಚಿಕೊಂಡು ಸಮುದಾಯವೊಂದರ ಮೇಲೆ ದ್ವೇಷ ಹೇಳಿಕೆ ನೀಡುತ್ತಿರುವ ಸಿಟಿ ರವಿ ಸೇರಿದಂತೆ ಬಿಜೆಪಿಗರ ಎದೆ ಸೀಳಿದರೆ 4 ಅಕ್ಷರಗಳು ಸಿಗುವುದಿಲ್ಲ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.



ವಿವಾದಾತ್ಮಕ ಹೇಳಿಕೆಗೆ ಸಂಬಂಧಿಸಿದಂತೆ ಸಿಟಿ ರವಿ ಅವರು ಪೊಲೀಸ್ ನೋಟಿಸ್ ಸ್ವೀಕಾರ ಮಾಡಲು ಒಪ್ಪದೆ, ತನಿಖೆಗೆ ಸಹಕಾರ ನೀಡರುವ ಜತೆಗೆ ಮತ್ತೊಂದು ವಿವಾದಾತ್ಮಕ ವಿಡಿಯೋವೊಂದನ್ನು ತಪ್ಪಾಗಿ ಪ್ರದರ್ಶಿಸಿದ್ದಾರೆ. ಈ ಹಿನ್ನೆಲೆ ಗೃಹ ಸಚಿವರು ಟ್ವೀಟ್ ಮಾಡಿ ಸಿಟಿ ರವಿ ಅವರ ವಿರುದ್ಧ ಕಿಡಿಕಾರಿದ್ದಾರೆ.

**ಗೃಹ ಸಚಿವರು ಏನಂದ್ರು?:** "ತಮ್ಮ ದ್ವೇಷದ ಹೇಳಿಕೆಯನ್ನು ಸಮರ್ಥಿಸಲು ಒಂದು ಸುಳ್ಳಿಗೆ ಮತ್ತೊಂದು ಸುಳ್ಳನ್ನು ಪೋಣಿಸುತ್ತಾ ಸುಳ್ಳಿನ ಹಾರವನ್ನೇ ಹಾಕಿಕೊಳ್ಳುವ ಸಿ.ಟಿ ರವಿಯಂತಹವರು ರಾಜಕೀಯ ವ್ಯವಸ್ಥೆಗೆ ಅಂಟಿರುವ ಕಳಂಕ. ಸಿಟಿ ರವಿ ಸೇರಿದಂತೆ ಬಿಜೆಪಿಗರ ಎದೆ ಸೀಳಿದರೆ ನಾಲ್ಕಕ್ಷರಗಳೂ ಸಿಗುವುದಿಲ್ಲ, ಜೊತೆಗೆ ನೈತಿಕತೆ, ಲಜ್ಜೆ, ಸತ್ಯ, ಬದ್ಧತೆ, ಆತ್ಮಸಾಕ್ಷಿಗಳೂ ಕಾಣುವುದಿಲ್ಲ" ಎಂದಿದ್ದಾರೆ.

ಕಳೆದ 3 ವರ್ಷಗಳಲ್ಲಿ ಯಾವುದೇ ಒಂದು ದೊಡ್ಡ ಮಟ್ಟದ ಕೋಮು ಕಲಹ ಸೃಷ್ಟಿಸಲು ಸಾಧ್ಯವಾಗದ ಕಾರಣ ಬಿಜೆಪಿಯವರು ಅಸಹನೀಯರಾಗಿ ವರ್ತಿಸುತ್ತಿದ್ದಾರೆ. ಯಾವುದೇ ವಿಷಯವಿರಲಿ, ಅದಕ್ಕೆ ಪಾಕಿಸ್ತಾನ ಮತ್ತು ಹಿಂದೂ–ಮುಸ್ಲಿಂ ವಿಷಯವನ್ನು ಜೋಡಿಸುವುದು ದ್ವೇಷಸಂಜಾತ ಬಿಜೆಪಿಯ ಹುಟ್ಟುಗುಣ, ಬಿಜೆಪಿಯವರ ಅಸ್ತಿತ್ವ ಇರುವುದೇ ಸಮಾಜ ವಿಭಜನೆಯಲ್ಲಿ ಎನ್ನುವುದನ್ನು ಪದೇ ಪದೇ ಹೇಳಬೇಕಿಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

# ಹೊಸಬರಿಗೆ ಸಚಿವಗಿರಿ

### ಸಂಪುಟ ವಿಸ್ತರಣೆ ಪಕ್ಕ | 15 ಹೊಸ ಮುಖಗಳಿಗೆ ಆದ್ಯತೆ | ಹಿರಿಯ ಐವರಿಗೆ ಸಚಿವ ಪದವಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಪುನರಾವರ್ತಿತ ವ್ಯಕ್ತಿಗಳಿಗೆ ಸಚಿವ ಸ್ಥಾನ. ನೀಡುವ ಬದಲಾಗಿ, 15 ಹೊಸ ಮುಖಗಳಿಗೆ ಆದ್ಯತೆ ನೀಡಬೇಕು.ಹಿರಿಯ ಐವರಿಗೆ ಸಚಿವ ಪದವಿ ನೀಡಬೇಕು ಎಂಬುದು ಕಾಂಗ್ರೆಸ್ ವರಿಷ್ಠರ ನಿಲುವಾಗಿದೆ. ವಿಧಾನಸಭೆಯ ಅಧ್ಯಕ್ಷ ಸ್ಥಾನಕ್ಕೆ ಹಿರಿಯರಾದ ಎಚ್.ಕೆ.ಪಾಟೀಲ್ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ. ಬಿ.ಆರ್.ಪಾಟೇಲ್, ಆರ್.ವಿ.ದೇಶಪಾಂಡೆ, ದಿನೇಶ್ ಗುಂಡೂರಾವ್, ಟಿ.ಬಿ.ಜಯಚಂದ್ರ, ಆಪಾಜಿ ನಾಡಗೌಡ ಅವರ ಹೆಸರುಗಳೂ ಪರಿಶೀಲನೆಯಲ್ಲಿವೆ.

**ವರಿಷ್ಠರ ಜೊತೆ ಚರ್ಚೆ:** ದೆಹಲಿಯಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಸಂಸದರ ಸಭೆ ನಡೆಸಿದ್ದು, ಕಾಂಗ್ರೆಸ್ ವರಿಷ್ಠ ನಾಯಕರ ಜೊತೆ ಚರ್ಚೆ ನಡೆಸಿ ಸಚಿವ ಸಂಪುಟ ವಿಸ್ತರಣೆಯ ಕುರಿತು ಅಂತಿಮ ನಿರ್ಣಯ ಕೈಗೊಳ್ಳಲಿದ್ದಾರೆ. ಟಿ.ಬಿ. ಜಯಚಂದ್ರ, ಕೆ.ಷಡಕ್ಷರಿ, ರಾಜೇಂದ್ರ ರಾಜಣ್ಣ, ಎಸ್.ಆರ್.ಶ್ರೀನಿವಾಸ್ ಲಾಬಿ ನಡೆಸಿದ್ದಾರೆ.

**ಆಕಾಂಕ್ಷಿಗಳ ದಂಡು:** ಬೆಳಗಾವಿ ಜಿಲ್ಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗಿಂತಲೂ ಹೆಚ್ಚು ಸಚಿವ ಸ್ಥಾನದ ಆಕಾಂಕ್ಷಿಗಳಿದ್ದಾರೆ. ಕಳೆದಬಾರಿ ವಿಧಾನಸಭಾ ಚುನಾವಣೆಗೂ ಮುನ್ನ ಖುದ್ದು ಡಿ.ಕೆ.ಶಿವಕುಮಾರ್ ಅವರೇ ಆಶ್ವಾಸನೆ ನೀಡಿ, ಯಲಕ್ಷ್ಮಣ ಸವದಿಯವರನ್ನು ಕಾಂಗ್ರೆಸ್ಗೆಕರೆ ತಂದಿದ್ದರು. ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವೆಯಾಗಿದ್ದ ಲಕ್ಷ್ಮೀ ಹೆಬ್ಬಾಳ್ಕರ್ ಡಿ.ಕೆ.ಶಿವಕುಮಾರ್ ಸಂಪುಟದಿಂದ ಹೊರಗಿರುವುದು ಗಮನ ಸೆಳೆದಿದೆ.




### ಪದವಿಗಾಗಿ ಹಿರಿಯರ ಭಾರಿ ಪೈಪೋಟಿ..!

ಸಚಿವ ಗಿರಿಗೆ ಭಾರಿ ಪೈಪೋಟಿ ನಡೆದಿದೆ. ಅಬ್ಬಯ್ಯ, ಸಂತೋಷ್ ಲಾಡ್, ಆರ್.ವಿ.ದೇಶಪಾಂಡೆ, ಮಾಂಕಾಳಸುಬ್ಬ ವೈದ್ಯ, ಶ್ರೀನಿವಾಸ್ ಮಾನೆ. ರುದ್ರಪ್ಪ ಲಮಾಣಿ, ಎಚ್.ಆರ್.ಗವಿಯಪ್ಪ, ಜೆ.ಎನ್.ಗಣೇಶ್, ಬಿ.ಎಂ.ನಾಗರಾಜ್, ಬಿ.ನಾಗೇಂದ್ರ, ನಾ.ರಾ.ಭರತರೆಡ್ಡಿ, ಶ್ರೀನಿವಾಸ್ ಎನ್.ಟಿ. ಮುಂತಾದವರು ಕುರ್ಚಿಗಾಗಿ ಸ್ಪರ್ಧೆಯಲ್ಲಿದ್ದಾರೆ.

ಈ ವಾರದೊಳಗೆ ಸಚಿವ ಸಂಪುಟ ವಿಸ್ತರಣೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಇಂದು ನಮ್ಮ ಸಂಸತ್ ಸದಸ್ಯರನ್ನು ಭೇಟಿ ಮಾಡುತ್ತಿದ್ದು, ಅವರಿಗೆ ರಾಜ್ಯದ ಬರ ಪರಿಸ್ಥಿತಿ, ನೀರಿನ ಪರಿಸ್ಥಿತಿ, ಕಾವೇರಿ, ಮಹದಾಯಿ, ಮೇಕೆದಾಟು, ಕೃಷ್ಣ ಸೇರಿದಂತೆ ಅನೇಕ ನೀರಾವರಿ ಯೋಜನೆಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕಾಗಿದೆ.
–ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ

### ಸಚಿವ ಪದವಿಗಾಗಿಯೇ ಸ್ಪರ್ಧೆ..!

ಚಿತ್ರದುರ್ಗದಿಂದ ಎನ್.ವೈ.ಗೋಪಾಲಕೃಷ್ಣ, ಟಿ.ರಘುಮೂರ್ತಿ, ದಾವಣಗೆರೆಯಿಂದ ಎಸ್.ಎಸ್ ಮಲ್ಲಿಕಾರ್ಜುನ, ಡಿ.ಜಿ.ಶಾಂತನಗೌಡ, ಶಿವಮೊಗ್ಗದಿಂದ ಬಿ.ಕೆ.ಸಂಗಮೇಶ್ವರ, ಮಧುಬಂಗಾರಪ್ಪ, ಗೋಪಾಲ ಕೃಷ್ಣ ಬೇಳೂರು, ಚಿಕ್ಕಮಗಳೂರಿನಿಂದ ಟಿ.ಡಿ.ರಾಜೇಗೌಡ, ನಯನ ಮೋಟಮ್ಮ, ಆರತಿ ಕೃಷ್ಣ, ಕೆ.ಎಸ್.ಆನಂದ್ ಸ್ಪರ್ಧೆಯಲ್ಲಿದ್ದಾರೆ.

### ದೆಹಲಿಯಲ್ಲಿ ಬೀಡು ಬಿಟ್ಟ ಗಣ್ಯರ ದಂಡು

ಶಾಸಕರಾದ ಕಡೂರ್ ಆನಂದ್, ಬಸವನಗೌಡ ತುರವೀಹಾಳ್, ರಾಘವೇಂದ್ರ ಹಿಟ್ನಾಳ್, ಸುಬ್ಬಾರೆಡ್ಡಿ, ಶಿವರಾಜ ತಂಗಡಗಿ, ಪ್ರಕಾಶ್ ಹುಕ್ಕೇರಿ, ಬಂಗಾರಪೇಟೆ ನಾರಾಯಣಸ್ವಾಮಿ, ಎ.ಆರ್. ಕೃಷ್ಣಮೂರ್ತಿ, ಪಿ.ಎಂ.ಆಶೋಕ್, ಅಪ್ಪಾಜಿ ನಾಡಗೌಡ, ಟಿ.ಬಿ.ಜಯಚಂದ್ರ, ಕೋನರೆಡಿ, ಜಿ.ಎಸ್.ಪಾಟೀಲ್ ಸೇರಿದಂತೆ ಅನೇಕರು ದೆಹಲಿಯಲ್ಲಿ ತಂಗಿದ್ದಾರೆ.

## ಪಿಡಿಒಗಳೊಂದಿಗೆ ಖಂಡ್ರೆ ವರ್ಚುವಲ್ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಮಳೆಯ ಕೊರತೆಯಿಂದ ಗ್ರಾಮೀಣ ಜನರು ತೆಲಂಗಾಣ,ಮಹಾರಾಷ್ಟ್ರಕ್ಕೆಗುಳೆಹೋಗುತ್ತಿರುವಬಗ್ಗೆ ವರದಿ ಬರುತ್ತಿದ್ದು, ವಲಸೆ ತಡೆಗೆ ವಿಬಿಜಿ ರಾಮ್ ಜಿಯಡಿ ಉದ್ಯೋಗನೀಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.

ಬೀದರ್ ಜಿಲ್ಲೆಯ ಎಲ್ಲ ಪಿಡಿಓಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಅವರು, ಜಿಲ್ಲೆಯಲ್ಲಿ ಹಲವು ಕೊಳವೆ ಬಾವಿಗಳು ಮಳೆಯ ಕೊರತೆಯಿಂದ ಬತ್ತಿಹೋಗಿದ್ದು, ಜಲ ಮರುಪೂರಣ ಮಾಡಲು ವಿಬಿಜಿ ರಾಮ್ ಜಿಯಡಿ ಉದ್ಯೋಗ ನೀಡಿ ಎಂದು ಸೂಚಿಸಿದರು. ವಿಬಿಜಿ ರಾಮ್‌ಜಿಯನ್ನು 60:40ರ ಅನುಪಾತದಲ್ಲಿ ಜು.1ರಿಂದ ರಾಜ್ಯದಲ್ಲಿ ಜಾರಿಗೆ ತರಲಾಗಿದ್ದು, ಕೇಂದ್ರ ಸರ್ಕಾರ ಮೊದಲ ತ್ರೈಮಾಸಿಕಕ್ಕೆ 1700 ಕೋಟಿ ರೂ., ರಾಜ್ಯ ಸರ್ಕಾರ 1200 ಕೋಟಿ ಹಣವನ್ನು ನೀಡಿದೆ. 1.5 ಕೋಟಿ ಮಾನವದಿನ ಉದ್ಯೋಗ ಸೃಷ್ಟಿ ಮಾಡುವಷ್ಟು ಅನುದಾನವಿದೆ ಎಂದರು.

## ಬಂಧನದ ಮೂಲಕ ಕಟ್ಟಿಹಾಕಲು ಯತ್ನ..!

• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ರವಿವಾರ ಚಿಕ್ಕಮಂಗಳೂರಿನ ತಮ್ಮ ನಿವಾಸದಲ್ಲಿಯೇ ಪೊಲೀಸ್ ಇಲಾಖೆ ಮೂಲಕ ನೋಟಿಸ್ ನೀಡಿ ನನ್ನನ್ನು ಬಂಧನ ಮಾಡುವ ಮೂಲಕ ಕಟ್ಟಿಹಾಕಲು ರಾಜ್ಯ ಸರ್ಕಾರ ಸಾಕಷ್ಟು ಪಿತೂರಿ ಮಾಡಿದ್ದು ಮುಸ್ಲಿಂ ಸಮುದಾಯವನ್ನು ಓಲೈಕೆ ಮಾಡುವಲ್ಲಿ ಬಂಡೆ ಸರ್ಕಾರ ನಿರತವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ. ಟಿ ರವಿ ಆರೋಪಿಸಿದರು. ಮುದಗಲ್ ಪಟ್ಟಣ ಸಮೀಪದ ಛತ್ತರ ಗ್ರಾಮದಲ್ಲಿ ಸೋಮುವಾರ ರೈತರೊಂದಿಗೆ ಬರದ ಸಂವಾದ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಈಗಲೂ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಲ್ಲಾನ ಹೇಳಿಕೆ ಬದ್ಧನಾಗಿದ್ದು ನನ್ನನ್ನು ಕಟ್ಟಿಹಾಕಲು ಆಡಳಿತರಾಢ ಸರ್ಕಾರ ಹುನ್ನಾರು ನಡೆಸಿದೆ ಎಂದರು.



## ರಾಷ್ಟ್ರೀಯ ಮಟ್ಟದ ಪ್ರತಿಭೆ ರೂಪಿಸುವ ಗುರುವು..!

• ಪರಶುರಾಮ ಕರಣಂ, ಭಾಲ್ಕಿ

ತಾಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ಕಳೆದ ಹಲವು ದಶಕಗಳಿಂದ ಗ್ರಾಮೀಣ ವಿದ್ಯಾರ್ಥಿಗಳ ಬದುಕಿಗೆ ಹೊಸ ದಿಕ್ಕು ನೀಡುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟ, ಸಂಸ್ಕಾರ ಹಾಗೂ ಸಾಧನೆಯ ಪರ್ಯಾಯವಾಗಿ ಗುರುತಿಸಿಕೊಂಡಿದೆ. ರಾಷ್ಟ್ರೀಯ ಮಟ್ಟದ ಪ್ರತಿಭೆಗಳನ್ನು ರೂಪಿಸುವ ಶೈಕ್ಷಣಿಕ ಕೇಂದ್ರವಾಗಿ ಹೊರಹೊಮ್ಮಿದೆ.

**ಸಾವಿರಾರು ಜನರಿಗೆ ಜ್ಞಾನದ ಬೆಳಕು:** ಹಿರೇಮಠ ಸಂಸ್ಥೆಯ ಆಶ್ರಯದಲ್ಲಿ ಆರಂಭವಾದ ಈ ಶಿಕ್ಷಣ ಸಂಸ್ಥೆ ಇಂದು ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನದ ಬೆಳಕಾಗಿ ಪರಿಣಮಿಸಿದೆ. ಕರ್ನಾಟಕ, ಮಹಾರಾಷ್ಟ್ರ ಹಾಗೂ ತೆಲಂಗಾಣ ಗಡಿಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಮೂಲಕ ವಿಶಿಷ್ಟ ಹೆಗ್ಗಳಿಕೆಯನ್ನು ಗಳಿಸಿದೆ. ಪೂಜ್ಯ ಡಾ. ಬಸವಲಿಂಗ ಪಟ್ಟದ್ದೇವರು, ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು ಹಾಗೂ ಸಂಸ್ಥೆಯ ಮಾರ್ಗದರ್ಶಕರ ದೂರದೃಷ್ಟಿ, ಶ್ರಮ ಮತ್ತು ಸೇವಾ ಮನೋಭಾವದಿಂದ ಚಿಕ್ಕದಾಗಿ ಆರಂಭವಾದ ಗುರುಕುಲ ಇಂದು ಅನೇಕ ಶಿಕ್ಷಣ ಸಂಸ್ಥೆಗಳ ಸಮೂಹವಾಗಿ ಬೆಳೆದು ನಿಂತಿದೆ.

**ಶ್ರೀ ಚನ್ನಬಸವೇಶ್ವರ ಗುರುಕುಲದ ಸಾಧನೆ**

**ಸಮಗ್ರ ಶಿಕ್ಷಣ ಪದ್ಧತಿ:** ಗುರುಕುಲದ ಶಿಕ್ಷಣ ವ್ಯವಸ್ಥೆ ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಾಗಿಲ್ಲ. ಶಿಸ್ತು, ಸಂಸ್ಕಾರ, ವ್ಯಕ್ತಿತ್ವ ವಿಕಾಸ, ನಾಯಕತ್ವದ ಗುಣಗಳು, ರಾಷ್ಟ್ರಪ್ರೇಮ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಸಮಗ್ರ ಶಿಕ್ಷಣ ಪದ್ಧತಿಯೇ ಇದರ ವಿಶೇಷತೆ. ಇದೇ ಕಾರಣದಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಿರಂತರವಾಗಿ ಯಶಸ್ಸಿನ ಪತಾಕೆ ಹಾರಿಸುತ್ತಿದ್ದಾರೆ.

ವಿಶೇಷವಾಗಿ ಜೆಇಇ ಮೆನ್ಸ್, ಜೆಇಇ ಅಡ್ವಾನ್ಸ್, ಐಐಟಿ, ನೀಟ್, ಎನ್‌ಐಟಿ, ಐಐಐಟಿ ಹಾಗೂ ಬಿಐಟಿಎಸ್ ಪ್ರವೇಶ ಪರೀಕ್ಷೆಗಳಲ್ಲಿ ಗುರುಕುಲದ ವಿದ್ಯಾರ್ಥಿಗಳು ವರ್ಷದಿಂದ ವರ್ಷಕ್ಕೆ ಗಮನಾರ್ಹ ಸಾಧನೆ ದಾಖಲಿಸುತ್ತಿದ್ದಾರೆ. ದೇಶದ ಪ್ರತಿಷ್ಠಿತ ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದು, ಅನೇಕ ಹಳೆಯ ವಿದ್ಯಾರ್ಥಿಗಳು ಇಂದು ದೇಶ–ವಿದೇಶಗಳಲ್ಲಿ ಇಂಜಿನಿಯರ್ಗಳು, ವೈದ್ಯರು, ವಿಜ್ಞಾನಿಗಳು ಹಾಗೂ ವಿವಿಧ ತಾಂತ್ರಿಕ ಕ್ಷೇತ್ರಗಳ ಪರಿಣಿತರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಸ್ಪರ್ಧೆಗಳಿಗೆ ಸಜ್ಜು:** ಈ ಯಶಸ್ಸಿನ ಹಿಂದೆ ಅನುಭವಿ ಶಿಕ್ಷಕರ ನಿಷ್ಠೆ, ವಿದ್ಯಾರ್ಥಿಗಳ ನಿರಂತರ ಪರಿಶ್ರಮ, ಪಾಲಕರ ಸಹಕಾರ ಹಾಗೂ ಸಂಸ್ಥೆಯ ವೈಜ್ಞಾನಿಕ ತರಬೇತಿ ಪದ್ಧತಿ ಪ್ರಮುಖ ಕಾರಣವಾಗಿದೆ. ಗ್ರಾಮೀಣ ವಿದ್ಯಾರ್ಥಿಗಳಲ್ಲಿರುವ ಅಸಾಮಾನ್ಯ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿ ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಿಗೆ ಸಜ್ಜುಗೊಳಿಸುವ ಕಾರ್ಯವನ್ನು ಗುರುಕುಲ ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಿದೆ.



ಶ್ರೀ ಚನ್ನಬಸವೇಶ್ವರ ಪಿಯು ವಿಜ್ಞಾನ ವಿದ್ಯಾರ್ಥಿಗಳು ಈ ವರ್ಷ ನೀಟ್ ಪರೀಕ್ಷೆಯಲ್ಲಿ ದಾಖಲೆಯ ಸಾಧನೆ ಮಾಡಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಂಸ್ಥೆಯ ಕೀರ್ತಿಯನ್ನು ಮತ್ತಷ್ಟು ಎತ್ತರಕ್ಕೆ ಏರಿಸಿರುವುದು ಹೆಮ್ಮೆಯ ಸಂಗತಿ. ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಉನ್ನತ ಅಂಕಗಳಿಸಿ ವೈದ್ಯಕೀಯ ಕ್ಷೇತ್ರಕ್ಕೆ ಅರ್ಹತೆ ಪಡೆದಿರುವುದು ಅವರ ನಿರಂತರ ಪರಿಶ್ರಮ, ಪೋಷಕರ ಸಹಕಾರ ,ಪ್ರಾಂಶುಪಾಲರ ದೂರದೃಷ್ಟಿಯ ನಾಯಕತ್ವ ಹಾಗೂ ಉಪನ್ಯಾಸಕರ ಸಮರ್ಪಿತ ಮಾರ್ಗದರ್ಶನದ ಫಲವಾಗಿದೆ.
–ಡಾ. ಶ್ರೀ ಬಸವಲಿಂಗ ಪಟ್ಟದೇವರು, ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು ಭಾಲ್ಕಿ

### ಜ್ಞಾನವೇ ಶಕ್ತಿ, ಸಂಸ್ಕಾರವೇ ವ್ಯಕ್ತಿತ್ವ

ಶೈಕ್ಷಣಿಕ ಸಾಧನೆಯ ಜೊತೆಗೆ ಮಾನವೀಯ ಮೌಲ್ಯಗಳು, ಸಾಮಾಜಿಕ ಬದ್ಧತೆ, ಸೇವಾ ಮನೋಭಾವ ಮತ್ತು ಉತ್ತಮ ನಾಗರಿಕರನ್ನು ರೂಪಿಸುವ ಧ್ಯೇಯವನ್ನೂ ಗುರುಕುಲ ಅಳವಡಿಸಿಕೊಂಡಿದೆ. "ಜ್ಞಾನವೇ ಶಕ್ತಿ, ಸಂಸ್ಕಾರವೇ ವ್ಯಕ್ತಿತ್ವ" ಎಂಬ ಧ್ಯೇಯವಾಕ್ಯದೊಂದಿಗೆ ಸಾಗುತ್ತಿರುವ ಈ ಸಂಸ್ಥೆ ಸಾವಿರಾರು ಕುಟುಂಬಗಳ ಆಶಾಕಿರಣವಾಗಿ ಬೆಳಗುತ್ತಿದೆ.

### ಕೇವಲ ಒಂದು ಶಿಕ್ಷಣ ಸಂಸ್ಥೆಯಲ್ಲ..!

ಶ್ರೀ ಚನ್ನಬಸವೇಶ್ವರ ಗುರುಕುಲವು ಗ್ರಾಮೀಣ ಪ್ರತಿಭೆಗಳ ಕನಸುಗಳಿಗೆ ರೆಕ್ಕೆ ನೀಡುವ, ರಾಷ್ಟ್ರ ನಿರ್ಮಾಣಕ್ಕೆ ಸಮರ್ಥ ಯುವಶಕ್ತಿಯನ್ನು ರೂಪಿಸುವ ಶೈಕ್ಷಣಿಕ ತೀರ್ಥಕ್ಷೇತ್ರವಾಗಿದೆ. ತನ್ನ ಶ್ರೇಷ್ಠ ಶೈಕ್ಷಣಿಕ ಸಾಧನೆಗಳ ಮೂಲಕ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಮತ್ತಷ್ಟು ಕೀರ್ತಿ ತಂದು, ಗ್ರಾಮೀಣ ಶಿಕ್ಷಣಕ್ಕೆ ಮಾದರಿಯಾಗಲಿ ಎಂಬುದು ಶಿಕ್ಷಣ ಪ್ರೇಮಿಗಳ ಆಶಯವಾಗಿದೆ.



ಸಂಸ್ಕಾರಯುತ ಶಿಕ್ಷಣದ ಜೊತೆಗೆ ಶಿಸ್ತು ಬದ್ಧ ತರಬೇತಿ ಮತ್ತು ಉತ್ತಮ ಬೋಧನ ವಿಧಾನದಿಂದ ಪ್ರತಿ ವರ್ಷವೂ ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ ದಾಖಲೆಯ ಸಾಧನೆಯನ್ನು ನಮ್ಮ ವಿದ್ಯಾರ್ಥಿಗಳು ಮಾಡುತ್ತಿದ್ದಾರೆ. ವೈದ್ಯಕೀಯ ಶಿಕ್ಷಣಕ್ಕೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ರೂಪಿಸುತ್ತಿರುವುದು ಗುಣಮಟ್ಟದ ಶಿಕ್ಷಣಕ್ಕೆ ಜೀವಂತ ಸಾಕ್ಷಿಯಾಗಿದೆ.
–ಶ್ರೀ ಗುರುಬಸವ ಪಟ್ಟದೇವರು, ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳು ಭಾಲ್ಕಿ.

## ಒಪ್ಪಂದ ಮುರಿದು ನಮ್ ಮೇಲೆ ಕೇಸ್ ಹಾಕ್ತಿದ್ದೀರ, ಮತ್ತೆ ಪ್ರತಿಭಟನೆ ಮಾಡ್ಬೇಕಾ? ಕೇಂದ್ರಕ್ಕೆ ಸಿಜೆಪಿ ಎಚ್ಚರಿಕೆ

# ಯುವಕರು ರಾಜಕಾರಣಿಗಳ ಗುಲಾಮರಂತೆ ನಡೆದುಕೊಳ್ಳಬಾರದು

ಯುವಕರು ದೇಶದ ಶಕ್ತಿ, ಸಮಾಜದ ಆಶಾಕಿರಣ ಮತ್ತು ನಾಳಿನ ನಾಯಕರು. ಅವರು ತಮ್ಮ ಚಿಂತನೆ, ವಿವೇಕ ಮತ್ತು ಸ್ವಾಭಿಮಾನದಿಂದ ಸಮಾಜವನ್ನು ಮುನ್ನಡೆಸಬೇಕೇ ಹೊರತು ಯಾವುದೇ ರಾಜ-ಕಾರಣಿಯ ಗುಲಾಮರಂತೆ ನಡೆದುಕೊಳ್ಳಬಾರದು.

## ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**



ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ತನ್ನ ಅಭಿಪ್ರಾಯವನ್ನು ಸ್ವತಂತ್ರವಾಗಿ ವ್ಯಕ್ತಪಡಿಸುವ ಹಕ್ಕಿದೆ. ರಾಜಕೀಯ ಪಕ್ಷಗಳನ್ನು ಬೆಂಬಲಿಸುವುದು ತಪ್ಪಲ್ಲ. ಆದರೆ ಅಂಧಾಭಿಮಾನ, ವ್ಯಕ್ತಿಪೂಜೆ ಮತ್ತು ಸ್ವಾರ್ಥಕ್ಕಾಗಿ ತಮ್ಮ ಸ್ವಾಭಿಮಾನವನ್ನು ಕಳೆದುಕೊಳ್ಳುವುದು ಯುವಕರ ಭವಿಷ್ಯಕ್ಕೆ ಹಾನಿಕಾರಕವಾಗಿದೆ.

ಇಂದು ಕೆಲ ಯುವಕರು ರಾಜಕೀಯ ನಾಯಕರ ಹೆಸರಿನಲ್ಲಿ ಜಗಳ, ದ್ವೇಷ ಮತ್ತು ಅಶಾಂತಿಗೆ ಕಾರಣವಾಗುತ್ತಿರುವುದು ವಿಷಾದನೀಯ. ನಾಯಕರಿಗೆ ಗೌರವ ನೀಡಿ, ಆದರೆ ನಿಮ್ಮ ಆತ್ಮಗೌರವ, ಮೌಲ್ಯಗಳು ಮತ್ತು ವಿವೇಕವನ್ನು ಎಂದಿಗೂ ಬಿಟ್ಟುಕೊಡಬೇಡಿ. ನಾಯಕರು ಬದಲಾಗಬಹುದು, ಪಕ್ಷಗಳು ಬದಲಾಗಬಹುದು; ಆದರೆ ನಿಮ್ಮ ವ್ಯಕ್ತಿತ್ವ ಮತ್ತು ಸಮಾಜದ ಮೇಲಿನ ಜವಾಬ್ದಾರಿ ಶಾಶ್ವತವಾಗಿರಬೇಕು.

ದೇಶಕ್ಕೆ ಬೇಕಾಗಿರುವುದು ಗುಲಾಮ ಮನೋಭಾವದ ಯುವಕರಲ್ಲ; ಪ್ರಶ್ನಿಸುವ, ವಿಚಾರಿಸುವ, ಸತ್ಯದ ಪರವಾಗಿ ನಿಲ್ಲುವ, ಸಮಾಜ ಸೇವೆಯಲ್ಲಿ ತೊಡಗುವ ಮತ್ತು ರಾಷ್ಟ್ರನಿರ್ಮಾಣದಲ್ಲಿ ಪಾಲ್ಗೊಳ್ಳುವ ಯುವಕರು. ರಾಜಕೀಯವು ಜನಸೇವೆಯ ಸಾಧನವಾಗಬೇಕು, ಯುವಕರನ್ನು ಬಳಸಿಕೊಳ್ಳುವ ಸಾಧನವಾಗಬಾರದು.

ಯುವಕರು ಶಿಕ್ಷಣ, ಕೌಶಲ್ಯ, ಉದ್ಯೋಗ, ಸಮಾಜಸೇವೆ ಮತ್ತು ರಾಷ್ಟ್ರಾಭಿವೃದ್ಧಿಯತ್ತ ಗಮನಹರಿಸಿದಾಗ ಮಾತ್ರ ಬಲಿಷ್ಠ ಭಾರತ ನಿರ್ಮಾಣ ಸಾಧ್ಯ. ಸ್ವಾಭಿಮಾನ, ಪ್ರಾಮಾಣಿಕತೆ ಮತ್ತು ವಿವೇಕವನ್ನು ಉಳಿಸಿಕೊಂಡು ಉತ್ತಮ ನಾಗರಿಕರಾಗಿ ಬೆಳೆಯುವುದು ಪ್ರತಿಯೊಬ್ಬ ಯುವಕನ ಕರ್ತವ್ಯವಾಗಿದೆ.

# ವಿಬಿ–ಜಿ ರಾಮ್ ಜಿ: ಕೂಲಿಕಾರರಿಗೆ ಉದ್ಯೋಗ ಕಲ್ಪಿಸಲು ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ವಿಜಯಪುರ**



ಗ್ರಾಮೀಣ ಪ್ರದೇಶದ ಪ್ರತಿಯೊಬ್ಬ ಅರ್ಹ ಕುಟುಂಬಕ್ಕೂ ಉದ್ಯೋಗಾವಕಾಶ ಕಲ್ಪಿಸುವುದು ಹಾಗೂ ಗ್ರಾಮಾಭಿವೃದ್ಧಿ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಅನುಷ್ಠಾನಗೊಳಿಸುವುದು ವಿಬಿ–ಜಿ ರಾಮ್ ಜಿ ಯೋಜನೆಯ ಪ್ರಮುಖ ಉದ್ದೇಶವಾಗಿದ್ದು, ಗ್ರಾಮ ಪಂಚಾಯಿತಿಗಳು ಹೆಚ್ಚಿನ ಕಾಮಗಾರಿಗಳನ್ನು ಗುರುತಿಸಿ ಕೂಲಿಕಾರರಿಗೆ ನಿರಂತರ ಉದ್ಯೋಗ ಒದಗಿಸಬೇಕು ಎಂದು ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳಾದ ಪ್ರಕಾಶ ವಡ್ಡರ ಅವರು ಅಧಿಕಾರಿಗಳಿಗೆ ಸೂಚಿಸಿದರು. ಬಸವನಬಾಗೇವಾಡಿ ತಾಲೂಕಿನ ಮುತ್ತಗಿ ಗ್ರಾಮ ಪಂಚಾಯಿತಿಗೆ ಸೋಮವಾರ ಭೇಟಿ ನೀಡಿದ ಅವರು, ವಿಬಿ–ಜಿ ರಾಮ್ ಜಿ ಯೋಜನೆಯಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಮಾಣವಾಗುತ್ತಿರುವ ಅಮೃತ ಸರೋವರ ಕಾಮಗಾರಿಯನ್ನು ಪರಿಶೀಲಿಸಿ, ಕಾಮಗಾರಿ ಸ್ಥಳದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೂಲಿಕಾರರೊಂದಿಗೆ ನೇರವಾಗಿ ಸಂವಾದ ನಡೆಸಿದ ಬಳಿಕ ಅವರು ಮಾತನಾಡಿದರು. ಕಾಮಗಾರಿ ಸ್ಥಳದಲ್ಲಿ ಶುದ್ಧ ಕುಡಿಯುವ ನೀರು ಹಾಗೂ ನೆರಳಿನ ವ್ಯವಸ್ಥೆ ಸಮರ್ಪಕವಾಗಿರುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದ ಅವರು, ಪ್ರತಿದಿನ 500ಕ್ಕೂ ಹೆಚ್ಚು ಕೂಲಿಕಾರರಿಗೆ ಉದ್ಯೋಗಾವಕಾಶ ಕಲ್ಪಿಸುವ ಗುರಿಯೊಂದಿಗೆ ಕಾಮಗಾರಿಗಳನ್ನು ಯೋಜಿತವಾಗಿ ಅನುಷ್ಠಾನಗೊಳಿಸುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕೆರೆಗಳು, ಕಾಲುವೆಗಳು ಸೇರಿದಂತೆ ಕೈಗೊಳ್ಳಬಹುದಾದ ಎಲ್ಲ ಕಾಮಗಾರಿಗಳನ್ನು ಗುರುತಿಸಿ ಯುಕ್ತಧಾರ ತಂತ್ರಾಂಶದಲ್ಲಿ ತ್ವರಿತವಾಗಿ ಅಳವಡಿಸಿ, ಕೂಲಿಕಾರರಿಗೆ ನಿರಂತರವಾಗಿ ಕೆಲಸ ಒದಗಿಸುವಂತೆ ತಾಂತ್ರಿಕ ಸಹಾಯಕರಿಗೆ ಸೂಚಿಸಿದರು. ಕಾಮಗಾರಿ ಸ್ಥಳದಲ್ಲಿ ಮಣ್ಣಿನ ಗುಣಮಟ್ಟ ಹಾಗೂ ಕಾಮಗಾರಿಯ ಪ್ರಗತಿಯನ್ನು ಖುದ್ದಾಗಿ ಪರಿಶೀಲಿಸಿ ಅಗತ್ಯ ಸಲಹೆಗಳನ್ನು ನೀಡಿದರು. ತ್ವರಿತವಾಗಿ ಕೂಲಿ ಪಾವತಿ: ವಿಬಿ–ಜಿ ರಾಮ್ ಜಿ ಯೋಜನೆಯಡಿ ಮುಂದಿನ ದಿನಗಳಲ್ಲಿ ಕೂಲಿ ಪಾವತಿಯಲ್ಲಿ ಯಾವುದೇ ವಿಳಂಬವಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದ್ದು, ನಿಗದಿತ ಅವಧಿಯಲ್ಲೇ ಕೂಲಿ ಮೊತ್ತವನ್ನು ಪಾವತಿಸಲಾಗುವುದು ಎಂದು ಕೂಲಿಕಾರರಿಗೆ ಭರವಸೆ ನೀಡಿದರು. ಪ್ರತಿಯೊಬ್ಬ ಕೂಲಿಕಾರರು ಪ್ರತಿದಿನ ಎರಡು ಬಾರಿ ಎನ್ ಎಂಎಂಎಸ್ ಆಪ್ ಮೂಲಕ ನೈಜ ಹಾಜರಾತಿ ದಾಖಲಿಸುವುದು ಕಡ್ಡಾಯವಾಗಿದ್ದು, ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಿದರು. ಕೂಲಿಕಾರರು ದುಡಿದು ಗಳಿಸಿದ ಕೂಲಿ ಮೊತ್ತವನ್ನು ಮಕ್ಕಳ ಶಿಕ್ಷಣ ಸೇರಿದಂತೆ ಕುಟುಂಬದ ಅಭಿವೃದ್ಧಿಗೆ ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು, ಮುಂದಿನ ದಿನಗಳಲ್ಲಿ ಇನ್ನಷ್ಟು ಕಾಮಗಾರಿಗಳನ್ನು ಆರಂಭಿಸಿ ಗ್ರಾಮೀಣರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲಾಗುವುದು ಎಂದು ಕೂಲಿಕಾರರಿಗೆ ಭರವಸೆ ನೀಡಿದರು. ಕಾಮಗಾರಿ ಸ್ಥಳದಲ್ಲಿ ಕೂಲಿಕಾರರೊಂದಿಗೆ ನೇರವಾಗಿ ಸಂವಾದ ನಡೆಸಿದ ಅವರು, ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ ಪರಿಹಾರ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಯೋಜನೆಯಡಿ ಪ್ರತಿಯೊಬ್ಬ ಅರ್ಹ ಕುಟುಂಬಕ್ಕೂ ನಿರಂತರವಾಗಿ ಉದ್ಯೋಗ ದೊರೆಯುವಂತೆ ಕಾಮಗಾರಿಗಳನ್ನು ಯೋಜಿತವಾಗಿ ರೂಪಿಸಬೇಕು ಎಂದು ತಿಳಿಸಿದರು. ಕೂಲಿಕಾರರಲ್ಲಿ ಯೋಜನೆಯ ನಿಯಮಗಳು, ಹಕ್ಕುಗಳು ಮತ್ತು ಸೌಲಭ್ಯಗಳ ಕುರಿತು ಜಾಗೃತಿ ಮೂಡಿಸುವ ಕೆಲಸವನ್ನು ಅಧಿಕಾರಿಗಳು ನಿರಂತರವಾಗಿ ಕೈಗೊಳ್ಳಬೇಕು. ಮಹಿಳಾ ಕೂಲಿಕಾರರು ಹಾಗೂ ವಯೋವೃದ್ಧ ಕಾರ್ಮಿಕರಿಗೆ ಅಗತ್ಯ ನೆರವು ಮತ್ತು ಅನುಕೂಲಕರ ವಾತಾವರಣ ಕಲ್ಪಿಸುವತ್ತ ವಿಶೇಷ ಗಮನಹರಿಸುವಂತೆ ಸೂಚಿಸಿದರು. ಕಾಮಗಾರಿಗಳ ಗುಣಮಟ್ಟ ಮತ್ತು ಪಾರದರ್ಶಕತೆಯನ್ನು ಕಾಪಾಡುವುದರ ಜೊತೆಗೆ ಕೂಲಿಕಾರರಿಗೆ ಯಾವುದೇ ರೀತಿಯ ಆಡಳಿತಾತ್ಮಕ ತೊಂದರೆ ಉಂಟಾಗದಂತೆ ಅಧಿಕಾರಿಗಳು ನಿಯಮಿತವಾಗಿ ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಿ ಮೇಲ್ವಿಚಾರಣೆ ನಡೆಸಬೇಕು ಎಂದು ನಿರ್ದೇಶನ ನೀಡಿದರು.

ಯೋಜನೆಯ ಮೂಲಕ ಗ್ರಾಮೀಣ ಕುಟುಂಬಗಳ ಜೀವನಮಟ್ಟ ಸುಧಾರಿಸುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದ್ದು, ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ಯೋಜನೆಯ ಸಂಪೂರ್ಣ ಪ್ರಯೋಜನ ತಲುಪುವಂತೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಶಾಲೆಯ ಮೂಲಸೌಕರ್ಯ ಪರಿಶೀಲನೆ: ಬಳಿಕ ಮುತ್ತಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದ ಉಪಕಾರ್ಯದರ್ಶಿಯವರು, ಶಾಲೆಯ ಮೂಲಸೌಕರ್ಯಗಳನ್ನು ಪರಿಶೀಲಿಸಿದರು. ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನಿರ್ಮಾಣಗೊಂಡ ಬಿಸಿಯೂಟದ ಅಡುಗೆ ಕೋಣೆಯನ್ನು ವೀಕ್ಷಿಸಿ ದಾಸ್ತಾನು ಸಂಗ್ರಹ ವಹಿಯನ್ನು ಪರಿಶೀಲಿಸಿದರು. ವಿದ್ಯಾರ್ಥಿಗಳ ಹಾಜರಾತಿಯನ್ನು ಅವಲೋಕಿಸಿ, ಮಕ್ಕಳ ಹಾಜರಾತಿ ಪ್ರಮಾಣ ಹೆಚ್ಚಿಸಲು ಶಾಲೆಯ ಮುಖ್ಯಗುರುಗಳು ಹಾಗೂ ಶಿಕ್ಷಕರು ವಿಶೇಷ ಗಮನಹರಿಸುವಂತೆ ಸೂಚಿಸಿದರು.

# ಗೋಮಾತೆಗೆ ರಾಷ್ಟ್ರಮಾತೆ ಸ್ಥಾನಮಾನಕ್ಕೆ ಆಗ್ರಹ: ಬೃಹತ್ ಜಾಗೃತಿ ಶೋಭಾಯಾತ್ರೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**



ಗೋಮಾತೆಗೆ "ರಾಷ್ಟ್ರಮಾತೆ" ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿ ಬೀದರ್ ನಗರದಲ್ಲಿ ಸೋಮವಾರ ಗೋಮಾತೆಯ ಗೌರವದ ಅಭಿಯಾನದ ವತಿಯಿಂದ ಬೃಹತ್ ಜಾಗೃತಿ ಶೋಭಾಯಾತ್ರೆ ಹಾಗೂ ಮನವಿ ಸಲ್ಲಿಕೆ ಕಾರ್ಯಕ್ರಮ ನಡೆಯಿತು.

ನಗರದ ಕೇಂದ್ರ ಬಸ್ ನಿಲ್ದಾಣದ ಸಮೀಪದ ದೇವಿ ಕಾಲೋನಿಯ ದೇವಿ ಮಂದಿರದಿಂದ ಬೆಳಿಗ್ಗೆ 11 ಗಂಟೆಗೆ ಆರಂಭವಾದ ಶೋಭಾಯಾತ್ರೆಯು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಜಿಲ್ಲಾಧಿಕಾರಿ ಕಚೇರಿಗೆ ತಲುಪಿತು. ಈ ವೇಳೆ ಗೋಭಕ್ತರ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕೃತ ಮನವಿ ಪತ್ರ ಹಾಗೂ ಅಭಿಯಾನದ ಮಾಹಿತಿಯನ್ನು ಪೆನ್‌ಡ್ರೈವ್ ಮೂಲಕ ಸಲ್ಲಿಸಲಾಯಿತು.

ಅಭಿಯಾನದ ಅಂಗವಾಗಿ ದೇಶಾದ್ಯಂತ 3 ಲಕ್ಷ ಸಹಿಗಳನ್ನು ಸಂಗ್ರಹಿಸಿ ಗೋಮಾತೆಗೆ "ರಾಷ್ಟ್ರಮಾತೆ" ಸ್ಥಾನಮಾನ ಘೋಷಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ ಎಂದು ಬಿಜೆಪಿ ಮುಖಂಡರಾದ ಈಶ್ವರಸಿಂಗ ಠಾಕೂರ ತಿಳಿಸಿದರು.

"ಗೋಮಾತೆ ಭಾರತೀಯ ಸಂಸ್ಕೃತಿ, ಸನಾತನ ಧರ್ಮ ಹಾಗೂ ಭಾರತೀಯರ ನಂಬಿಕೆಯ ಪ್ರತೀಕವಾಗಿದೆ. ಗೋಮಾತೆಗೆ ರಾಷ್ಟ್ರಮಾತೆಯ ಸ್ಥಾನಮಾನ ನೀಡುವುದು ದೇಶದ ಸಂಸ್ಕೃತಿಗೆ ಸಲ್ಲುವ ಗೌರವವಾಗಿದೆ" ಎಂದು ಅವರು ಹೇಳಿದರು.

ಅಭಿಯಾನದ ಜಿಲ್ಲಾ ಅಧ್ಯಕ್ಷ ವೆಂಕಟೇಶ ಶಾಲಿ ಚಿದ್ರಿ ಮಾತನಾಡಿ, ಈ ಅಭಿಯಾನವು ಜಿಲ್ಲಾ ಮಟ್ಟಕ್ಕೆ ಸೀಮಿತವಾಗದೆ ರಾಷ್ಟ್ರವ್ಯಾಪಿಯಾಗಿ ನಡೆಯಲಿದ್ದು, ಆಗಸ್ಟ್ 27ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಗುವುದು. ನಂತರ ಸೆಪ್ಟೆಂಬರ್ 27ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಮನವಿ ಪತ್ರ ಹಸ್ತಾಂತರಿಸಲಾಗುವುದು. ಅಗತ್ಯವಿದ್ದಲ್ಲಿ ನವದೆಹಲಿಯಲ್ಲಿ ಬೃಹತ್ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು. ಗೋಮಾತೆಗೆ ರಾಷ್ಟ್ರಮಾತೆಯ ಸ್ಥಾನಮಾನ ದೊರೆಯುವವರೆಗೆ ಹೋರಾಟ ಮುಂದುವರಿಯಲಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಸಿ.ಬಿ. ರೆಡ್ಡಿ, ಶ್ರೀಕಾಂತ್ ಮೋದಿ, ಸಂದೀಪ್ ಪಾಟೀಲ, ಮಲ್ಲಿಕಾರ್ಜುನ ನಂದಗೋಕರ್, ರಾಜಕುಮಾರ್ ಆರ್ಯ, ಧನರಾಜ ಪಾಂಡ್ರೆ, ರತಿನ್ ಕಮಲ್, ಮಾಣಿಕ್ ಮನ್ನಾಖೇಳಿ. ಓಂಪ್ರಕಾಶ್ ಆರ್ಯ, ನರ್ಸಿಂಗ್ ರಾವ್, ಗೋಪಿಕೃಷ್ಣ, ವಸಂತ ಮಾಲೆಗಾಂವ್, ಬಾಬು ಮೇತ್ರೆ, ಶಿವಾನಂದ ಮಾಳೆಗಾಂವ. ಅಮರ್ ಸಿಂಗ್ ಠಾಕೂರ್, ದತ್ತು ಹಾಲಕೊಡೆ, ಸೇರಿದಂತೆ ಹಲವಾರು ಗೋಭಕ್ತರು, ಸಾರ್ವಜನಿಕರು ಹಾಗೂ ಧರ್ಮಪ್ರೇಮಿಗಳು ಭಾಗವಹಿಸಿದ್ದರು.

# ಮಹಾಸಂಪರ್ಕ ಅಭಿಯಾನ ಎಸ್‌ಐಆರ್ ಮತದಾರರ ಪಟ್ಟಿ ಜಾಗೃತಿ



**ಬೀದರ್:** ಭಾರತೀಯ ಜನತಾ ಪಾರ್ಟಿ ಕರ್ನಾಟಕ ರಾಜ್ಯ ಘಟಕದ ಕರೆ ಮೇರೆಗೆ ಎಸ್‌ಐಆರ್ ಮತದಾರರ ಪಟ್ಟಿ ಪರಿಷ್ಕರಣೆ ಅಂಗವಾಗಿ ಹಮ್ಮಿಕೊಳ್ಳಲಾದ ಎರಡು ದಿನಗಳ ಮಹಾಸಂಪರ್ಕ ಅಭಿಯಾನದ ಹಿನ್ನೆಲೆಯಲ್ಲಿ ಬೀದರ್ ನಗರದ ವಾರ್ಡ್ ಸಂಖ್ಯೆ 18ರ ಬೂತ್ ಸಂ-ಖ್ಯೆ 156ರಲ್ಲಿ ಬಿಜೆಪಿ ಮುಖಂಡ ಈಶ್ವರ್‌ಸಿಂಗ್ ಠಾಕೂರ್ ಅವರ ಸಮ್ಮುಖದಲ್ಲಿ ಮನೆ ಮನೆಗೆ ಭೇಟಿ ನೀಡಿ ಮತದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಸಲಾಯಿತು.

ಅಭಿಯಾನದ ವೇಳೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಮತದಾರರನ್ನು ಭೇಟಿ ಮಾಡಿ ಎಸ್‌ಐಆರ್ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಮಾಹಿತಿ ನೀಡುವುದರೊಂದಿಗೆ ಮತದಾರರ ಪಟ್ಟಿಯಲ್ಲಿರುವ ವಿವರಗಳು ಹಾಗೂ ಸಂಬಂಧಿತ ನಮೂನೆಗಳನ್ನು ಪರಿಶೀಲಿಸಿದರು. ಮತದಾರರು ತಮ್ಮ ಹೆಸರು, ವಿಳಾಸ ಸೇರಿದಂತೆ ಅಗತ್ಯ ಮಾಹಿತಿಯನ್ನು ಪರಿಶೀಲಿಸಿಕೊಂಡು ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಈಶ್ವರ್‌ಸಿಂಗ್ ಠಾಕೂರ್, ಮಹಾನಗರ ಪಾಲಿಕೆ ಸದಸ್ಯೆ ಹಾಗೂ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಶ್ರೀಮತಿ ಉಲ್ಲಾಸಿನಿ ವಿಕ್ರಂ ಮುದ್ದಾಳೆ, ವಾರ್ಡ್ ಅಧ್ಯಕ್ಷ ಶ್ರೀ ವಿಕ್ರಂ ಮುದ್ದಾಳೆ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ಮಹಾನಂದ ಪಾಟೀಲ್, ಶ್ರೀಮತಿ ಸವಿತಾ, ಮಹಿಳಾ ಮೋರ್ಚಾ ಪದಾಧಿಕಾರಿಗಳು, ಬಿಎಲ್‌ಎ ಶ್ರೀ ರಾಜು ಪಾಟೀಲ್, ವಾರ್ಡ್ ಪ್ರಮುಖರಾದ ಶ್ರೀ ಚಂದ್ರಕಾಂತ್ ಜೋಪಟೆ, ಶ್ರೀ ಸಂಜು ಕುಮಾರ್ ಕೆಂಚೆ, ಶ್ರೀ ಧನರಾಜ್ ಮಡಿಕೆ, ಶ್ರೀ ವೈಜನಾಥ ಸ್ವಾಮಿ, ಶ್ರೀ ರವೀಂದ್ರ ಡಯೋಡೆ ಸೇರಿದಂತೆ ಹಲವಾರು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಆರ್ಬಿಟ್ ಸಂಸ್ಥೆಯಿಂದ ಗ್ರಾಮಗಳಲ್ಲಿ ವನಮಹೋತ್ಸವ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**







ತಾಲ್ಲೂಕಿನ ಗಾದಗಿ ಗ್ರಾಮದ ಮದರ ತೇರೆಸಾ ಪ್ರೌಢ ಶಾಲೆ ಹಾಗೂ ಹಿಪ್ಪಳಗಾಂವ್ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ ವತಿಯಿಂದ ವನಮಹೋತ್ಸವ ಕಾರ್ಯಕ್ರಮವನ್ನು ಸೋಮವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಸಿನೆಡುವ ಮೂಲಕ ಕಾರ್ಯಕ್ರಮ ಚಾಲನೆ ನೀಡಿ ಮಾತನಾಡಿದ ಆರ್ಬಿಟ್ ಸಂಸ್ಥೆಯ ಸಮುದಾಯ ಕಾರ್ಯಕರ್ತರಾದ ನೋಹಾನ್ ಕಂದಗುಳಕರ ಅವರು ವೃಕ್ಷಗಳು ಪರಿಸರ ಸಮತೋಲನ ಕಾಪಾಡುವುದರ ಜೊತೆಗೆ ಶುದ್ಧ ಗಾಳಿ, ನೆರಳು ಹಾಗೂ ಜೀವಿಗಳಿಗೆ ಆಶ್ರಯ ಒದಗಿಸುತ್ತವೆ. ನಾವು ಆರೋಗ್ಯಕರ ಜೀವನ ಸಾಗಿಸಬೇಕಾದರೆ ನಮಗೆ ಶುದ್ಧವಾದ ಗಾಳಿ ಅತ್ಯವಶ್ಯಕ. ಆದ್ದರಿಂದ ಪ್ರತಿಯೊಬ್ಬರು ಒಂದು ಗಿಡಗಳನ್ನು ನೆಟ್ಟು ಅದರ ಪೋಷಣೆ ಮಾಡಬೇಕು,

ನಾವು ಒಂದು ದಿವಸ ಆಹಾರ ಮತ್ತು ನೀರು ಇಲ್ಲದೆ ಬದುಕಬಹುದು ಆದರೆ ಗಾಳಿ ಇಲ್ಲದೇ ಮನುಷ್ಯ ಹಾಗೂ ಪ್ರಾಣಿ ಬದುಕಲು ಸಾಧ್ಯವಿಲ್ಲ, ನಾವು ಗಿಡಮರಗಳನ್ನು ಪೋಷಿಸುವ ಮೂಲಕ ಕಾಡು ಬೆಳಸಿ ನಾಡು ಉಳಿಸಿ ತತ್ವದಡಿ ಕೆಲಸ ಮಾಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಟ್ಟು, ಹಸಿರು ಪರಿಸರ ನಿರ್ಮಾಣ ಹಾಗೂ ಮುಂದಿನ ಪೀಳಿಗೆಗೆ ಉತ್ತಮ ಪ್ರಕೃತಿಯನ್ನು ಉಳಿಸುವ ಉದ್ದೇಶದಿಂದ ಎಲ್ಲರೂ ಪರಿಸರ ಸಂರಕ್ಷಣೆಗೆ ಕೈಜೋಡಿಸುವಂತೆ ಮನವಿ ಮಾಡಲಾಯಿತು. ಕಾರ್ಯಕ್ರಮದಲ್ಲಿ ಹಿಪ್ಪಳಗಾಂವ್ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ದೇವಿದಾಸ ಎಸ್ಕೊನೋರ್ ಶಿಕ್ಷಕಿ ಸುಹಾಸಿನಿ ಹಾಗೂ ಗಾದಗಿ ಗ್ರಾಮದ ಮದರ ತೇರೆಸಾ ಪ್ರೌಢ ಶಾಲೆಯ ಮುಖ್ಯಗುರುಗಳಾದ ಶೀಬಾರಾಣಿ, ಶಿಕ್ಷಕರಾದ ರಾಕೇಶ್, ವಿಕ್ಟೋರಿಯಾ, ಆರ್ಬಿಟ್ ಸಂಸ್ಥೆಯ ಸಮುದಾಯ ಕಾರ್ಯಕರ್ತರಾದ ಅರುಣ್ ಮುಠಗನಾಳೆ , ಶಾಲಾ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರಿದರು.

# ಭ್ರಷ್ಟಾಚಾರ ಅಳಿಸುವ ಉದ್ದೇಶ: ಶ್ರೀ



**ಬೀದರ್:** ಶಿವಸೇನೆಯ ಜಿಲ್ಲಾಧ್ಯಕ್ಷರಾಗಿ ಸುಧಾಕರ್ ಬಿರಾದಾರ್ ಆಯ್ಕೆಯಾಗಿದ್ದಾರೆ ಎಂದು ಶಿವಸೇನಾದ ರಾಜ್ಯಾಧ್ಯಕ್ಷ ಆಂದೋಲಾ ಶ್ರೀ ಅವರು ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ರವಿವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, 2025ರಲ್ಲಿ ರಾಜ್ಯದ 24 ಜಿಲ್ಲೆಗಳಲ್ಲಿ ಏಕನಾಥ್ ಶಿಂದೆ ಅವರ ಬಣದ ಶಿವಸೇನಾ ಘಟಕ ಪ್ರಾರಂಭ ಮಾಡಲಾಗಿದೆ. ಶಿವಸೇನಾದ ಬೀದರ್ ಜಿಲ್ಲೆಯ ಅಧ್ಯಕ್ಷರಾಗಿ ಸುಧಾ-ಕಾರ್ ಬಿರಾದಾರ್ ಅವರನ್ನು ಆಯ್ಕೆ ಮಾಡಲಾಗಿದೆ. ಶಿವಸೇನಾವು ದೇಶದ 25ರಿಂದ26 ರಾಜ್ಯಗಳಲ್ಲಿ ಕಾರ್ಯ ಪ್ರಾರಂಭ ಮಾಡಿದೆ. ಇದರ ಮುಖ್ಯ ಉದ್ದೇಶವೇ ಭ್ರಷ್ಟಾಚಾರವನ್ನು ಅಳಿಸಿ ಅಭಿವೃದ್ಧಿ ಹಾಗೂ ಹಿಂದುತ್ವ ಬೆಳೆಸುವುದಾಗಿದೆ ಎಂದರು.

ರಾಜ್ಯದಲ್ಲಿ ಮಳೆಯಾಗದೆ ರೈತರು ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಕರ್ನಾಟಕ ರಾಜ್ಯವನ್ನು ಬರಪೀಡಿತ ರಾಜ್ಯವೆಂದು ಘೋಷಣೆ ಮಾಡಬೇಕು. ಹಾಗೆಯೇ ಪ್ರತಿ ಏಕರೆ ಭೂಮಿಗೆ ಸುಮಾರು 25 ಸಾವಿರ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದ ಅವರು, ಕಳೆದ ವರ್ಷ ವಿಮೆ ಮಾಡಿದ ರೈತರಿಗೆ ಪೂರ್ಣ ಪ್ರಮಾಣದ ಹಣ ವರ್ಗಾವಣೆ ಮಾಡಲಿಲ್ಲ. ತಕ್ಷಣವೇ ವಿಮೆ ಹಣ ಬಿಡುಗಡೆ ಮಾಡಬೇಕು. ಹಾಗೆಯೇ ರೈತರ ಸಾಲ ಮನ್ನಾ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಶಿವಸೇನಾದ ನೂತನ ಜಿಲ್ಲಾಧ್ಯಕ್ಷರಾದ ಸುಧಾ-ಕರ್ ಬಿರಾದಾರ್, ಅಮೃತ್ ಪಾಟೀಲ್, ಗೋರಕನಾಥ್ ಮಡಿವಾಳ್, ನಾಗನಾಥ್ ವಾಡೆಕರ್, ಸಿಂಧುತಾಯಿ ಮಾನೆ, ನಂದಾತಾಯಿ ಹಾಗೂ ರಾಕೇಶ್ ಜಮಾದಾರ್ ಸೇರಿದಂತೆ ಇತರರು ಇದ್ದರು.

# ಯೋಧರ ತ್ಯಾಗ ಕೃತಜ್ಞತೆಯಿಂದ ಸ್ಮರಿಸಿ




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ವೀರಯೋಧರ ಕೆಚ್ಚೆದೆಯ ಹೋರಾಟದ ಫಲಶ್ರುತಿಯೇ ಕಾರ್ಗಿಲ್ ವಿಜಯವಾಗಿದೆ. ಪ್ರತಿಕೂಲಕರ ವಾತಾವರಣದಲ್ಲೂ ಹೋರಾಡಿ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಹೆಮ್ಮೆಯ ಸೈನಿಕರ ತ್ಯಾಗ–ಬಲಿದಾನವನ್ನು ವಿದ್ಯಾರ್ಥಿಗಳು ಕೃತಜ್ಞತೆಯಿಂದ ಸ್ಮರಿಸಬೇಕು ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು.

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್. ಆರ್.ನರಸಾಪೂರ ಕಲಾ ಮತ್ತು ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಎನ್‌ಸಿಸಿ ಘಟಕ ಆಯೋಜಿಸಿದ್ದ ಕಾರ್ಗಿಲ್ ವಿಜಯ ದಿವಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತೀಯ ವೀರಯೋಧರು ಜೀವದ ಹಂಗು ತೊರೆದು ಹೋರಾಡಿ ಶತ್ರು ಸೈನ್ಯವನ್ನು ಬಗ್ಗು ಬಡಿದು ದೇಶಕ್ಕೆ ಜಯ ತಂದುಕೊಟ್ಟದ್ದನ್ನು ನಾವು ಮರೆಯಬಾರದು. ಜನತೆ ನೆಮ್ಮದಿಯಿಂದ ಬದುಕುತ್ತಿದ್ದಾರೆ ಎಂದರೆ ಅದಕ್ಕೆ ಈ ವೀರಯೋಧರೇ ಕಾರಣ. ವಿದ್ಯಾರ್ಥಿಗಳು ಯೋಧರ ಬಗ್ಗೆ ಗೌರವ ಬೆಳೆಸಿಕೊಳ್ಳಬೇಕು. ಅವರ ಹೋರಾಟದಿಂದ ಪ್ರೇರಣೆ ಪಡೆಯಬೇಕುಎಂದರು. ಅಧ್ಯಯನದಜೊತೆಗೆ ವಿದ್ಯಾರ್ಥಿಗಳು ದೇಶಾಭಿಮಾನವನ್ನು ಬೆಳೆಸಿಕೊಂಡು ದೇಶರಕ್ಷಣೆಯಲ್ಲಿ ಮಹತ್ವದ ಪಾತ್ರವಹಿಸಬೇಕು ಎಂದು ನರಗುಂದ ಸಲಹೆ ನೀಡಿದರು.

ಮೊಂಬತ್ತಿ ಬೆಳಗಿಸಿ ಕಾರ್ಗಿಲ್ ಹುತಾತ್ಮರಿಗೆ ಗೌರವ ನಮನ ಸಲ್ಲಿಸಲಾಯಿತು. ಇದಕ್ಕೂ ಮೊದಲು ಮಹಾವಿದ್ಯಾಲಯದ ಆವರಣದಲ್ಲಿ ನಡೆದ ಜಾಥಾದಲ್ಲಿ ಎನ್‌ಸಿಸಿ ಕೆಡೆಟ್ಸ್ ಹಾಗೂ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ ಪಾಲ್ಗೊಂಡರು. ಎನ್‌ಸಿಸಿ ಅಧಿಕಾರಿ ಮಂಜುನಾಥ ಕೋರವಾರ ವಂದಿಸಿದರು.

# ರಸ್ತೆ ದುರಾವಸ್ಥೆ ಸಾರ್ವಜನಿಕರ ಪರದಾಟ,






• **ಮಲ್ಲಮ್ಮ ನುಡಿ ವಾರ್ತೆ ಹಳಿಯಾಳ**

ಪಟ್ಟಣದ ಅತ್ಯಂತ ಜನನಿಬಿಡವಾದ ಶಿವಾಜಿ ವೃತ್ತದಿಂದ ದೇಶಪಾಂಡೆ ನಗರದವರೆಗಿನ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಸಾವಿರಾರು ಜನರ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ.

ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯ ವಿದ್ಯಾಲಯ, ಬಸ್ ಡಿಪೋ, ಸಬ್ ಜೈಲ್, ಜಿ+2 ವಸತಿಗೃಹ, ಕೊಲ್ಹಾಪುರ ಬಡಾವಣೆ, ಗುಡ್ನಾಪುರ ಆಶ್ರಯ ಕಾಲೋನಿ ಹಾಗೂ ಮುಂದಿನ ಗ್ರಾಮಗಳಿಗೆ ಹೋಗುವ ಏಕೈಕ ರಸ್ತೆಯಾಗಿರುವ ಈ ರಸ್ತೆಯಲ್ಲಿ ಪ್ರತಿದಿನ ಸಾವಿರಾರು ವಿದ್ಯಾರ್ಥಿಗಳು, ನೌಕರರು, ಪಾದಚಾರಿಗಳು ಮತ್ತು ವಾಹನಗಳು ಸಂಚರಿಸುತ್ತವೆ.

ಆದರೆ ಪ್ರಸ್ತುತ ರಸ್ತೆಯುದ್ದಕ್ಕೂ ದೊಡ್ಡ-ದೊಡ್ಡ ಹೊಂಡಗಳು, ಕೆಸರು ಮತ್ತು ಇಕ್ಕೆಲಗಳಲ್ಲಿ ಬೆಳೆದ ಗಿಡಗಂಟಿಗಳಿಂದಾಗಿ ಸಂಚಾರ ಅತ್ಯಂತ ಕಷ್ಟಕರವಾಗಿದೆ. ವಿಶೇಷವಾಗಿ ಮಳೆಗಾಲದಲ್ಲಿ ವಿದ್ಯಾರ್ಥಿಗಳು ಮತ್ತು ಹಿರಿಯ ನಾಗರಿಕರು ಬೀಳುವ ಅಪಾಯವಿದೆ. ಬಸ್‌ಗಳ ಸಂಚಾರಕ್ಕೂ ತೊಂದರೆಯಾಗುತ್ತಿದೆ.

ಸಾರ್ವಜನಿಕರು ಈ ನಿತ್ಯದ ಸಮಸ್ಯೆಯಿಂದ ಬೇಸತ್ತು ಹೋಗಿದ್ದು, ಸಂಬಂಧಪಟ್ಟ ಪುರಸಭೆ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ತಕ್ಷಣ ತಾತ್ಕಾಲಿಕವಾಗಿಯಾದರೂ ರಸ್ತೆಯನ್ನು ದುರಸ್ತಿ ಮಾಡಿ, ಸಂಚಾರ ಸುಗಮಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ದಯವಿಟ್ಟು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಈ ವಿಷಯಕ್ಕೆ ತಕ್ಷಣ ಸಕಾರಾತ್ಮಕವಾಗಿ ಸ್ಪಂದಿಸಬೇಕೆಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

## ಕಾರ್ಗಿಲ್ ವಿಜಯ ದಿವಸ್ ಆಚರಣೆ




• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

ಜುಲೈ 27: ನಗರದ ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯಲ್ಲಿ ಜುಲೈ 26ರಂದು ಕಾರ್ಗಿಲ್ ವಿಜಯ ದಿವಸ್ ಅನ್ನು ಭಕ್ತಿಭಾವ ಹಾಗೂ ದೇಶಭಕ್ತಿಯ ವಾತಾವರಣದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ದೇಶದ ಗಡಿಗಳನ್ನು ಕಾಪಾಡಲು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಸೇವೆ ಸಲ್ಲಿಸಿದ ಸೈನಿಕರಾದ ರವಿಚಂದ್ರ ಹಾಗೂ ಕಿರಣ್ ಕುಮಾರ್ ಅವರಿಗೆ ಗೌರವ ಸಮರ್ಪಿಸಲಾಯಿತು. ಅವರ ಶೌರ್ಯ, ತ್ಯಾಗ ಮತ್ತು ದೇಶಸೇವೆಯನ್ನು ಸ್ಮರಿಸಿ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ. ಮಂಜು, ಉಪನ್ಯಾಸಕರು, ದೇವರಾಜ್ ಅರಸು ಪ್ರಥಮ ದರ್ಜೆ ಕಾಲೇಜು ಹುಣಸೂರು, ಇವರು ಕಾರ್ಗಿಲ್ ವಿಜಯ ದಿವಸದ ಮಹತ್ವ ಹಾಗೂ ಭಾರತೀಯ ಸೈನಿಕರ ಅಪ್ರತಿಮ ಧೈರ್ಯ, ತ್ಯಾಗ ಮತ್ತು ದೇಶಭಕ್ತಿಯ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ಸೈನಿಕರು ತೋರಿದ ಸಾಹಸವು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಸದಾ ಪ್ರೇರಣೆಯಾಗಿರುತ್ತದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಭಾಗವಹಿಸಿ ವೀರ ಸೈನಿಕರಿಗೆ ಗೌರವ ಸಲ್ಲಿಸಿದರು. ದೇಶಭಕ್ತಿ, ಸೈನಿಕರ ತ್ಯಾಗ ಮತ್ತು ರಾಷ್ಟ್ರಸೇವೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಉದ್ದೇಶದಿಂದ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು.

## ಗಾಣಿಗರ ಸಂಘದ ವತಿಯಿಂದ ಎರಡನೇ ವರ್ಷದ ಪ್ರತಿಭಾ ಪುರಸ್ಕಾರ



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

.ಜು.27–ತಾಲೂಕು ಸ್ವಾಭಿಮಾನಿ ಗಾಣಿಗರ ಸಂಘದ ವತಿಯಿಂದ ಎರಡನೇ ವರ್ಷದ ಪ್ರತಿಭಾ ಪುರಸ್ಕಾರ ಅಭಿನಂದನಾ ಹಾಗೂ ಸಂಘದ ಉದ್ಘಾಟನಾ ಕಾರ್ಯಕ್ರಮವನ್ನು ಹುಣಸೂರಿನ ಡಾ. ಬಿಆರ್ ಅಂಬೇಡ್ಕರ್ ಭವನದಲ್ಲಿ ನೆರವೇರಿಸಲಾಯಿತು..

ಹುಣಸೂರು ತಾಲೂಕು ಅಭಿಮಾನಿ ಗಾಣಿಗರ ಸಂಘದ ನಾಮಫಲಕವನ್ನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಮಡಿಲು ಗ್ರಾಮೀಣ ಅಭಿವೃದ್ಧಿ ಸೇವಾ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಮತಿ ತ್ರಿವೇಣಿ ರವರು ಉದ್ಘಾಟಿಸಿದರು...

ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಗಾಣಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಅನಂತುರವರು ದೀಪ ಬೆಳಗಿಸಿ ಉದ್ಘಾಟಿಸಿದರು..

ಈ ಕಾರ್ಯಕ್ರಮದಲ್ಲಿ.. ತಾಲೂಕು ಗಾಣಿಗರ ಸಂಘದ ಅಧ್ಯಕ್ಷರಾದ ಇಂಟೆಕ್ ರಾಜು ಅಖಿಲ ಕರ್ನಾಟಕ ಗಾಣಿಗರ ಸಂಘದ ಅಧ್ಯಕ್ಷರಾದ ರಾಜಶೇಖರ್.. ಕಾನೂನು ಮಾಪನ ಶಾಸ್ತ್ರ ಇಲಾಖೆ ಉಪ ನಿಯಂತ್ರಕರಾದ ಎಂ ಎಸ್ ಕುಮಾರ್ ಕೆಎಎಸ್.. ಮಾಜಿ ಹುಣಸೂರು ನಗರಸಭೆ ಅಧ್ಯಕ್ಷರಾದ ಶರವಣ..

ಮೈಸೂರು ಜಿಲ್ಲಾ ಗಾಣಿಗರ ಸಂಘದ ಅಧ್ಯಕ್ಷರಾದ ಎನ್ ಸಿ ಉಮೇಶ್.. ಶ್ರೀಮತಿ ಡಾಕ್ಟರ್ ಎಸ್ ಪೂರ್ಣಿಮಾ ಪ್ರಸುತಿ ಮತ್ತು ಸ್ತ್ರೀರೋಗ ತಜ್ಞರು ಪೂರ್ಣಿಮಾ ಆಸ್ಪತ್ರೆ ಮೈಸೂರು..

ಸಮಾಜ ಸೇವಕರು ಹಾಗೂ ಐಎಎಸ್ ಕೆಎಸ್ ತರಬೇತುದಾರರು ದೇವರಾಜು ಒಡೆ–ಯರ್.. ಸಮಾಜ ಸೇವಕರಾದ ರಾಜು ತರಿಕಲ್.. ಕಾರ್ಯಕ್ರಮದ ಆಯೋಜಕರಾದ.. ಕುಮಾರ್. ಸುಬ್ಬಣ್ಣ.. ರಮೇಶ್.. ಕೆಂಪರಾಜು.. ಶಿವಣ್ಣ..ಲಕ್ಷ್ಮಣ ಹಾಜರಿದ್ದರು

## ಮನೆಯ ಆವರಣದಲ್ಲಿ ಕಂಡುಬಂದ ಕಾಳಿಂಗ ಸರ್ಪ

• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ**

ತಾಲೂಕಿನ ಮಾರುಗದ್ದೆಯ ಗಣಪ ರಾಮ ಗೌಡ ಎನ್ನುವವರ ಮನೆಯ ಆವರಣದಲ್ಲಿ 12 ಅಡಿ ಉದ್ದದ ಕಾಳಿಂಗ ಸರ್ಪ ಕಂಡುಬಂದಿದ್ದು, ಇದರಿಂದಾಗಿ ಮನೆಯವರು ತೀರಾ ಆತಂಕಕ್ಕೆ ಒಳಗಾದ ಘಟನೆ ಸೋಮವಾರ ನಡೆದಿದೆ.

ತಕ್ಷಣ ಮನೆಯವರು ಉರಗ ಪ್ರೇಮಿ ಅವರ್ಸಾದ ಮಹೇಶ ನಾಯ್ಕ ಅವರಿಗೆ ಕರೆಮಾಡಿ ಮಾಹಿತಿ ನೀಡಿದರು. ಸ್ಥಳಕ್ಕೆ ಆಗಮಿಸಿದ ಮಹೇಶ ನಾಯ್ಕ ಅವರು ಈ ಕಾಳಿಂಗ ಸರ್ಪವನ್ನು ಅರಣ್ಯ ಇಲಾಖೆಯ ಸಹಕಾರದೊಂದಿಗೆ ಹಿಡಿದು ಅಭಯಾರಣ್ಯದಲ್ಲಿ ಬಿಡಲಾಯಿತು. ಹರಿಶ್ಚಂದ್ರ ನಾಯ್ಕ, ಅಭಿಷೇಕ ಶೆಟ್ಟಿ ಸಹಕರಿಸಿದರು.



## ಎಸ್ಐಆರ್ ಮಹಾ ಸಂಪರ್ಕ ಅಭಿಯಾನ

### ಕಮಲನಗರ ಪಟ್ಟಣದಲ್ಲಿ ಶಾಸಕ ಪ್ರಭು ಚವ್ಹಾಣರಿಂದ ಜನಜಾಗೃತಿ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ಎಸ್ಐಆರ್ ಮಹಾ ಸಂಪರ್ಕ ಅಭಿಯಾನದ ನಿಮಿತ್ತ ಔರಾದ(ಬಿ) ಶಾಸಕರು ಹಾಗೂ ಮಾಜಿ ಸಚಿವರಾದ ಪ್ರಭು ಬಿ. ಚವ್ಹಾಣ ಅವರು ಭಾನುವಾರ ಕಮಲನಗರ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಮನೆ ಮನೆಗೆ ಭೇಟಿ ನೀಡಿ ಎಸ್ಐಆರ್ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಮನೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕುಟುಂಬದ ಸದಸ್ಯರೊಂದಿಗೆ ಸಂವಾದ ನಡೆಸಿದ ಅವರು, ನಿಮ್ಮ ಮನೆಯಲ್ಲಿ ಎಷ್ಟು ಜನರಿದ್ದಾರೆ? ಎಷ್ಟು ಎನ್ಯುಮರೇಷನ್ ಅರ್ಜಿಗಳನ್ನು ಭರ್ತಿ ಮಾಡಿದ್ದೀರಿ? ಆನ್‌ಲೈನ್‌ನಲ್ಲಿ ಎಂಟ್ರಿ ಆಗಿದೆಯೇ? ಫಾರ್ಮ್ ಭರ್ತಿ ಅಥವಾ ಸಲ್ಲಿಕೆಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆ ಇದೆಯೇ? ಎಂದು ವಿಚಾರಿಸಿ ಮಾಹಿತಿ ಪಡೆದರು. ಜನರ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲೇ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯ ಮಹತ್ವವನ್ನು ವಿವರಿಸಿದ ಅವರು, ಅರ್ಹ ಪ್ರತಿಯೊಬ್ಬ ಮತದಾರರು ಎನ್ಯುಮರೇಷನ್ ಫಾರ್ಮ್ ಅನ್ನು ತಪ್ಪದೇ ಭರ್ತಿ ಮಾಡಿ ನಿಗದಿತ ಅವಧಿಯೊಳಗೆ ಸಲ್ಲಿಸುವಂತೆ ಮನವಿ ಮಾಡಿದರು.

ಸಂಚಾರದ ವೇಳೆ ಅನೇಕ ಮನೆಗಳಲ್ಲಿ ಎಸ್ಐಆರ್ ಎನ್ಯುಮರೇಷನ್ ಫಾರ್ಮ್‌ಗಳನ್ನು ಪಡೆದು ಅವುಗಳನ್ನು ಭರ್ತಿ ಮಾಡದೇ ಹಾಗೆಯೇ ಇಟ್ಟುಕೊಂಡಿರುವುದು ಗಮನಕ್ಕೆ ಬಂದಿದೆ. ಇಂತಹ ಮತದಾರರು ವಿಳಂಬ ಮಾಡದೇ ಫಾರ್ಮ್‌ಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಿ, ನಿಗದಿತ ಅವಧಿಯೊಳಗೆ ತಮ್ಮ ವ್ಯಾಪ್ತಿಯ ಬೂತ್ ಮಟ್ಟದ ಅಧಿಕಾರಿಗಳಿಗೆ (ಬಿಎ) ಸಲ್ಲಿಸಬೇಕು ಎಂದು ಅವರು ತಿಳಿಸಿದರು.

ಫಾರ್ಮ್ ಭರ್ತಿ ಮಾಡುವಲ್ಲಿ ಯಾವುದೇ ಗೊಂದಲ ಅಥವಾ ಸಮಸ್ಯೆ ಎದುರಾದರೆ ಬಿಎಗಳು, ಸಂಬಂಧಿತ ಅಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರ ಸಹಾಯ ಪಡೆಯುವಂತೆ ಸಲಹೆ ನೀಡಿದ ಅವರು, ಬಿಎ ಹಾಗೂ ಬಿಎ–2ಗಳು ಮನೆ ಮನೆಗೆ ಭೇಟಿ ನೀಡಿ ಪ್ರತಿಯೊಂದು ಅರ್ಜಿಯೂ ಸಲ್ಲಿಕೆಯಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ಮತದಾರರ ಹಕ್ಕುಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಎಸ್ಐಆರ್ ಅಭಿಯಾನ ಅತ್ಯಂತ ಮಹತ್ವದ್ದಾಗಿದ್ದು, ಈ ಅವಕಾಶವನ್ನು ಕಳೆದುಕೊಂಡರೆ ಮುಂದಿನ ದಿನಗಳಲ್ಲಿ ಮತದಾನದ ಹಕ್ಕಿನಿಂದ ವಂಚಿತರಾಗುವ ಸಾಧ್ಯತೆ ಇದೆ. ಆದ್ದರಿಂದ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ಪ್ರತಿಯೊಬ್ಬ ಅರ್ಹ ಮತದಾರರು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ತಮ್ಮ ಎನ್ಯುಮರೇಷನ್ ಫಾರ್ಮ್‌ಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷರಾದ ರಾಮಶೆಟ್ಟಿ ಪನ್ನಾಳೆ, ಮುಖಂಡರಾದ ಶಿವಾಜಿರಾವ ಪಾಟೀಲ ಮುಂಗನಾಳ, ಬಸವರಾಜ ಪಾಟೀಲ್, ರಂಗಾರಾವ ಜಾಧವ, ಶಿವಕುಮಾರ ವಡ್ಡೆ, ಶಿವು ಝುಲ್ಪೆ, ಪ್ರವೀಣ ಕಾರಬಾರಿ, ಭರತ ಕದಂ, ವಿಜಯಲಕ್ಷ್ಮಿ ಕೌಟಗೆ, ಬಂಟಿ ರಾಂಪೂರೆ ಸೇರಿದಂತೆ ಮುಖಂಡರು, ಕಾರ್ಯಕರ್ತರು ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

## ಕೃಷಿ ಪರಿಸರದಲ್ಲಿ ಪಕ್ಷಿಗಳು ವಿಶೇಷ ಉಪನ್ಯಾಸ ಕಾರ್ಯಕ್ರಮ ಯಶಸ್ವಿ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಕೊಪ್ಪಳ ನಗರದ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿ ಇತ್ತೀಚೆಗೆ (ಜು. 22ರಂದು) ಆಯೋಜಿಸಲಾಗಿದ್ದ 'ಕೃಷಿ ಪರಿಸರದಲ್ಲಿ ಪಕ್ಷಿಗಳು' ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರಾಯಚೂರಿನ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥರಾದ ಡಾ. ಎಂ. ಬಸವಣ್ಣಪ್ಪ ಅವರು, ಸಾವಯವ ಕೃಷಿ ಪದ್ಧತಿಯಲ್ಲಿ ಪಕ್ಷಿಗಳ ಪ್ರಾಮುಖ್ಯತೆ ಮತ್ತು ಅವುಗಳ ಕೊಡುಗೆಯ ಕುರಿತು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೊಪ್ಪಳ ಸಾವಯವ ಕೃಷಿಕರ ಬಳಗದ ಅಧ್ಯಕ್ಷರಾದ ಶ್ರೀಪಾದರಾಜ ಮುರುಡಿ ಅವರು ಸಾವಯವ ಕೃಷಿಯಲ್ಲಿ ಪಕ್ಷಿಗಳಿಂದಾಗುವ ಪ್ರಯೋಜನಗಳ ಕುರಿತು ರೈತರಿಗೆ ಮಾಹಿತಿ ನೀಡಿದರು.

ಮಾನ್ವಿ ನಗರದ ಪ್ರಸಿದ್ಧ ಪಕ್ಷಿ ಪ್ರೇಮಿ ಸಲಾವುದ್ದೀನ್ ಅವರು 'ಕೃಷಿಯಲ್ಲಿ ಪಕ್ಷಿಗಳ ಮಹತ್ವ' ಕುರಿತು ವಿಶೇಷ ಉಪನ್ಯಾಸ ನೀಡಿದರು. ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಮುಖ್ಯಸ್ಥರಾದ ಡಾ. ಬದರಿ ಪ್ರಸಾದ್ ಅವರು ಕೃಷಿ ಪರಿಸರ ವ್ಯವಸ್ಥೆಯಲ್ಲಿ ಪಕ್ಷಿಗಳು ವಹಿಸುವ ಪ್ರಮುಖ ಪಾತ್ರದ ಬಗ್ಗೆ ಸಮಗ್ರ ಮಾಹಿತಿ ನೀಡಿದರು. 'ಮೀನುಗಾರಿಕೆಯಲ್ಲಿ ಪಕ್ಷಿಗಳ ನಿರ್ವಹಣೆ' ಕುರಿತು ಕೊಪ್ಪಳ ಮೀನುಗಾರಿಕೆಯ ಉಪನಿರ್ದೇಶಕರಾದ ಶ್ರೀನಿವಾಸ ಕುಲಕರ್ಣಿ ಅವರು ಮಾತನಾಡಿ, ಮೀನುಗಾರಿಕೆ ಕ್ಷೇತ್ರದಲ್ಲಿ ಪಕ್ಷಿಗಳನ್ನು ಹೇಗೆ ಪರಿಣಾಮಕಾರಿಯಾಗಿ ನಿರ್ವಹಿಸಬೇಕು ಎಂಬುದರ ಬಗ್ಗೆ ರೈತರಿಗೆ ಉಪಯುಕ್ತ ಸಲಹೆಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಕೃಷಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ವಿಜ್ಞಾನಿಗಳು, ರೈತರು, ಪಕ್ಷಿ ಪ್ರೇಮಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಪಶುವೈದ್ಯಾಧಿಕಾರಿಗಳ ನೇಮಕಾತಿಯ ಅಂತಿಮ ಆಯ್ಕೆ ಪಟ್ಟಿಗೆ ತಾತ್ಕಾಲಿಕ ತಡೆ ಹಾಗೂ ಆಂತರಿಕ ತನಿಖಾ ಉಪಸಮಿತಿ ರಚನೆ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಜುಲೈ 26, ಪಶುವೈದ್ಯಾಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ 2026ರ ಜುಲೈ 24ರಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರಿನ ಹಿನ್ನೆಲೆಯಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳು ಮತ್ತು ವಿವಿಧ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ವರದಿಗಳನ್ನು ಗಂಭೀರವಾಗಿ ಪರಿಗಣಿಸಿರುವ ಕರ್ನಾಟಕ ಲೋಕಸೇವಾ ಆಯೋಗವು 2026ರ ಜುಲೈ 26ರಂದು ತುರ್ತು ಸಭೆ ನಡೆಸಿದೆ. ಸಾರ್ವಜನಿಕರ ವಿಶ್ವಾಸವನ್ನು ಕಾಪಾಡುವ ಉದ್ದೇಶದಿಂದ ಹಾಗೂ ಆರೋಪಗಳ ಗಂಭೀರತೆಯನ್ನು ಮನಗಂಡು ಆಯೋಗವು ಕೆಳಕಂಡ ಮಹತ್ವದ ನಿರ್ಧಾರಗಳನ್ನು ಕೈಗೊಂಡಿದೆ ಎಂದು ಆಯೋಗದ ಕಾರ್ಯದರ್ಶಿ ಶ್ರೀಮತಿ ಕೆ. ಜ್ಯೋತಿ ಅವರು ತಿಳಿಸಿದ್ದಾರೆ. ಪ್ರಾಥಮಿಕ ಮಾಹಿತಿಯ ಪರಿಶೀಲನೆ: 2026ರ ಜುಲೈ 24ರಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರು, ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳು ಹಾಗೂ 2026ರ ಜುಲೈ 25ರಂದು ಪೊಲೀಸ್ ಇಲಾಖೆ ನೀಡಿರುವ ಪ್ರಾಥಮಿಕ ಮಾಹಿತಿ ವರದಿಯನ್ನು (FIR) ಆಯೋಗವು ಗಂಭೀರವಾಗಿ ಪರಿಗಣಿಸಿದೆ. ಆಂತರಿಕ ತನಿಖಾ ಉಪಸಮಿತಿ ರಚನೆ: ಆರೋಪಗಳ ಗಂಭೀರತೆಯನ್ನು ಗಮನದಲ್ಲಿಟ್ಟುಕೊಂಡು ಆಯೋಗದ ಹಿರಿಯ ಸದಸ್ಯರ ಅಧ್ಯಕ್ಷತೆಯಲ್ಲಿ ಆಂತರಿಕ ತನಿಖಾ ಉಪಸಮಿತಿಯನ್ನು ರಚಿಸಲಾಗಿದೆ. ಒಂದು ವಾರದಲ್ಲಿ ವರದಿ ಸಲ್ಲಿಕೆ: ಪರೀಕ್ಷಾ ಪ್ರಕ್ರಿಯೆಯ ಪ್ರತಿಯೊಂದು ಹಂತ ಹಾಗೂ ಸಂಬಂಧಿತ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ವಾಸ್ತವಾಂಶಗಳ ಕುರಿತ ವಿವರವಾದ ವರದಿಯನ್ನು ಒಂದು ವಾರದೊಳಗೆ ಆಯೋಗ–ಕ್ಕೆ ಸಲ್ಲಿಸುವಂತೆ ಉಪಸಮಿತಿಗೆ ನಿರ್ದೇಶನ ನೀಡಲಾಗಿದೆ. ತನಿಖೆಗೆ ನೋಡಲ್ ಅಧಿಕಾರಿಗಳ ನೇಮಕ: ತನಿಖಾ ಕಾರ್ಯಕ್ಕೆ ಅಗತ್ಯವಾದ ಆಡಳಿತಾತ್ಮಕ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಲು ಕೆಪಿಎಸ್‌ಸಿ ಕಾರ್ಯದರ್ಶಿಯನ್ನು ಹಾಗೂ ಅಗತ್ಯ ಕಾನೂನು ಸಲಹೆ ನೀಡಲು ಕಾನೂನು ವಿಭಾಗದ ಮುಖ್ಯಸ್ಥರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ. ಅಂತಿಮ ಆಯ್ಕೆ ಪಟ್ಟಿಗೆ ತಾತ್ಕಾಲಿಕ ತಡೆ: ಆಂತರಿಕ ತನಿಖಾ ಉಪಸಮಿತಿ ತನ್ನ ಅಂತಿಮ ವರದಿಯನ್ನು ಸಲ್ಲಿಸುವವರೆಗೆ, 2026ರ ಜುಲೈ 17ರಂದು ಪ್ರಕಟಿಸಲಾಗಿದ್ದ ಪಶುವೈದ್ಯಾಧಿಕಾರಿಗಳ ಅಂತಿಮ ಆಯ್ಕೆ ಪಟ್ಟಿಯ ಜಾರಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ಆಯೋಗವು ನಿರ್ಧರಿಸಿದೆ

ನೋಂದಣಿ ಸಂಖ್ಯೆ : ಸಂನಿರಾ/ವಿ–1/ಸೌಕಾ/ನೊ–2531/2012–13

**ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿಯಮಿತ**

# ಫ್ಲ್ಯಾಟ್ ನಂ. 202, ಎರಡನೇ ಮಹಡಿ 5ನೇ ಅಡ್ಡರಸ್ತೆ, ನಂದಿ ಕಾಲೋನಿ, ಕೆ.ಇ.ಬಿ. ರೋಡ, ಬೀದರ. – 585 401. ಮೊಬೈಲ್ : 9738638276.

**15ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ್**

ಸ್ಥಳ: ಸಾಮರ್ಥ್ಯ ಕೇಂದ್ರ ನಂದಿ ಕಾಲೋನಿ, ಬೀದರ. ದಿನಾಂಕ: 15–08–2026

ಇವರಿಗೆ,

ಸಹಕಾರಿಯ ಹೆಸರು_______________

ಆತ್ಮೀಯ ಸಹಕಾರಿಯ ಸದಸ್ಯ ಬಂಧುಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ 15ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 15–08–2026 ರಂದು ಶನಿವಾರ ಮಧ್ಯಾಹ್ನ 12–30 ನಿಮಿಷಕ್ಕೆ ಬೀದರ ನಗರದ ಸಾಮರ್ಥ್ಯ ಕೇಂದ್ರ ನಂದಿ ಕಾಲೋನಿ, ಬೀದರನಲ್ಲಿ ಕರೆಯಲಾಗಿದೆ. ಕಾರಣ ತಾವು ತಪ್ಪದೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಕೋರಿದೆ.

**ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಬೇಕಾದ ವಿಷಯಗಳು :**

1) 15ನೇ ಸಾಮಾನ್ಯ ಸಭೆಯ ನೋಟಿಸ ಓದಿ ದಾಖಲಿಸುವುದು.
2) 14ನೇ ಸಾಮಾನ್ಯ ಸಭೆಯ ನಡಾವಳಿ ಮತ್ತು ನಿರ್ಣಯಗಳನ್ನು ಓದಿ ಅಂಗೀಕರಿಸುವುದು.
3) 2025–26ನೇ ಸಾಲಿನ ಲೆಕ್ಕಪರಿಶೋಧನ ವರದಿಯನ್ನು ಓದಿ ದಾಖಲಿಸುವುದು.
4) 2025–26ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸಿ ಅನುಮೋದನೆ ಪಡೆಯುವುದು.
5) 2026–27, 2027–28, 2028–29ನೇ ಸಾಲಿನ ಕ್ರಿಯಾ ಯೋಜನೆ ಅನುಮೋದನೆ.
6) 2025–26ನೇ ಸಾಲಿನ ಸದಸ್ಯತ್ವ ಪಡೆದ ಸಹಕಾರಿಗಳ ಪಟ್ಟಿಯ ಅನುಮೋದನೆ.
7) 2026–27, 2027–28, 2028–29ನೇ ಸಾಲಿನ ಅಂದಾಜು ಆಯ್ಯ–ವ್ಯಯ ಮಂಜುರು ಮಾಡುವ ಕುರಿತು.
8) 2026–27ನೇ ಸಾಲಿನ ಲೆಕ್ಕ ಪರಿಶೋಧಕರ ನೇಮಕಾತಿ ಕುರಿತು.
9) ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ಸನ್ಮಾನ.
10) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

ದಿನಾಂಕ : 24–07–2026
ಸ್ಥಳ : ಬೀದರ

ಅಧ್ಯಕ್ಷರ ಆದೇಶದ ಮೇರೆಗೆ
ಸಹಿ/–
**ಅಮೃತ ಹೊಸಮನಿ**
ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು

**ವಿಶೇಷ ಸೂಚನೆ :**

1) ಸಾಮಾನ್ಯ ಸಭೆಯಲ್ಲಿ ಯಾವುದೇ ವಿಷಯ ಚರ್ಚಿಸಲು ಅಪೇಕ್ಷಿಸುವ ಸಹಕಾರಿ ಸದಸ್ಯರು ದಿನಾಂಕ : 10–08–2026ರ ಒಳಗಾಗಿ ಲಿಖಿತ ರೂಪದಲ್ಲಿ ಸಹಕಾರಿಗೆ ತಲುಪಿಸತಕ್ಕದ್ದು.
2) ಸಾಮಾನ್ಯ ಸಭೆಗೆ ಭಾಗವಹಿಸುವ ಪ್ರತಿನಿಧಿಗಳು ತಮ್ಮ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಿಂದ ದೃಢೀಕೃತ ಪತ್ರದೊಂದಿಗೆ ಭಾಗವಹಿಸುವುದು.

IN THE COURT OF THE SENIOR CIVIL JUDGE & JMFC AT BASAVAKALYAN
Crl. Misc. No.834/2026

**Petitioner:**
P1. Santosh, P2.Kamala, p3.Gorakh @Gorakhanath, P4. Naganath, P5. Sunitha, P6. Ranjana, P7. Rekha all are r/o. Anandwadi H, Tq. Hulsoor

V/S

**Respondent:**
The Tahasildar, Basavakalyan.

**Claim: Issue of Death Certificate of the Father of petitioner No.1.**
**Petition under sec. 13(3) of Birth and Death Registration Act, 1969**
**PAPER PUBLICATION**

This is to inform to the public at large, the Father of the petitioners by name "Arjunkamble s/o Sankara", who was died on 01/11/2021, in his house at village: Anandwadi H, Tq. Hulsoor, Dist; Bidar leaving behind the petitioner, as his son The said P1. Santosh and 6 anothers has filed the above case before the Hon'ble Senior Civil Judge Court at Basavakalyan for issuing direction to the respondent for issue of death certificate. if anybody got objection for the same, they are hereby requested to come and appear before the Hon'ble court on or before 27/08/2026 at 11-00 AM.

**By Order of the Court**
**Chief Ministerial Officer**
**Date:-24.07.2026**
**Senior Civil Judge & JMFC Court Basavakalyan.**

PAPER PUBLICATION
IN THE COURT OF SENIOR CIVIL JUDGE AT HUMNABAD
O.S No.224/2024

**Plaintiff :**
Mainabai & others

// Vs //

**Defendants :**
Kashinath & others

**Sub:-Suit for partition and separate possession.**

To,
D1(a) - Nagamma D/o Kashinath W/o Shivkumar
Age 40 years, Occu: Agriculture,
D 2- Karbasappa S/p Basappa @ Basawaraj
Age-65 years, Occu: Agriculture,
D 3(c)- Shilpa D/o Late Shivkumar Malshetty
Age: 28 years, Occu: Household.
D 4- Smt. Rajeshwari W/o Gurulingappa Udabnallikar
Age: 45 years, Occu: Household & Agriculture.

Whereas, the plaintiff have filed the suit against the defendants for suit for partition and separate possession have taken steps your appearance in the proceeding several times but summons could not be served. Therefore you are hereby summoned to appear before this Hon'ble court in person or through your pleader duly instructed and able to answer all material questions relating to the claim of the plaintiff on the day of 07-09-2026 at 10.30 AM answer the claim of the plaintiff and you are directed to produce all such documents upon which you intend to rely in support of your defense.

Take notice that in default of your appearance on the day before mentioned the suit will be heard and determined in your absence.

Given under my hand and the seal of the court, on 22nd day of July-2026.

**// By Order of the Court//**
**C.M.OSenior Civil Judge & JMFC Court Humnabad.**

# ಚಾಲಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಕರ್ನಾಟಕ ಚಾಲಕರ ಒಕ್ಕೂಟದಿಂದ ಜಿಲ್ಲಾಡಳಿತ ಹಾಗೂ ಶಿಕ್ಷಣ ಇಲಾಖೆಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಖಾಸಗಿ ಶಾಲಾ ವಾಹನ ಚಾಲಕರ ಕನಿಷ್ಠ ವೇತನ ಹಾಗೂ ಮೂಲಸೌಕರ್ಯಗಳ ಈಡೇರಿಕೆಗೆ ಆಗ್ರಹಿಸಿ ಹಾಗೂ ಮಹಿಂದ್ರಾ ಫೈನಾನ್ಸ್ ಕಂಪನಿಯಿಂದ ಆಟೋ ಚಾಲಕರಿಗೆ ನೀಡಲಾಗುತ್ತಿರುವ ಕಿರುಕುಳವನ್ನು ಖಂಡಿಸಿ, ಕರ್ನಾಟಕ ಚಾಲಕರ ಒಕ್ಕೂಟ ಯಾದಗಿರಿ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧ್ಯಕ್ಷ ಬಸ್ಸುಗೌಡ ಚಟ್ನಳ್ಳಿ ಅವರ ನೇತೃತ್ವದಲ್ಲಿ ಜಿಲ್ಲಾಡಳಿತ ಮತ್ತು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಮನವಿ ಸಲ್ಲಿಕೆ ಬಳಿಕ ಮಾತನಾಡಿದ ಒಕ್ಕೂಟದ ಜಿಲ್ಲಾಧ್ಯಕ್ಷ ಬಸ್ಸುಗೌಡ ಚಟ್ನಳ್ಳಿ, ಅವರು ಯಾದಗಿರಿ ಜಿಲ್ಲೆಯ ಖಾಸಗಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುವ ವಾಹನ ಚಾಲಕರಿಗೆ ಕಾನೂನುಬದ್ಧವಾಗಿ ಮತ್ತು ಮಾನವೀಯತೆಯ ದೃಷ್ಟಿಯಿಂದ ಸೂಕ್ತ ಸೌಲಭ್ಯಗಳನ್ನು ಕಲ್ಪಿಸಬೇಕು. 1 ವರ್ಷಕ್ಕೂ ಹೆಚ್ಚು ಅನುಭವವಿರುವ ಚಾಲಕರಿಗೆ ತಿಂಗಳಿಗೆ ಕನಿಷ್ಠ 15,000 ರೂ. ನಿಂದ 20,000 ರೂ. ವರೆಗೆ ಕಡ್ಡಾಯ ವೇತನ ನಿಗದಿಪಡಿಸಬೇಕು, ಪಿಎಫ್ (PF), ಇಎ (ESI) ಹಾಗೂ ಹಬ್ಬದ ದಿನಗಳಲ್ಲಿ ಬೋನಸ್ ಸೌಲಭ್ಯ ನೀಡಬೇಕು ಎಂದು ಆಗ್ರಹಿಸಿದರು.

ಚಾಲಕರ ಮಕ್ಕಳಿಗೆ ಅವರು ಕರ್ತವ್ಯ ನಿರ್ವಹಿಸುವ ಶಾಲೆಯಲ್ಲಿಯೇ ಉಚಿತ ಶಿಕ್ಷಣ, ಉಚಿತ ಆರೋಗ್ಯ ತಪಾಸಣೆ, ಅಪಘಾತ ಮತ್ತು ಜೀವ ವಿಮೆ, ಕೆಲಸದ ನಡುವೆ ವಿಶ್ರಾಂತಿ ಕೊಠಡಿ, ಕುಡಿಯುವ ನೀರು, ಶೌಚಾಲಯ ಹಾಗೂ ಉಚಿತ ಸಮವಸ್ತ್ರ ಒದಗಿಸಬೇಕು. ಅಲ್ಲದೆ ವಾಹನಗಳ ಫಿಟ್ನೆಸ್, ಇನ್ಶೂರೆನ್ಸ್ ನವೀಕರಣ ಮತ್ತು ರಿಪೇರಿ ವೆಚ್ಚಗಳನ್ನು ಶಾಲಾ ಆಡಳಿತ ಮಂಡಳಿಯೇ ಭರಿಸಬೇಕೆಂದು ಅವರು ಒತ್ತಾಯಿಸಿದರು.

ಇದೇ ವೇಳೆ ಮಹಿಂದ್ರಾ ಫೈನಾನ್ಸ್ ಧೋರಣೆ ವಿರುದ್ಧ ಹರಿದಾಯ್ದ ಬಸ್ಸುಗೌಡ ಚಟ್ನಳ್ಳಿ, ಅವರು ಯಾದಗಿರಿಯ ಮಹಿಂದ್ರಾ ಫೈನಾನ್ಸ್ ಸಂಸ್ಥೆಯು ಆಟೋ ಚಾಲಕರಿಗೆ ಯಾವುದೇ ನೋಟೀಸ್ ನೀಡದೆ ವಾಹನಗಳನ್ನು ನಿಯಮಬಾಹಿರವಾಗಿ ಜಪ್ತಿ ಮಾಡಿ ಹರಾಜು ಮಾಡುತ್ತಿದೆ. ಹಣ ಪಾವತಿಸಿದ್ದರೂ ಹೆಚ್ಚುವರಿ ಹಣಕ್ಕಾಗಿ ಪೀಡಿಸುತ್ತಾ, ಚಾಲಕರ ಮನೆಗಳಿಗೆ ತೆರಳಿ ಕಿರುಕುಳ ನೀಡುತ್ತಿದ್ದಾರೆ. ಬಡ ಆಟೋ ಚಾಲಕರಿಗೆ ತೊಂದರೆ ನೀಡುತ್ತಿರುವ ಮಹಿಂದ್ರಾ ಫೈನಾನ್ಸ್ ಸಂಸ್ಥೆಯ ವಿರುದ್ಧ ತಕ್ಷಣವೇ ಕ್ರಿಮಿನಲ್ ಪ್ರಕರಣ ದಾಖಲಿಸಿ, ಸಂಕಷ್ಟದಲ್ಲಿರುವ ಚಾಲಕರಿಗೆ ನ್ಯಾಯ ಒದಗಿಸಬೇಕು ಎಂದು ಜಿಲ್ಲಾ ಆಡಳಿತಕ್ಕೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಗೌರವಾಧ್ಯಕ್ಷ ರವಿ ಮುದ್ನಾಳ್, ಗೌರವಾಧ್ಯಕ್ಷ ನಿಂಗಪ್ಪ ಬೀರನಾಳ, ಆಟೋ ಘಟಕದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಸಾಂಗ್ಲಿಯಾನ, ಶಾಲಾ ವಾಹನ ವಿಭಾಗದ ಜಿಲ್ಲಾಧ್ಯಕ್ಷ ಸಾಬು ನಾಯಕ ಠಾಣಾಗುಂದಿ, ಉಪಾಧ್ಯಕ್ಷ ಮಂಜುನಾಥ ಪೂಜಾರಿ, ಶಾಲಾ ವಾಹನ ವಿಭಾಗದ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಸಿದ್ದು ಕಣೇಕಲ್, ಪ್ರಚಾರ ಸಮಿತಿ ಉಪಾಧ್ಯಕ್ಷ ಸುಭಾಷ್ ಗುತ್ತೇದಾರ, ಕಾರ್ಯಾಧ್ಯಕ್ಷ ಸಾಹೇಬ್ ಗೌಡ, ಸಂಘಟನೆ ಕಾರ್ಯಾಧ್ಯಕ್ಷ ಹಣಮಂತ ಕುಲೂರ್, ಖಜಾಂಚಿ ಸಾಬಣ್ಣ ಠಾಣಗುಂದಿ, ಉಪಾಧ್ಯಕ್ಷ ರಾಘವೇಂದ್ರ ತಳವಾರ್, ತಾಲೂಕು ಕಾರ್ಯಾಧ್ಯಕ್ಷ ಮರಲಿಂಗ ಮುಂಡರಗಿ, ತಾಲೂಕು ಸದಸ್ಯ ಮಹೇಬೂಬ್, ಸಹ ಕಾರ್ಯದರ್ಶಿ ಸಲೀಮ್, ಸಂಘಟನೆ ಕಾರ್ಯದರ್ಶಿ ಸೋಫಿ ಪಟೇಲ್ ಹಾಗೂ ಸದಸ್ಯರುಗಳಾದ ಚಂದ್ ಪಾಶಾ, ಸುರೇಶ ಆರ್.ವಿ, ಸಾಬಣ್ಣ, ಶಿವರಾಜ್ ನಂದಹಳ್ಳಿ, ಮಲ್ಲಪ್ಪ ಭಂಡಾರಿ ಸೇರಿದಂತೆ ಹಲವು ಚಾಲಕರು ಉಪಸ್ಥಿತರಿದ್ದರು.

# ದಲಿತರ, ಸರ್ಕಾರಿ ಜಾಗ ಕಬ್ಜೆ ತೆರವು ಮಾಡಿ ಡಿಎಸ್‌ಎಸ್ ಅಂಬೇಡ್ಕರ್ ವಾದ ಮನವಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ತಾಲ್ಲೂಕಿನ ಸಂಗವಾರ ಗ್ರಾಮದಲ್ಲಿ ಸುಮಾರು ವರ್ಷಗಳಿಂದ ತಿಪ್ಪೆಗುಂಡಿ ಮಾಡಿಕೊಂಡು ಬಂದಿರುವ ಎಸ್.ಸಿ.ಜನಾಂಗದ ಜಾಗವು ಡಾ॥ ಬಿ.ಅರ್. ಅಂಬೇಡ್ಕರ್ರವರ ಕಮಿಟಿ ಹಾಲ್‌ಗೆ ಮೀಸಲಾಗಿದ್ದು, ಮುದ್ನಾಳ ಗ್ರಾಮದ ಸರ್ಕಾರಿ ಗೈರಾಣ ಜಾಗೆಯನ್ನು ಸಹ ಅನ್ಯರು ಕಬ್ಜೆ ಮಾಡಿಕೊಂಡಿದ್ದು ಇ ಜಾಗೆಗಳನ್ನು ಸರ್ಕಾರಕ್ಕೆ ಪಡೆದು ನ್ಯಾಯ ಒದಗಿಸಬೇಕೆಂದು ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ತಾಲ್ಲೂಕು ಸಮಿತಿ ಆಗ್ರಹಿಸಿದೆ. ಈ ಕುರಿತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಸಮಿತಿ ಕಾರ್ಯಕರ್ತರು, ಸಂಗ್ವಾರದಲ್ಲಿ ಅಕ್ರಮವಾಗಿ ತಿಪ್ಪಣ್ಣ ತಂದೆ ಭೀಮಶಪ್ಪ ಈತನು ಇನ್ನೋರ್ವ ವ್ಯಕ್ತಿ ಭೀಮಣ್ಣ ತಂ/ ಮಲ್ಲಪ್ಪ ಹೊನ್ನಪ್ಪನೋರ ಇವರಿಗೆ ಕೊಟ್ಟಿದ್ದಾನೆಂದು ಕಬ್ಬಾ ಮಾಡಿರುತ್ತಾರೆ. ಇದರ ಬಗ್ಗೆ ಯಾವುದೇ ಕ್ರಮ ಜರುಗಿರುವುದಿಲ್ಲ.

ಅಲ್ಲದೇ ಮುದ್ನಾಳ ಗ್ರಾಮದ ಸರಕಾರಿ ಗಾಯರಾಣ ಸರ್ವೆ ನಂ.34/3 ರಲ್ಲಿ 3–00 ಎಕರೆ ಸರಕಾರಿ ಜಮೀನು ಬಿ.ಶಂಕ್ರಪ್ಪ ತಂ/ ಬಸವರಾಜಪ್ಪ ಸಾ ॥ ಸಾವೂರ ಎಂಬುವರು ಕಬ್ಜೆ ಮಾಡಿಕೊಂಡಿದ್ದು, ಈ ಜಮೀನಿನ ಬಗ್ಗೆಯೂ ಕ್ರಮ ಕೈಗೊಳ್ಳದೇ ಇರುವುದನ್ನು ಖಂಡಿಸಿ ಮನವಿ ಸಲ್ಲಿಸಲಾಯಿತು.

ತಿಪ್ಪೆಗುಂಡಿ ಜಾಗ ಡಾ। ಬಿ.ಆರ್.ಅಂಬೇಡ್ಕರವರ ಕಮಿಟಿ ಹಾಲ್‌ಗೆ ಮೀಸಲಾಗಿದ್ದು, ಆದರೆ ಈ ಜಾಗ ಈ ಅನ್ಯ ಜಾತಿಯವರು ಕಬ್ಬಾ ಮಾಡಿಕೊಂಡಿದ್ದು, ದಲಿತರ ಜಾಗ ಕಬಳಿಸುತ್ತಿದ್ದು, ಈ ಬಗ್ಗೆ ಪಿಡಿಓ, ಇ.ಓ. ತಹಸೀಲ್ದಾರರಿಗೆ ಮನವಿ ಮಾಡಿಕೊಂಡರೂ ಕ್ರಮ ಕೈಗೊಂಡಿಲ್ಲ. ಈ ಜಾಗ ದಲಿತರಿಗೆ ಮೀಸಲಿಡಲು ಕ್ರಮ ಕೈಗೊಳ್ಳಬೇಕು

ಈ ಎರಡು ಬೇಡಿಕೆಗಳ ಕುರಿತು ವಿಳಂಭ ಮಾಡದೇ ಈ ಕೂಡಲೇ ಮೇಲ್ಕಂಡ ಸಮಸ್ಯೆ ಬಗೆಹರಿಸಲು ಮನವಿ ಮಾಡಲಾಯಿತು. ಒಂದು ವೇಳೆ ಕ್ರಮ ಕೈಗೊಳ್ಳದೇ ಹೋದಲ್ಲಿ ತಮ್ಮ ಕಛೇರಿ ಮುಂದೆ ಧರಣಿ ಮಾಡಲಾಗುವುದು.

ಎಂದು ಎಚ್ಚರಿಸಿದರು.

ತಾಲ್ಲೂಕು ಸಂಚಾಲಕ ತಾಲೂಕಾ ಸಂಚಾಲಕ ಆಂಜನೇಯ ಬಳಿಚಕ್ರ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ

ಜಿಲ್ಲಾ ಸಂ ಸಂಚಾಲಕರಾದ ನಿಂಗಣ್ಣ ಬೀರನಾಳ, ಅಶೋಕ ನಾಯ್ಕಲ್, ಅನಿಲ್ ಅನವಾರ, ಆದೆಪ್ಪ ಸಂಗವಾರ, ಶರಣಪ್ಪ ಶರಣು ಸಂಗವಾರ, ಮಲ್ಲಿಕಾರ್ಜುನ ಸಂಗವಾರ ಇನ್ನಿತರರು ಇದ್ದರು.

# ಕೊಟ್ಟೂರು ತಾಲೂಕನ್ನು ಬರಗಾಲ ಪೀಡಿತ ತಾಲೂಕೆಂದು ಘೋಷಿಸಲು ಆಗ್ರಹಿಸಿ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು



ಪಟ್ಟಣದ ತಹಶಿಲ್ದಾರ ಕಚೇರಿ ಮುಂಭಾಗದಲ್ಲಿ ಕರ್ನಾಟಕ ರಾಜ್ಯ ರೈತರ ಸಂಘ ಹಾಗೂ ಹಸಿರುಸೇನೆ ವಾಸುದೇವ ಮೇಟಿ ಬಣ (ರಿ) ಜಿಲ್ಲಾ ಅಧ್ಯಕ್ಷರಾದ ಸಿ. ಎ. ಗಾಳೆಪ್ಪ ರವರ ಅದೇಶದ ಮೇರಿಗೆ ತಾಲೂಕು ಮಹಿಳೆ ಘಟಕದ ಅಧ್ಯಕ್ಷೆ ಸಿ ರೇಖಾ ರವರು ನೇತ್ರತ್ವದಲ್ಲಿ. ವಿಜಯನಗರ ಜಿಲ್ಲೆ, ಕೊಟ್ಟೂರು ತಾಲೂಕಿನ ರೈತರು ಸರಿಯಾದ ಮಳೆ ಇಲ್ಲದೆ ಕಾರಣ ರೈತರು ಭೂಮಿಯಲ್ಲಿ ಬೆಳೆಗಳಿಗೆ ಹಾಕಿದ ಭೀಜಗೊಬ್ಬರಗಳು ತುಂಬಾ ಬೆಳೆಗಳು ಹಾಳಾಗಿ ಹೋಗಿವೆ. ಇದರಿಂದ ರೈತರು ಕಂಗಾಲಾಗಿ ರೈತರು ವಿಷ ಸೇವನೆ ಮಾಡುವ ಪರಿಸ್ಥಿತಿ ಎದುರಾಗಿದೆ. ಇದರಿಂದ ತಾವುಗಳು ಸರಿಯಾದ ಮಳೆ ಇಲ್ಲದ ಕಾರಣ ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕನ್ನು ಬರಗಾಲ ತಾಲೂಕು ಎಂದು ಘೋಷಣೆ ಮಾಡಬೇಕೆಂದು ರೈತರು ಒತ್ತಾಯಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಲು ತಹಶಿಲ್ದಾರಾದ ಅಮರೇಶ ಜಿ.ಕೆ ರವರಿಗೆ ಸಂಘಟನೆಯ ಪಧಾದಿಕಾರಿಗಳು.ಸದಸ್ಯರು ಮನವಿ ಪತ್ರ ಸಲ್ಲಿಸಿದರು. ಈ ಸಂಧರ್ಭದಲ್ಲಿ ಕೊಟ್ಟೂರು ತಾಲೂಕು ಮಹಿಳೆ ಘಟಕದ ಅಧ್ಯಕ್ಷೆ ಸಿ ರೇಖಾ ರವರು ಮಾತನಾಡಿ ಬೆಳೆ ನಷ್ಟವಾದ ರೈತರಿಗೆ ಬೆಳೆ ಪರಿಹಾರವಾಗಿ ಒಂದು ಎಕರೆಗೆ ರೂ.30,000/–ಗಳನ್ನು ಕೂಡಲೇ ಸರ್ಕಾರ ನೀಡಬೇಕು ಹಾಗೂ ರೈತರ ಸಾಲ ಮನ್ನಾಮಾಡಬೇಕು.

ಒಂದುವೇಳೆ ಈ ಮನವಿ ಪತ್ರ ಸಲ್ಲಿಸಿದ ನಂತರವು ಸರ್ಕಾರ ಇದಕ್ಕೆ ಸ್ಪಂಧಿಸದೇ ಹೋದರೆ ಮುಂದಿನಗಳಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವಾಸು ದೇವ ಮೇಟಿ ಬಣದ ಸಂಘಟನೆಯು ತಾಲೂಕಿನ ರೈತರಿಗೆ ಕರೆ ನೀಡಿ ಕೊಟ್ಟೂರು ಬಂದ್ ಮಾಡಲಾಗುವುದು ಎಂದು ಅಗ್ರಹಿಸಿದರು.

ಈ ಸಂದರ್ಭದಲ್ಲಿ ಹೋಬಳಿ ಘಟಕದ ಉಪಾಧ್ಯಕ್ಷರು ಸಿದ್ದೇಶಿ. ನಾಗಪ್ಪ. ನಡುಮಾವಿನಹಳ್ಳಿ ನಾಗಮ್ಮ. ಕಮಲಮ್ಮ. ನೇತ್ರಮ್ಮ.ಸುನೀತ.ಹನುಮಕ್ಕ. ಗಂಗಮ್ಮ. ಸರ್ವ ಸದಸ್ಯರು ತಾಲೂಕಿನ ರೈತರು ಇದ್ದರು

# ವನಮಹೋತ್ಸವ ಸಮಾರೋಪ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ಹುಮ್ನಾಬಾದ್ ತಾಲೂಕಿನ ಹುಡಗಿ ಬಸವತಿ ವಿದ್ಯಾಪೀಟ್ ಪ್ರಾಥಮಿಕ ಶಾಲೆಯಲ್ಲಿ ಪರಿಸರವಾಹಿನಿ ಬೀದರ್ ವತಿಯಿಂದ ವನಮಹೋತ್ಸವ ಸಮಾರೋಪ ಕಾರ್ಯಕ್ರಮ ಹಾಗೂ ಪರಿಸರ ಸಂರಕ್ಷಣೆ ಜನಜಾಗೃತಿ ಕಾರ್ಯಕ್ರಮ ಪರಿಸರವಾದಿ ಶೈಲೇಂದ್ರ ಕಾವಾಡಿ ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ವನಮೋತ್ಸವ ಕುರಿತು ಮಾತನಾಡಿದರು. ಪರಿಸರ ಸಮತೋಲನ ಕಾಪಾಡಲು ಮರ–ಗಿಡಗಳು ಬೆಳೆಸಲು ತಿಳಿಸಿದರು. ವಿದ್ಯಾರ್ಥಿಗಳಿಗೆ ವಿಶ್ವ ಪರಿಸರ ದಿನಾಚರಣೆಯ ಘೋಷ ವಾಕ್ಯ ಮತ್ತು ಅತಿಥಿಯ ರಾಷ್ಟ ಬಗ್ಗೆ ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡಿದರು. ಸಮಗ್ರ ಮಾಹಿತಿ ನೀಡಿದರು. ತಾಯಿಯ ಹೆಸರಿನ ಮೇಲೆ ಸಸಿ ನೆಡಲು ವಿದ್ಯಾರ್ಥಿಗಳಿಗೆ ಮನವಿ ಮಾಡಿದರು. ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಸಸಿ ನೀಡಲು ಸಸಿ ವಿತರಿಸಿದರು. ಶಾಲಾ ಮುಖ್ಯ ಗುರುಗಳಾದ ಕರಬಸಪ್ಪ ಮಲ್ ಶೆಟ್ಟಿ. ಅಧ್ಯಕ್ಷತೆ ವಹಿಸಿ ಮಾತನಾಡಿದರು. ಆಡಳಿತ ಅಧಿಕಾರಿ ವಿಜಯಕುಮಾರ್ ಶಹಾನೂರ್ ಇವರ ಮಾರ್ಗದರ್ಶನದ ಮೇರೆಗೆ ಕಾರ್ಯಕ್ರಮ ಜರಗಿ–ತು. ಸಹ ಶಿಕ್ಷಕರಾದ ದಿಗಂಬರ್ ಕಾರ್ಯಕ್ರಮ ನಿರೂಪಿಸಿ ಕೊನೆಯಲ್ಲಿ ವಂದಿಸಿದರು

# ಗ್ಯಾರಂಟಿ ಯೋಜನೆಗಳು ಬಡವರಿಗೆ ಬರದಾನ : ಹೂಲಗೇರಿ

• ಮಲ್ಲಮ್ಮ ನುಡಿ ವಾರ್ತೆಮುದಗಲ್




ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಅನುಷ್ಠಾನಗೊಳಿಸಿರುವ ಗ್ಯಾರಂಟಿ ಯೋಜನೆಗಳು ಬಡ ಮತ್ತು ಕೂಲಿಕಾರರ ಕುಟುಂಬಸ್ಥರಿಗೆ ವರದಾನವಾಗಿದೆ ಎಂದು ಲಿಂಗಸಗೂರು ಕ್ಷೇತ್ರದ ಮಾಜಿ ಶಾಸಕ ಡಿ.ಎಸ್. ಹೂಲಗೇರಿ ಅಭಿಪ್ರಾಯ ಪಟ್ಟರು. ಮುದಗಲ್ ಪಟ್ಟಣ ಸಮೀಪದ ನವಲಿ ಜಡಿಶಂಕರಲಿಂಗೇಶ್ವರ ದೇವಸ್ಥಾನದ ಸಮುದಾಯ ಭವನದಲ್ಲಿ ಸೋಮವಾರ ಕಾಂಗ್ರೆಸ್ ಪಕ್ಷ ಏರ್ಪಡಿಸಿದ್ದ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಜನ ನೀಡಿರುವ ಅಧಿಕಾರ ಶಾಶ್ವತವಲ್ಲ ನಾವು ಮಾಡುವ ಕಾರ್ಯ ಕೆಲಸಗಳು ಅಚ್ಚಳಿಯದಂತೆ ಉಳಿಯುವಂತೆ ಜನಸೇವೆ ಮಾಡಬೇಕೆಂದರು. ನಂತರ ಲಿಂಗಸಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದನಯಕ ಮಾತನಾಡಿ, ಕಾಂಗ್ರೆಸ್ ಸರ್ಕಾರ ಜನಪರ ಯೋಜನೆಗಳನ್ನು ನೀಡುವುದರ ಮೂಲಕ ಜನರ ಮನಸ್ಸು ಗೆದ್ದಿದ್ದು ಬಿಜೆಪಿ ನೀಡುವ ಟೊಳ್ಳು ಭರವಸೆಗೆ ನಮ್ಮ ಜನ ಮಾರುಹೋಗದೆ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ದಿನಮಾನಗಳಲ್ಲಿ ಕೈಜೋಡಿಸಬೇಕೆಂದರು. ಮುದಗಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರಗೌಡ ಉಪ್ಪಾರನಂದಿಹಾಳ, ಡಾ!! ಶಿವಶರಣಪ್ಪ ಹೆಸರೂರು, ಕಂಟೆಪ್ಪಗೌಡರು ಖೈರವಾಡಗಿ ಕಾರ್ಯಕ್ರದ ಕುರಿತು ಮಾತನಾಡಿದರು. ಇದೇ ಸಂದರ್ಭದಲ್ಲಿ ಆನೆಹೊಸುರು ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಜೂಲಗುಡ್ಡ, ಹೊಸುರು, ನರಕಲದಿನ್ನಿ, ಕಮಲದಿನ್ನಿ ಗ್ರಾಮಗಳ ನೂರಾರು ಕಾರ್ಯಕರ್ತರು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷದ ಸಿಧ್ಧಾಂತಗಳನ್ನು ಮೆಚ್ಚಿ ಡಿ.ಎಸ್. ಹೂಲಗೇರಿ ನೇತ್ರತ್ವದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು. ಈ ಸಂದರ್ಭದಲ್ಲಿ ಪ್ರಮುಖರಾದ ಲಿಂಗಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಅಧ್ಯಕ್ಷ ಅಮರೇಶ ಹೆಸರೂರು, ಅಮರಗುಂಡಪ್ಪ ಮೇಟಿ, ಬಸವರಾಜ ಜೆಲ್ಲಿ, ಸಿದ್ದನಗೌಡ ಕಸಬಾ ಲಿಂಗಸಗೂರು, ಮುದಕಪ್ಪ ವಕೀಲರು, ಬಾಬಾ ಖಾಜಿ, ಖಾಜಾಹುಸೇನ್, ಸಂಜೀವ್ ಕಂದಗಲ್, ಸಂಜೀವಪ್ಪ ಚೆಲುವಾದಿ ಹಾಗೂ ಇತರರಿದ್ದರು.

# ಮಳೆಗಾಗಿ ಮಜ್ಜನ ಬಾವಿ ಪುನರುಜ್ಜೀವನ

• ಮಲ್ಲಮ್ಮ ನುಡಿ ವಾರ್ತೆಮುದಗಲ್



ಸಮೀಪದ ಕನ್ನಾಪೂರ ಹಟ್ಟಿ ಗ್ರಾಮದಲ್ಲಿ ಶತಮಾನಗಳ ಸಂಪ್ರದಾಯದಂತೆ ಮಜ್ಜನ ಬಾವಿ (ದೇವರ ಸ್ನಾನದ ಬಾವಿ) ಪುನರುಜ್ಜೀವನಗೊಳಿಸಿ ಉತ್ತಮ ಮಳೆಯಿಂದ ಭೂಮಿ ಸಮೃದ್ಧಿಯಾಗಿ ರೈತರ ಬದುಕು ಹಸನಾಗಲಿ ಎಂದು ಗ್ರಾಮಸ್ಥರು ಭಕ್ತಿ–ಭಾವ ಮೆರೆದರು. ಮಳೆ ಕೊರತೆಯಿಂದ ರೈತರು ಆತಂಕದಲ್ಲಿರುವ ಸಂದರ್ಭದಲ್ಲಿ ದೇವರ ಮೊರೆ ಹೋಗಿ, ಗ್ರಾಮದ ಪವಿತ್ರ ಮಜ್ಜನ ಬಾವಿಯನ್ನು ಸ್ವಚ್ಛಗೊಳಿಸಿ ವಿಶೇಷ ಪೂಜೆ ಗ್ರಾಮಸ್ಥರು ಸಲ್ಲಿಸಿದರು. ವರ್ಷಗಳಿಂದ ಮಣ್ಣು, ಕಸ ಹಾಗೂ ಗಿಡಗಂಟಿಗಳಿಂದ ಮುಚ್ಚಿಹೋಗಿದ್ದ ಬಾವಿಯನ್ನು ಯುವಕರು, ಹಿರಿಯರು ಸ್ವಚ್ಛಗೊಳಿಸಿದರು. ಗ್ರಾಮದ ಆರಾಧ್ಯದೈವ ಶ್ರೀ ಪರಮಾನಂದ, ಶ್ರೀ ಅಮೋಘ ಸಿದ್ದೇಶ್ವರ ದೇವರು ಹಾಗೂ ಈ ಮಜ್ಜನ ಬಾವಿಗೆ ವಿಶೇಷ ಮಹತ್ವವಿದೆ. ಪುರಾತನ ಕಾಲದಲ್ಲಿ ದೇವರ ಅಭಿಷೇಕ ಹಾಗೂ ಧಾರ್ಮಿಕ ಆಚರಣೆಗಳಿಗೆ ಈ ಬಾವಿಯ ನೀರನ್ನು ಬಳಸಲಾಗುತ್ತಿತ್ತು ಎಂಬುದು ಪ್ರತೀತಿ ಇದೆ. ಮಳೆ ಕೊರತೆ ಎದುರಾದಾಗ ಬಾವಿಯನ್ನು ಶುದ್ಧೀಕರಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರೆ ವರುಣದೇವ ಪ್ರಸನ್ನನಾಗಿ ಉತ್ತಮ ಮಳೆಯಾಗುತ್ತದೆ ಎಂಬುದು ತಲೆಮಾರುಗಳಿಂದ ಬಂದಿರುವ ನಂಬಿಕೆಯಾಗಿದೆ ಎಂದು ಗ್ರಾಮಸ್ಥರು ತಿಳಿಸಿದರು. ಜ್ಯೋತಯ್ಯ, ನಂದಯ್ಯ, ಶಿವಶರಣಯ್ಯ, ಸಿದ್ದಯ್ಯ, ಹನುಮಯ್ಯ, ಬಾಳಯ್ಯ, ಪರಮಣ್ಣ ಗೋರ್, ಯಂಕಪ್ಪ ಮೇಗೂರು, ಹನುಮೇಶ್ ನಂದಿಹಾಳ ಹಾಗೂ ಗ್ರಾಮಸ್ಥರಿದ್ದರು.

# ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಒಂದು ದಿನದ ಪೂರ್ವ ಸಿದ್ಧತಾ ತರಬೇತಿ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ

ಪಟ್ಟಣದಲ್ಲಿ ವಿಶ್ವ ಜ್ಞಾನಿ ಸ್ಪರ್ಧಾತ್ಮಕ ಪರೀಕ್ಷೆ ಕೇಂದ್ರ ಮತ್ತು ವಳ ಬಳ್ಳಾರಿ ಶಿಕ್ಷಣ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ (ಗಿಅಃ) ಲಿಂಗಸುಗೂರು ಅವರ ಸಹಯೋಗದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ಸಿದ್ಧತಾ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ತರಬೇತಿ ನೀಡಿದ ಶ್ರೀ ಯಲ್ಲಪ್ಪ ಕಮದಾಳ ಅವರು

ಪದವಿ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಮುಂಬರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಲು ಇಂದಿನಿಂದಲೇ ಕಾರ್ಯಪ್ರವೃತ್ತರಾಗಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾರ್ಡ್ ವರ್ಕ್ ಗಿಂತಲೂ ಸ್ಮಾರ್ಟ್ ವರ್ಕ್ ಮಾಡುವುದು ಅತ್ಯಂತ ಮುಖ್ಯ ಎಂದು ಹೇಳೀದರು. ತರಬೇತಿಯಲ್ಲಿ ಸುಮಾರು 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ, ತರಬೇತಿಯ ಸದುಪಯೋಗ ಪಡೆದುಕೊಂಡರು.

ಈ ಕಾರ್ಯಕ್ರಮದಲ್ಲಿ ತರಬೇತಿಯಲ್ಲಿ ಕಾಲೇಜು ಪ್ರಾಚಾರ್ಯರು ಪ್ರೋ ,ಚಂದ್ರಶೇಖರ ರೆಡ್ಡಿ, ಸಂಯೋಜಕರು ಡಾ. ಪದ್ಮರಾಜ ಜೈನ್, ವಿಶ್ವ ಜ್ಞಾನಿ ಸ್ಪರ್ಧಾತ್ಮಕ ಕೇಂದ್ರದ ನಿರ್ದೇಶಕರರು ಶ್ರೀ ದುರಗಪ್ಪ ಬಂಡೇಭಾವಿ, ಶ್ರೀ ವಿಠ್ಠಲ್ ಹುನುಗುಂದ ನಿರೂಪಿಸಿದರು, ಡಾ.ಸುಜಾತ ನೆಟೆಕಲ್ ಶ್ರೀ ಪರಶುರಾಮ ಇತರ ಪ್ರಾಧ್ಯಾಪಕರು ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು .

# ಸ್ವಾತಂತ್ರ್ಯ ಹೋರಾಟಗಾರ ಹೀರಾಚಂದ ವಾಘಮಾರೆ ನಿಧನ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಜು. 27: ಭಾಲ್ಕಿಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಶತಾಯುಷಿ ಹೀರಾಚಂದ ವಾಘಮಾರೆ (99) ಅವರು ವಯೋಸಹಜ ಅನಾರೋಗ್ಯದಿಂದ ಜುಲೈ 26ರಂದು ನಿಧನರಾದರು.

ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದ ಅವರು, ಜಯಪ್ರಕಾಶ್ ನಾರಾಯಣ ಅವರ ತತ್ವಾದರ್ಶಗಳಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ದೇಶಭಕ್ತಿ, ಸಾಮಾಜಿಕ ಕಳಕಳಿ ಹಾಗೂ ರಾಷ್ಟ್ರಸೇವೆಯನ್ನು ಜೀವನದ ಧ್ಯೇಯವಾಗಿಸಿಕೊಂಡಿದ್ದ ಅವರು ವಿವಾಹವಾಗದೇ ಬ್ರಹ್ಮಚಾರಿಯಾಗಿ ಜೀವನ ನಡೆಸಿದ್ದರು.

ಸ್ವಾತಂತ್ರ್ಯ ಹೋರಾಟ ಹಾಗೂ ಸಮಾಜಸೇವೆಗೆ ನೀಡಿದ ಅಮೂಲ್ಯ ಕೊಡುಗೆಯನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಅವರಿಗೆ ಲಭಿಸಿತ್ತು. ಅವರ ನಿಧನದಿಂದ ಭಾಲ್ಕಿ ಭಾಗವು ಹಿರಿಯ ಸ್ವಾತಂತ್ರ್ಯ ಹೋರಾಟಗಾರನನ್ನು ಕಳೆದುಕೊಂಡಂತಾಗಿದೆ ಎಂದು ವಿವಿಧ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಅವರ ಅಂತ್ಯಕ್ರಿಯೆ ಜುಲೈ 27ರಂದು ಭಾಲ್ಕಿಯ ಹಿಂದೂ ರುದ್ರಭೂಮಿಯಲ್ಲಿ ನೆರವೇರಿತು.

ಹಿರೇಮಠದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು, ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ಸಚಿವ ಈಶ್ವರ ಖಂಡ್ರೆ, ಸಂಸದ ಸಾಗರ್ ಖಂಡ್ರೆ, ಮಾಜಿ ಶಾಸಕ ಪ್ರಕಾಶ ಖಂಡ್ರೆ ಸೇರಿದಂತೆ ಹಲವು ಗಣ್ಯರು ಹಾಗೂ ಸಾರ್ವಜನಿಕರು ಮೃತರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

# ಆರೋಪಿತನ ಬಂಧನ

• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ

ಸುಮಾರು 8 ಪ್ರಕರಣಗಳಲ್ಲಿ ಭಾಗಿಯಾಗಿದ್ದ ಹಾಗೂ ನ್ಯಾಯಾಲಯದಿಂದ ಜಾಮೀನು ಪಡೆದು–ಕೊಂಡು, 12 ವರ್ಷಗಳಿಂದ ಹಾಜರಾಗದೇ ತಿರುಗಾಡುತ್ತಿದ್ದ ಶಿವರಾಜ್. ಜಗದೀಶ್ ಭೋಸಲೆ ಆರೋಪಿತನನ್ನು ಮಹಾರಾಷ್ಟ್ರದ ಲಾತೂರ ಜಿಲ್ಲೆಯಲ್ಲಿ, ಇರುವ ಬಗ್ಗೆ ಪತ್ತೆ ಹಚ್ಚಿ ಇತ್ತೀಚಿಗೆ ನ್ಯಾಯಾಲಯಕ್ಕೆ ಹಾಜರಪಡಿಸಿದ್ದು ಇರುತ್ತದೆ.

ಪತ್ತೆಗಾಗಿ ಸ್ಥಳೀಯ ಪೊಲೀಸ್ ಠಾಣಯ ಪಿ. ಆಯ್ ಗುರುಶಾಂತ ದಾಶಾಳ ಅವರ ಮಾರ್ಗದರ್ಶನದಲ್ಲಿ ಎಸ್. ಆಯ್ ಹಿರೇಮಠ. ಹಾಗೂ ಸಿಬ್ಬಂದಿಯವರಾದ ಎಮ್. ಎ ನಾಧಪ್.ಚಾಂದ ಮುಲ್ಲಾ. ಎಸ್. ಬಿ ಬಿರಾದಾರ. ಮತ್ತು ಸುನೀಲ ಮಳ್ಳಿ ಅವರನ್ನೊಳಗೊಂಡ ತಂಡ ಬಂಧಿಸುವಲ್ಲಿ ಯಶಸ್ವಿಯಾಗಿದೆ.

# ರೈತರು ಕುಸುಮ್-ಬಿ ಯೋಜನೆಯಡಿ ಸೋಲಾರ್ ವಿದ್ಯುತ್ ಪಂಪ್‌ಸೆಟ್ ಅಳವಡಿಕೆಗೆ ಮುಂದಾಗಿ: ರಾಜಶೇಖರ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದ 'ಕುಸುಮ್–ಬಿ' ಯೋಜನೆಯಡಿ ರೈತರು ಸೋಲಾರ್ ವಿದ್ಯುತ್ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಳ್ಳಲು ಸಹ ಮುಂದಾಗಬೇಕೆಂದು ಕೊಪ್ಪಳ ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಅವರು ಹೇಳಿದರು.



ಕೊಪ್ಪಳ ತಾಲೂಕಿನ ನೆಲೋಗಿಪುರ (ಭೈರಾಪುರ) ಗ್ರಾಮದಲ್ಲಿ ಜುಲೈ 24ರಂದು ರೂ. 27.46 ಕೋಟಿ ಅಂದಾಜು ವೆಚ್ಚದಲ್ಲಿ ನೂತನ 2ಥ20ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪನೆ ಹಾಗೂ ಮುಂಡರಗಿ–ಬೆಟಗೇರಿ ಎಸ್‌ಸಿ ಲೈನ್‌ನಿಂದ ನೆಲೋಗಿಪುರ ಉಪಕೇಂದ್ರಕ್ಕೆ 6 ಕಿ.ಮೀ ವಿದ್ಯುತ್ ಮಾರ್ಗ ನಿರ್ಮಾಣ ಕಾಮಗಾರಿಯ ಭೂಮಿಪೂಜೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ರೈತರು ಸೌರಶಕ್ತಿ ಯೋಜನೆಗಳ ಬಗ್ಗೆಯೂ ಗಮನ ಹರಿಸಬೇಕು. ಕುಸುಮ್–ಬಿ ಯೋಜನೆಯಡಿ ರೈತರಿಗೆ 90% ಸಹಾಯಧನ ಸಿಗುತ್ತಿದ್ದು, ಅದನ್ನು ಸದ್ಬಳಕೆ ಮಾಡಿಕೊಂಡು ತಮ್ಮ ಹೊಲಗಳ ಬೋರ್ವೆಲ್‌ಗಳಿಗೆ ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡು ಹಗಲು ವೇಳೆಯಲ್ಲೇ ಕೃಷಿಗೆ ನೀರುಣಿಸಬಹುದು ಎಂದರು.

ರೈತರು ಆರ್ಥಿಕವಾಗಿ ಸಬಲರಾಗಲು ಮತ್ತು ಕೃಷಿ ಚಟುವಟಿಕೆಗಳಿಗೆ ನಿರಂತರ ವಿದ್ಯುತ್ ಪೂರೈಕೆ ಅತ್ಯಗತ್ಯ. ಈ ಭಾಗದಲ್ಲಿ ನೀರಾವರಿ ಯೋಜನೆಗಳಿಲ್ಲದೆ ರೈತರು ಸಂಪೂರ್ಣವಾಗಿ ಬೋರ್‌ವೆಲ್‌ಗಳ ಮೇಲೆಯೇ ಅವಲಂಬಿತರಾಗಿದ್ದಾರೆ. ಅವರಿಗೆ ಸೂಕ್ತ ಟ್ರಾನ್ಸ್‌ಫಾರ್ಮರ್ ಹಾಗೂ ವಿದ್ಯುತ್ ಮಾರ್ಗಗಳ ಅಗತ್ಯವಿದೆ. 2013 ರ ಅವಧಿಯಲ್ಲಿ ಕೊಪ್ಪಳ ತಾಲೂಕಿನಲ್ಲಿ ತಾಲೂಕುವಾರು 7 ನೂತನ ಉಪಕೇಂದ್ರಗಳನ್ನು ಮಂಜೂರು ಮಾಡಿಸಲಾಗಿತ್ತು. ಜಾಗದ ಅಭಾವದ ನಡುವೆಯೂ, ನೆಲೋಗಿಪುರ ಗ್ರಾಮದಲ್ಲಿ ಸರ್ಕಾರಿ ಜಾಗ ಗುರುತಿಸಿ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಇದೀಗ ಕಾಮಗಾರಿಗೆ ಚಾಲನೆ ನೀಡಲಾಗಿದೆ. ನೂತನ ಉಪಕೇಂದ್ರ ಸ್ಥಾಪನೆಯಿಂದ ಸುತ್ತಮುತ್ತಲಿನ ಗ್ರಾಮಗಳ ರೈತರಿಗೆ ಮತ್ತು ಸಾರ್ವಜನಿಕರಿಗೆ ಕಡಿಮೆ ವೋಲ್ಟೇಜ್ ಹಾಗೂ ವಿದ್ಯುತ್ ಏರಿಳಿತದ ಸಮಸ್ಯೆ ಬಗೆಹರಿಯಲಿದೆ. ಉಪಕೇಂದ್ರದಿಂದ 15 ಕಿ.ಮೀ ವ್ಯಾಪ್ತಿಯಲ್ಲಿ ಸಮರ್ಪಕ ವೋಲ್ಟೇಜ್ ದೊರೆಯಲಿದೆ.

*ರಸ್ತೆ ಅಭಿವೃದ್ಧಿ:* ಕೆಸಿಡಬ್ಲ್ಯೂಡಿ ಯೋಜನೆಯಡಿ 230 ಕೋಟಿ ರೂ. ವೆಚ್ಚದಲ್ಲಿ ಗಿಣಿಗೇರಿಯಿಂದ ಮುಂಡರಗಿವರೆಗಿನ ರಸ್ತೆ ಸುಧಾರಣೆ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಭಾರತಮಾಲಾ–2 ಯೋಜನೆಯಡಿ ಪುಣೆ–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಈ ಭಾಗದಲ್ಲಿ ಹಾದುಹೋಗಲಿದ್ದು, ಈ ಕುರಿತು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ. ನೆಲೋಗಿಪುರ ಹಳ್ಳದ ಸೇತುವೆ ನಿರ್ಮಾಣ ಸೇರಿದಂತೆ ಈ ಭಾಗದ ಮೂಲಸೌಕರ್ಯಗಳ ಕೊರತೆಯನ್ನು ಶಾಸಕರೊಂದಿಗೆ ಚರ್ಚಿಸಿ ಹಂತ ಹಂತವಾಗಿ ಈಡೇರಿಸಲಾಗುವುದು ಎಂದು ಈ ಸಂದರ್ಭದಲ್ಲಿ ಸಂಸದರು ಭರವಸೆ ನೀಡಿದರು.

ಮಾಜಿ ಸಂಸದ ಕರಡಿ ಸಂಗಣ್ಣ ಅವರ ಮಾತನಾಡಿ, ಇಂದಿನ ದಿನವನ್ನು ರೈತರ ಸಂಭ್ರಮದ ದಿನವೆಂದು ಕರೆಯಬಹುದು. ನಮ್ಮ ದೇಶದಲ್ಲಿ ಶೇ. 70ರಷ್ಟು ಜನರು ಭೂಮಿ ತಾಯಿಯನ್ನೇ ನಂಬಿ ಬದುಕುತ್ತಿದ್ದಾರೆ. ಈ ಭಾಗದಲ್ಲಿ ವಿದ್ಯುತ್ ಅಭಾವ, ಲೋ ವೋಲ್ಟೇಜ್ ಹಾಗೂ ವಿದ್ಯುತ್ ವ್ಯತ್ಯಯದಿಂದಾಗಿ ರೈತರ ಐಪಿ ಸೆಟ್ ಪಂಪ್‌ಗಳು ಸುಟ್ಟುಹೋಗಿ, ಮರು ಜೋಡಣೆಗಾಗಿ ರೈತರು ಸಾಕಷ್ಟು ಸಂಕಷ್ಟ ಅನುಭವಿಸುತ್ತಿದ್ದರು. ಶಾಸಕರಾದ ರಾಘವೇಂದ್ರ ಹಿಟ್ನಾಳ್ ಅವರ ತಾಲೂಕಿನಲ್ಲಿ ಭವಿಷ್ಯದ ಪರಿಕಲ್ಪನೆಯೊಂದಿಗೆ ಆರು ವಿದ್ಯುತ್ ಉಪಕೇಂದ್ರಗಳನ್ನು ತಂದಿದ್ದಾರೆ. ಆ ಮೂಲಕ ರೈತರ ವಿದ್ಯುತ್ ಸಮಸ್ಯೆಗೆ ಮುಕ್ತಿ ನೀಡುವ ಕೆಲಸ ಮಾಡಿದ್ದಾರೆ ಎಂದರು.

ರೈತರು ಸೋಲಾರ್ ವಿದ್ಯುತ್ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡಲ್ಲಿ ರೈತರಿಗೆ ಸ್ವಂತ ಆಸ್ತಿಯಾಗುವುದಲ್ಲದೆ, ವೆಚ್ಚವೂ ಕಡಿಮೆಯಾಗಿ ಆರ್ಥಿಕ ಉಳಿತಾಯವಾಗುತ್ತದೆ. ಕ್ಷೇತ್ರದಲ್ಲಿ ವಿವಿಧ ನೀರಾವರಿ ಯೋಜನೆಗಳ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು, ಈ ಎಲ್ಲಾ ಯೋಜನೆಗಳಿಂದ ತಾಲೂಕಿನ ಸರಿಸುಮಾರು 1 ಲಕ್ಷ ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಸಿಗಲಿದೆ. ರೈತರು ನೀರನ್ನು ಪೋಲು ಮಾಡದೆ ಕೃಷಿ ಹೊಂಡಗಳನ್ನು ನಿರ್ಮಿಸಿಕೊಂಡು, ಹನಿ ನೀರಾವರಿ (ಡ್ರಿಪ್) ಹಾಗೂ ತುಂತುರು ನೀರಾವರಿ (ಸ್ಪಿಂಕ್ಲರ್) ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳುವುದರ ಜೊತೆಗೆ ಉತ್ತಮ ಆದಾಯ ಗಳಿಸಲು ಸಾಧ್ಯ ಎಂದು ತಿಳಿಸಿದರು.

ಕೆಪಿಟಿಸಿಎಲ್ ಯೋಜನಾ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಾದ ರಾಘವೇಂದ್ರಪ್ರಸಾದಬಾಬು ಅವರು ಮಾತನಾಡಿ, ಈ ಮೊದಲು ನೆಲೋಗಿಪುರ, ಭೈರಾಪುರ, ಅಳವಂಡಿ, ಹಲವಾಗಲಿ, ಬೆಳಗಟ್ಟಿ, ಕವಲೂರು, ಮರ್ನಾಳ, ಬೋಚನಳ್ಳಿ, ಹನಕುಂಟಿ, ತಿಗರಿ ಹಾಗೂ ಸುತ್ತಮುತ್ತಲಿನ ಇನ್ನಿತರೇ ಪ್ರದೇಶಗಳಿಗೆ 33/11 ಕೆ.ವಿ. ಅಳವಂಡಿ ಮತ್ತು 110/33/11 ಕೆ.ವಿ ಬೆಟಗೇರಾ ವಿದ್ಯುತ್ ಉಪ ಕೇಂದ್ರಗಳಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದ್ದು, ಈ ಭಾಗದಲ್ಲಿ ರೈತರು, ಕೃಷಿಕರು ತಮ್ಮ ಕೃಷಿ ಚಟುವಟಿಕೆಗಳ ಸಲುವಾಗಿ ಪಂಪಸೆಟ್‌ಗಳ ಮೇಲೆ ಅವಲಂಬಿತರಾಗಿರುತ್ತಾರೆ. ಇದರಿಂದಾಗಿ ವಿದ್ಯುತ್ ಬೇಡಿಕೆಯು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುತ್ತದೆ. ಎಲ್ಲ ಗ್ರಾಮಗಳ ವಿದ್ಯುತ್ ಗ್ರಾಹಕರುಗಳಿಗೆ ನಿರಂತರ ಹಾಗೂ ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲು ಈ ವಿದ್ಯುತ್ ಉಪ ಕೇಂದ್ರವನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಇದರಿಂದ ಗ್ರಾಹಕರುಗಳಿಗೆ ಹಾಗೂ ಕೃಷಿ ಜಮೀನಿನ ಪಂಪ್‌ಸೆಟ್‌ಗಳಿಗೆ ಕಡಿಮೆ ವೋಲ್ಟೇಜ್ ತೊಂದರೆಯಿಲ್ಲದ, ಅಡಚಣೆ ರಹಿತ ಉತ್ತಮ ಗುಣಮಟ್ಟದ ವಿದ್ಯುತ್‌ನ್ನು ಪೂರೈಕೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಮುಂದಿನ ದಿನಗಳಲ್ಲಿ ಕೊಪ್ಪಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿದ್ಯುತ್ ಗ್ರಾಹಕರುಗಳಿಗೆ ಉತ್ತಮಗುಣ ಮಟ್ಟದ ಹಾಗೂ ನಿರಂತರ ವಿದ್ಯುತ್ ಒದಗಿಸುವ ನಿಟ್ಟಿನಲ್ಲಿ ಮತ್ತು ಈ ಭಾಗದ ವಿದ್ಯುತ್ ಜಾಲವನ್ನು ಉತ್ತಮಗೊಳಿಸುವ ಸಲುವಾಗಿ 110 ಕೆ.ವಿ. ಭಾಗ್ಯನಗರ, 110 ಕೆ.ವಿ. ಗೊಂಡಬಾಳ, 110 ಕೆ.ವಿ. ಕಲ್‌ತಾವರೆಗೇರಾ, 110 ಕೆ.ವಿ. ಬಂಡಿಹರ್ಲಾಪುರ, 110 ಕೆ.ವಿ. ಚಿಕ್ಕಬಗನಾಳ ಮತ್ತು 110 ಕೆ.ವಿ. ಚಿಕ್ಕಕಾಸನಕಂಡಿ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಮತ್ತು ಈ ಯೋಜನೆಗಳ ಪ್ರಸ್ತಾವನೆಗಳಿಗೆ ನಿಗಮದ ತಾಂತ್ರಿಕ ಸಮನ್ವಯ ಸಮಿತಿ ಸಭೆಯ ಅನುಮೋದನೆಯನ್ನು ಪಡೆಯಲಾಗಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಕೊಪ್ಪಳ ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರಸನ್ನ ಗಡಾದ, ಕೊಪ್ಪಳ ಜೆಸ್ಕಾಂ ಅಧೀಕ್ಷಕ ಅಭಿಯಂತರರಾದ ಮೋಟ್ಲಾ ನಾಯ್ಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಯು.ವೀರೇಶ ಹಾಗೂ ಎಲ್.ಅರುಣ, ಮಾಜಿ ಜಿ.ಪಂ ಅಧ್ಯಕ್ಷರಾದ ಎಸ್.ಬಿ ನಾಗರಳ್ಳಿ, ಕೆ.ಎಂ.ಎಫ್ ನಿರ್ದೇಶಕರಾದ ಕೃಷ್ಣ ರೆಡ್ಡಿ, ಜಿ.ಪಂ ಮಾಜಿ ಸದಸ್ಯರಾದ ಗೂಳಪ್ಪ ಹಲಗೇರಿ ಮುಖಂಡರಾದ ಸುರೇಶ ರೆಡ್ಡಿ, ಕಾಟನ್ ಪಾಶಾ, ಯಂಕನಗೌಡ್ರ ಹಿರೇಗೌಡ್ರ, ಭರಮಪ್ಪ ಹಟ್ಟಿ, ಶಾಹೀದ್, ಅನ್ವರ ಅಳವಂಡಿ, ಗುರುಬಸವರಾಜ್ ಹಳ್ಳಿಕೇರಿ, ಭೀಮಣ್ಣ ಬೋಚನಹಳ್ಳಿ, ತೋಟಪ್ಪ ಸಿಂಟ್ರ, ಶಿವಕುಮಾರ್ ಶೆಟ್ಟರ್, ಹನಮೇಶ್ ಹೊಸಳ್ಳಿ, ಆನಂದ ಕಿನ್ನಾಳ ಸೇರಿದಂತೆ ಹಲವು ಗಣ್ಯರು, ಮುಖಂಡರು, ಇತರೆ ಜನಪ್ರತಿನಿಧಿಗಳು, ಜೆಸ್ಕಾ ಮತ್ತು ಕೆಪಿಟಿಸಿಎಲ್.ನ ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಅಧಿಕಾರಿಗಳು, ಸಿಬ್ಬಂದಿ, ರೈತರು, ನಿಲೋಗುಪುರ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

# ಅಮೃತ ಮಹೋತ್ಸವ ಸಮಿತಿಯಿಂದ ಸ್ಕೂಲ್ ಬ್ಯಾಗ್ ವಿತರಣೆ




• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ತಾಲೂಕಿನ ವಾಸರಕುದ್ರಿಗೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಶಾಲಾ ಅಮೃತ ಮಹೋತ್ಸವ ಸಮಿತಿಯ ವತಿಯಿಂದ ಸೋಮವಾರ ಸ್ಕೂಲ್ ಬ್ಯಾಗ್ ವಿತರಿಸಿದರು. ಸಮಿತಿಯ ಪ್ರಮುಖರಾದ ಗೋಪಾಲಕೃಷ್ಣನಾಯಕ ಮಾತನಾಡಿ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬ್ಯಾಗ್ ವಿತರಣೆ ಮಾಡಲಾಗಿದೆ. ಶಾಲೆಯ ಉಳಿವಿಗಾಗಿ ಗ್ರಾಮಸ್ಥರು ಒಟ್ಟಾಗಿ ಸೇರಿ ಅಭಿವೃದ್ಧಿ ಪಡಿಸುವತ್ತ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದೇವೆ ಎಂದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರದೀಪ ಎನ್. ನಾಯಕ, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಪ್ರಶಾಂತ ಎಸ್. ನಾಯಕ, ಪ್ರಮುಖರಾದ ನಾರಾಯಣ ಎಚ್. ನಾಯಕ ಅವರು ವೈಯಕ್ತಿಕವಾಗಿ ಶಾಲಾ ವಿದ್ಯಾರ್ಥಿಗಳಿಗೆ ನೋಟ್ ಬುಕ್ ನೀಡಿದರು. ಆರ್.ಎಸ್. ನಾಯಕ, ನೀಲಕಂಠ ಡಿ. ನಾಯಕ, ಮನೋಹರ ಎಂ. ನಾಯಕ, ಬಾಬು ನಾಯಕ, ನೇಸರ ನಾಯಕ, ಪ್ರಸನ್ನ ನಾಯಕ, ವೆಂಕಟ್ರಮಣ ಆಗೇರ, ಮುಖ್ಯಾಧ್ಯಾಪಕ ಅರುಣ ನಾಯ್ಕ ಸ್ವಾಗತಿಸಿದರು. ಶಿಕ್ಷಕ ವಿನಾಯಕ ಹೆಗಡೆ ವಂದಿಸಿದರು.

# ಅಡಕೆ ಮರಕ್ಕೆ ರೋಗಬಾಧೆ : ಉದುರುತ್ತಿರುವ ಅಡಕೆಯಿಂದಾಗಿ ರೈತರು ಕಂಗಾಲು





• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ವಾಣಿಜ್ಯ ಬೆಳೆ ಎನಿಸಿಕೊಂಡಿರುವ ಅಡಕೆಗೆ ಈಗ ಕೊಳೆ ರೋಗ ಕಾಣಿಸಿಕೊಂಡಿದ್ದು, ಒಡೆದು ಉದುರುತ್ತಿದೆ. ಇದರಿಂದಾಗಿ ಈ ಬೆಳೆಯನ್ನು ನಂಬಿಕೊಂಡು ತಾಲೂಕಿನಲ್ಲಿಯೇ ಸಾಕಷ್ಟು ರೈತರು ಜೀವನ ನಡೆಸುತ್ತಿದ್ದಾರೆ. ಮುಖ್ಯವಾಗಿ ಅಚವೆ, ಹಿಲ್ಲೂರು, ಅಗಸೂರು, ವಾಸರಕುದ್ರಿಗೆ, ಸುಂಕಸಾಳ, ಡೋಂಗ್ರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಡಕೆಯನ್ನೇ ಮುಖ್ಯ ಬೆಳೆಯನ್ನಾಗಿ ಮಾಡಿಕೊಂಡಿದ್ದಾರೆ.

ಜಿಲ್ಲೆಯಲ್ಲಿ 32 ಸಾವಿರ ಹೆಕ್ಟರ್‌ಗೂ ಹೆಚ್ಚು ಪ್ರದೇಶದಲ್ಲಿ ಅಡಕೆಯನ್ನು ಬೆಳೆಯಲಾಗುತ್ತದೆ. ಹಾಗೇ ತಾಲೂಕಿನ ಕರಾವಳಿ ಪ್ರದೇಶಗಳಲ್ಲಿ ಸಣ್ಣಪುಟ್ಟ ಅಡಕೆ ತೋಟ ಮಾತ್ರ ಇದೆ. ಆದರೂ ಕೂಡ ಒಂದಿಷ್ಟು ಜಾಗದಲ್ಲಿ ಅಡಕೆ ಗಿಡವನ್ನು ಹಾಕಿಕೊಂಡು ಅದರಿಂದ ಒಂದಿಷ್ಟು ಆದಾಯ ಕಂಡುಕೊಂಡಿದ್ದಾರೆ.

ತಾಲೂಕಿನ ಮೇಲ್ಭಾಗದ ಪ್ರದೇಶಗಳಲ್ಲಿ ಅಡಕೆಯನ್ನು ಒಂದರಿಂದ ಹತ್ತು ಹದಿನೈದು ಎಕರೆ ಪ್ರದೇಶದವರೆಗೆ ಒಬ್ಬೊಬ್ಬ ರೈತರ ತೋಟವಿದೆ. ಆದರೆ ಅಡಕೆ ಈಗ ಒಡೆದು ಬೀಳುತ್ತಿರುವುದು ರೈತರ ನೋವಿಗೆ ಕಾರಣವಾಗಿದೆ. ಪ್ರತಿದಿನ ಬಿದ್ದ ಅಡಕೆಯನ್ನು ಆರಿಸುವುದೇ ಅವರ ಕೆಲಸವಾಗಿದೆ. ರೋಗದಿಂದಾಗಿ ಅಡಕೆ ಉದುರುತ್ತಿದೆ ಎಂದು ಪ್ರಗತಿಪರ ರೈತ ಶಿವರಾಮ ಹೆಗಡೆ ಮಾಹಿತಿ ನೀಡಿದರು.

# ಸುನಂದಾ ಭು.ದಸ್ತೇನವರ್ ನಿಧನ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ತಾಲ್ಲೂಕಿನ ಹಿರೇಸಿಂದೋಗಿ ಗ್ರಾಮದ ನಿವಾಸಿ ಸುನಂದಾ ಭುಜಬಲ್ಲೆಪ್ಪ ದಸ್ತೇನವರ್(73) ಇಂದು ಜುಲೈ 26 ರಂದು ಸಂಜೆ ಕೊನೆಯುಸಿರೆಳೆದರು, ಕಳೆದ ಮೂರು ತಿಂಗಳಿನಿಂದ ಅವರು ಪಾರ್ಶ್ವವಾಯುವಿನಿಂದ ಬಳಲುತ್ತಿದ್ದರು.

ಪತ್ರಕರ್ತರಾದ ಬಾಗಲಕೋಟೆಯ ಕುಮಾರ್ ದಸ್ತೇನವರ್ ಹಾಗೂ ಕೊಪ್ಪಳದ ನಾಭಿರಾಜ ದಸ್ತೇನವರ್ ಅವರು ಮೃತರ ಪುತ್ರರಾಗಿದ್ದಾರೆ. ಓರ್ವ ಪುತ್ರಿ, ಅಳಿಯ, ಸೊಸೆಯಂದಿರು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಮೃತರ ನೇತ್ರಗಳನ್ನು ಕುಟುಂಬದ ಸದಸ್ಯರು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಮೂಲಕ ಜಿಲ್ಲಾ ಆಸ್ಪತ್ರೆಗೆ ದಾನ ಮಾಡಿದರು,

ಪಾರ್ಥಿವ ಶರೀರದ ಅಂತ್ಯಕ್ರಿಯೆ ಜುಲೈ 27, ಸೋಮವಾರ ಬೆಳಿಗ್ಗೆ 11 ಗಂಟೆಗೆ ಕೊಪ್ಪಳದಲ್ಲಿ ಜರುಗಿತು.

# ಮೊರಾಮ್ ಮಾಫಿಯಾ ಅಟ್ಟಹಾಸ: ನಂಬರ್ ಪ್ಲೇಟ್ ಇಲ್ಲದ ಟಿಪ್ಪರ್ ಓಡಾಟ :ಅಧಿಕಾರಿಗಳ ವಿರುದ್ಧ ಜಯ ಕರ್ನಾಟಕ ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್





ಜು.27: ತಾಲೂಕಿನಾದ್ಯಂತ ಅಕ್ರಮ ಮೊರಾಮ್ (ಮಣ್ಣು) ಸಾಗಣೆ ಮಿತಿಮೀರಿದ್ದು, ನಂಬರ್ ಪ್ಲೇಟ್ ಇಲ್ಲದ ಟ್ರಿಪ್ಪರ್ ವಾಹನಗಳು ರಾಜಾರೋಷವಾಗಿ ಸಾರ್ವಜನಿಕ ರಸ್ತೆಗಳಲ್ಲಿ ಸಂಚರಿಸುತ್ತಿವೆ. ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಮೌನ ವಹಿಸಿರುವುದು ಸಾರ್ವಜನಿಕರಲ್ಲಿ ತೀವ್ರ ಅನುಮಾನಕ್ಕೆ ಕಾರಣವಾಗಿದೆ ಎಂದು ಜಯ ಕರ್ನಾಟಕ ಸಂಘಟನೆ ತಾಲೂಕು ಅಧ್ಯಕ್ಷ ನಾಗೇಶ್ ಗದ್ದಿಗಿ ಆರೋಪಿಸಿದರು.

ತಾಲೂಕಿನ ವಿವಿಧ ಭಾಗಗಳಲ್ಲಿ ಅಕ್ರಮ ಮೊರಾಮ್ ಸಾಗಣೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ವೇಗವಾಗಿ ಸಂಚರಿಸುವ ಟ್ರಿಪ್ಪರ್‌ಗಳಿಂದ ಸಾರ್ವಜನಿಕರ ಜೀವಕ್ಕೆ ಅಪಾಯ ಎದುರಾಗಿದೆ. ಶಾಲಾ ಮಕ್ಕಳು, ಮಹಿಳೆಯರು ಹಾಗೂ ದ್ವಿಚಕ್ರ ವಾಹನ ಸವಾರರು ಭಯಭೀತರಾಗಿ ರಸ್ತೆಗಳಲ್ಲಿ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೂ ಕಂದಾಯ ಇಲಾಖೆ, ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳು ಪರಿಣಾಮಕಾರಿ ಕಾರ್ಯಾಚರಣೆ ನಡೆಸುತ್ತಿಲ್ಲ ಎಂದು ದೂರಿದರು.

ಈ ಕುರಿತು ತಾಲೂಕು ಆಡಳಿತ ಹಾಗೂ ಸಹಾಯಕ ಆಯುಕ್ತರ ಗಮನಕ್ಕೆ ಹಲವು ಬಾರಿ ತಂದಿದ್ದರೂ ಯಾವುದೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿಲ್ಲ. ಮೇಲಧಿಕಾರಿಗಳಿಗೆ ಕರೆ ಮಾಡಿದರೂ ಕರೆ ಸ್ವೀಕರಿಸದೇ ನಿರ್ಲಕ್ಷ್ಯ ತೋರುತ್ತಿದ್ದಾರೆ. ಇದರಿಂದ ಅಕ್ರಮ ಚಟುವಟಿಕೆ ನಡೆಸುವವರಿಗೆ ಅಧಿಕಾರಿಗಳ ಮೌನವೇ ಪರೋಕ್ಷ ಬೆಂಬಲವಾಗಿದೆಯೇ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಿದೆ ಎಂದು ಹೇಳಿದರು.

"ನಂಬರ್ ಪ್ಲೇಟ್ ಇಲ್ಲದ ಟ್ರಿಪ್ಪರ್‌ಗಳಿಂದ ಅಪಘಾತ ಸಂಭವಿಸಿ ಅಮಾಯಕರು ಪ್ರಾಣ ಕಳೆದುಕೊಂಡರೆ ಅದರ ಹೊಣೆ ಯಾರು ಹೊರುತ್ತಾರೆ?" ಎಂದು ಅವರು ಪ್ರಶ್ನಿಸಿದರು.

ಅಕ್ರಮ ಮೊರಾಮ್ ಸಾಗಣೆ ನಡೆಸುತ್ತಿರುವ ಟ್ರಿಪ್ಪರ್‌ಗಳನ್ನು ತಕ್ಷಣ ವಶಪಡಿಸಿಕೊಳ್ಳಬೇಕು, ನಂಬರ್ ಪ್ಲೇಟ್ ಇಲ್ಲದ ವಾಹನಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಹಾಗೂ ಕರ್ತವ್ಯಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ತಹಸೀಲ್ದಾರ್ ಕಚೇರಿ ಸೇರಿದಂತೆ ತಾಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಕಚೇರಿಗಳ ಎದುರೇ–ಯೇ ಮೊರಾಮ್ ತುಂಬಿದ ವಾಹನಗಳು ನಿರಂತರ ಸಂಚರಿಸುತ್ತಿದ್ದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಸಾರ್ವಜನಿಕರು ಪ್ರಶ್ನಿಸಿದರೆ ಬೇಜವಾಬ್ದಾರಿಯ ಉತ್ತರ ನೀಡಲಾಗುತ್ತಿದೆ. ಅಕ್ರಮ ಸಾಗಣೆಯಿಂದ ರಸ್ತೆಗಳು ಸಂಪೂರ್ಣ ಹಾಳಾಗುತ್ತಿದ್ದು, ಸಾರ್ವಜನಿಕರಿಗೆ ತೆ–ೂಂದರೆ ಉಂಟಾಗಿದೆ. ಆದ್ದರಿಂದ ಕೂಡಲೇ ಅಕ್ರಮ ಮೊರಾಮ್ ಸಾಗಣೆ ತಡೆಗಟ್ಟಬೇಕು. ಇಲ್ಲವಾದರೆ ಜಯ ಕರ್ನಾಟಕ ಸಂಘಟನೆ ವತಿಯಿಂದ ಉಗ್ರ ಹೋರಾಟ ನಡೆಸಲಾಗುವುದು ಎಂದು ನಾಗೇಶ್ ಗದ್ದಿಗಿ ಎಚ್ಚರಿಕೆ ನೀಡಿದರು.

# ಮಳೆಗಾಗಿ ಹಾಗೂ ರೈತರ-ನಾಡಿನ ಜನತೆಯ ಒಳಿತಿಗಾಗಿ ಸಪ್ತ ಭಜನಾ ಕಾರ್ಯಕ್ರಮ


• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ತಾಲೂಕಿನ ಗುಡಗೇರಿ ಗ್ರಾಮದಲ್ಲಿ ಉತ್ತಮ ಮಳೆ, ಸಮೃದ್ಧ ಬೆಳೆ ಹಾಗೂ ನಾಡಿನ ರೈತರು ಮತ್ತು ಜನತೆಯ ಒಳಿತಿಗಾಗಿ ಜುಲೈ 20 ರಿಂದ 27ರವರೆಗೆ ಸತತ ಏಳು ದಿನಗಳ ಕಾಲ ಸಪ್ತ ಭಜನಾ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಹಮ್ಮಿಕೊಳ್ಳಲಾಗಿದೆ. ಏಳು ದಿನಗಳ ಕಾಲ ನಡೆಯುವ ಈ ಸಪ್ತ ಭಜನಾ ಕಾರ್ಯಕ್ರಮವು ಜುಲೈ 27ರಂದು ಬೆಳಿಗ್ಗೆ ಅಳವಂಡಿ ಶ್ರೀ ಮರುಳಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಸಮ್ಮುಖದಲ್ಲಿ ಹಾಗೂ ಸಾನಿಧ್ಯದಲ್ಲಿ ಸಮಾರೋಪಗೊಳ್ಳಲಿದೆ. ಈ ಭಕ್ತಿ ಸೇವಾ ಕಾರ್ಯಕ್ರಮಕ್ಕೆ ಏಳು ದಿನಗಳ ಕಾಲ ಸಹಕಾರ ನೀಡಿದ ಗ್ರಾಮದ ಯುವಕ ಮಿತ್ರರು, ಭಜನಾ ತಂಡದವರು, ಸಹೋದರ–ಸಹೋದರಿಯರು ಹಾಗೂ ನಿರಂತರವಾಗಿ ಪ್ರಸಾದ ವ್ಯವಸ್ಥೆ ಮಾಡಿಕೊಟ್ಟ ಭಕ್ತರಿಗೆ ಆಯೋಜಕ ಸಮಿತಿಯ ವತಿಯಿಂದ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಲಾಗಿದೆ. ಈ ಸಪ್ತ ಭಜನಾ ಕಾರ್ಯಕ್ರಮಕ್ಕೆ ಸಹಕಾರ, ಬೆಂಬಲ ಹಾಗೂ ಪ್ರೋತ್ಸಾಹ ನೀಡಿದ ಗುಡಗೇರಿ ಗ್ರಾಮದ ಸಮಸ್ತ ಗ್ರಾಮಸ್ಥರಿಗೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಜನಾ ತಂಡಗಳಿಗೂ ಆಯೋಜ–ಕ ಸಮಿತಿಯ ವತಿಯಿಂದ ಧನ್ಯವಾದಗಳನ್ನು ಸಲ್ಲಿಸಲಾಗಿದೆ. ಈ ಭಕ್ತಿ ಸೇವೆಯ ಮೂಲಕ ನಾಡಿನ ರೈತರಿಗೆ ಉತ್ತಮ ಮಳೆ, ಸಮೃದ್ಧ ಬೆಳೆ ಹಾಗೂ ನಾಡಿನ ಜನತೆಗೆ ಸುಖ, ಶಾಂತಿ ಮತ್ತು ಸಮೃದ್ಧಿ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಲಾಗಿದೆ.

# ಅಂತರಾತ್ಮದ ಮೌನ ಪರಮಾತ್ಮನನ್ನು ಸೇರಿಸುತ್ತದೆ:ಹಾರಕೂಡ ಶ್ರೀ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ



ಮೌನವೆಂದರೆ ಶಬ್ದದ ಕೊರತೆ ಅಲ್ಲ, ಅದೊಂದು ವಿವೇಚನೆಯ ಗರಿಷ್ಠ ಹಂತ, ಹಾಗಾಗಿ ಯಾರು ಅಂತರಾತ್ಮದ ಮೌನ ಅನುಸರಿಸುವರೊ ಅಂಥಹವರು ಪರಮಾತ್ಮನ ಕಕ್ಷೆಯಲ್ಲಿ ಪ್ರವೇಶ ಪಡೆಯುತ್ತಾರೆ ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಆಯೋಜಿಸಿದ ಧರ್ಮ ಸಭೆಯ ಪಾವನ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಸಂಸಾರದಲ್ಲಿ ಬರುವ ಅನೇಕ ಅವಘಡಗಳನ್ನು ತಪ್ಪಿಸಲು ಮೌನವನ್ನು ಒಂದು ಪ್ರಬಲ ಅಸ್ತ್ರವಾಗಿ ಬಳಸಿಕೊಳ್ಳಬಹುದಾಗಿದೆ.

ಒಂದು ಕ್ಷಣದ ಮೌನದಿಂದ ವರ್ಷಗಟ್ಟಲೆ ಪಡುವ ಪಶ್ಚಾತ್ತಾಪವನ್ನು ಖಂಡಿತ ತಪ್ಪಿಸಬಹುದು, ವ್ಯಕ್ತಿ, ಸಮಯ, ಸಂದರ್ಭಗಳಿಗೆ ಅನುಗುಣವಾಗಿ ಮೌನಕ್ಕೆ ಜಾರುವ ಕಲೆ ತಿಳಿದವ ನೆಮ್ಮದಿಯಿಂದ ಬದುಕಬಲ್ಲ ಎಂದು ಹೇಳಿದ ಪೂಜ್ಯರು ಸಮಸ್ತ ಭಕ್ತ ಸಂಕುಲ ಶ್ರೇಯಸ್ಸಿನಿಂದ ಬದುಕುವಂತಾಗಲಿ ಎಂದು ಶುಭ ಹಾರೈಸಿದರು.

ಬಸವರಾಜ ಪೊಲೀಸ್ ಪಾಟೀಲ, ರಾಜಕುಮಾರ ಯಾಚೆ, ಜಯಪ್ರಕಾಶ ಬಿರಾದಾರ, ಮಹಾಂತಪ್ಪ ಶ್ರೀಚಂದ, ಸುಧಾಕಾರ ಪಾಟೀಲ, ಜಗನ್ನಾಥ ಕಾರಭಾರಿ, ಗೋವಿಂದ ರೆಡ್ಡಿ, ಶ್ರೀರಂಗ ಜಮಾದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಧನರಾಜ ಕ್ಷೀರಸಾಗರ ಸ್ವಾಗತಿಸಿದರು.

ಕಾರ್ತಿಕ ಸ್ವಾಮಿ ಯಲದಗುಂಡಿ ಹಾಗೂ ಶರಣಪ್ಪ ಜಮಾದಾರ ಪ್ರಾರ್ಥನೆ ಗೀತೆ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಧನರಾಜ ಕ್ಷೀರಸಾಗರ ಸಿರಗಾಪೂರ ಪರಿವಾರದ ವತಿಯಿಂದ ಹಾರಕೂಡ ಶ್ರೀಗಳ 1020ನೇ ತುಲಾಭಾರ ಜರುಗಿತು.

# ಮಾಧ್ಯಮಗಳ ವರದಿ ಮತ್ತು ಹೋರಾಟಗಾರರ ಎಚ್ಚರಿಕೆ ಉತ್ತಮ ಆಡಳಿತಕ್ಕೆ ಸಹಕಾರಿ: ನಾಗೇಂದ್ರ ಪ್ರಸಾದ್

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಗಳು ಮತ್ತು ಸಾಮಾಜಿಕ ಹೋರಾಟಗಾರರು ಆಡಳಿತ ವ್ಯವಸ್ಥೆಗೆ ಮಾರ್ಗದರ್ಶಕರಾಗಿದ್ದು, ಅವರ ವರದಿಗಳು ಹಾಗೂ ಎಚ್ಚರಿಕೆಗಳು ಅಧಿಕಾರಿಗಳು ಹೆಚ್ಚು ಜವಾಬ್ದಾರಿಯಿಂದ ಮತ್ತು ಪಾರದರ್ಶಕವಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗುತ್ತವೆ ಎಂದು ಬಳ್ಳಾರಿ ಜಿಲ್ಲಾಧಿಕಾರಿ ಕೆ. ನಾಗೇಂದ್ರ ಪ್ರಸಾದ್ ಅಭಿಪ್ರಾಯಪಟ್ಟರು.

ನಗರದ ಡಿಸಿ ಕಚೇರಿ ಆವರಣದಲ್ಲಿರುವ ಗಾಂಧಿ ಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಬಳ್ಳಾರಿ ಜಿಲ್ಲಾ ಘಟಕ ಆಯೋಜಿಸಿದ್ದ 182ನೇ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾಧಿಕಾರಿಗಳು ತಮ್ಮ ಭಾಷಣದಲ್ಲಿ, ಸಮಾಜದಲ್ಲಿ ಉತ್ತಮ ಆಡಳಿತ ಸ್ಥಾಪನೆಗೆ ಮಾಧ್ಯಮಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು. ಪತ್ರಿಕೆಗಳು, ಟಿವಿ ಹಾಗೂ ಡಿಜಿಟಲ್ ಮಾಧ್ಯಮಗಳಲ್ಲಿ ಪ್ರಕಟವಾಗುವ ವರದಿಗಳು ಆಡಳಿತ ವ್ಯವಸ್ಥೆಯ ಗಮನಕ್ಕೆ ಸಮಸ್ಯೆಗಳನ್ನು ತಂದು, ಅವುಗಳಿಗೆ ಶೀಘ್ರ ಪರಿಹಾರ ಕಂಡುಕೊಳ್ಳಲು ನೆರವಾಗುತ್ತವೆ ಎಂದು ತಿಳಿಸಿದರು.

ಅವರು, "ಸಮಾಜದಲ್ಲಿ ಮಾಧ್ಯಮಗಳು ಹಾಗೂ ಹೋರಾಟಗಾರರು ಅಗತ್ಯ. ಬಳ್ಳಾರಿಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ಜನರ ಸಮಸ್ಯೆಗಳನ್ನುಗುರುತಿಸಿ ಆಡಳಿತದ ಗಮನಕ್ಕೆತರುತ್ತಿದ್ದಾರೆ. ಇದರಿಂದ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಹಾಗೂ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿದೆ" ಎಂದು ಹೇಳಿದರು.ಸಾಮಾಜಿಕ ಸಮಸ್ಯೆಗಳ ಬಗ್ಗೆ ಮಾಧ್ಯಮಗಳ ಜಾಗೃತಿ

ಮಾಧ್ಯಮಗಳು ಹೆಲ್ಮೆಟ್ ಧರಿಸುವ ಅಗತ್ಯತೆ, ಡ್ರಗ್ಸ್ ಮಾರಾಟ ಮತ್ತು ಮಾದಕ ವ್ಯಸನದ ವಿರುದ್ಧ ಜಾಗೃತಿ, ಬಾಲ್ಯ ವಿವಾಹ ತಡೆ, ಬಾಲ ಗರ್ಭಿಣಿಯರ ಸಮಸ್ಯೆ ಸೇರಿದಂತೆ ಅನೇಕ ಸಾಮಾಜಿಕ ವಿಷಯಗಳ ಬಗ್ಗೆ ನಿರಂತರವಾಗಿ ವರದಿ ಮಾಡುತ್ತಿವೆ. ಇಂತಹ ಜಾಗೃತಿ ಕಾರ್ಯಕ್ರಮಗಳು ಸಮಾಜದಲ್ಲಿ ಉತ್ತಮ ಬದಲಾವಣೆ ತರಲು ನೆರವಾಗುತ್ತಿವೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಅಭಿವೃದ್ಧಿ ಕಾಮಗಾರಿಗಳಿಗೆ ಗುಣಮಟ್ಟದ ಆದ್ಯತೆ

ಕೆಎಂಇಆರ್‌ಸಿ (ಏಒಇಖಅ) ನಿಧಿಯಿಂದ ಜಿಲ್ಲೆಯಾದ್ಯಂತ ಅನೇಕ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ಅವು ಗುಣಮಟ್ಟದೊಂದಿಗೆ ಪೂರ್ಣಗೊಳ್ಳಬೇಕು. ಜಿಲ್ಲೆಯ ಸಮಗ್ರ ಅಭಿವೃದ್ಧಿಯೇ ತಮ್ಮ ಪ್ರಮುಖ ಗುರಿಯಾಗಿದ್ದು, ಸಾರ್ವಜನಿಕರ ಸಹಕಾರದೊಂದಿಗೆ ಉತ್ತಮ ಆಡಳಿತ ನೀಡಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಿದರು.

ಪತ್ರಕರ್ತರಿಗೆ ಭವನ ಹಾಗೂ ಸೌಲಭ್ಯಗಳ ಭರವಸೆ

ಪತ್ರಕರ್ತರ ಸಂಘಕ್ಕೆ ಸುಸಜ್ಜಿತ ಭವನ ನಿರ್ಮಾಣದ ಅಗತ್ಯವಿದೆ ಎಂದು ಒಪ್ಪಿಕೊಂಡ ಜಿಲ್ಲಾಧಿಕಾರಿಗಳು, ಸದ್ಯಕ್ಕೆ ಸೂಕ್ತ ಕಟ್ಟಡ ಅಥವಾ ಜಾಗ ಒದಗಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ವಾಹನ ಸೌಲಭ್ಯ ಒದಗಿಸುವುದು, ಪತ್ರಕರ್ತರಿಗೆ ಆರೋಗ್ಯ ಚಿಕಿತ್ಸಾ ಸೌಲಭ್ಯ, ಅವರ ಮಕ್ಕಳಿಗೆ ಶಿಕ್ಷಣ ನೆರವು ಸೇರಿದಂತೆ ವಿವಿಧ ಕಲ್ಯಾಣ ಯೋಜನೆಗಳನ್ನು ಜಿಲ್ಲೆಯ ಕೈಗಾರಿಕೆಗಳ ಸಿಎಸ್‌ಆರ್ (ಅಖಖ) ನಿಧಿಯ ಮೂಲಕ ಜಾರಿಗೊಳಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಇದೇ ವೇಳೆ ಗಾಂಧಿ ಭವನಕ್ಕೆ ವಾರ್ತಾ ಇಲಾಖೆಯ ಕಚೇರಿಯನ್ನು ಸ್ಥಳಾಂತರಿಸುವ ಬಗ್ಗೆಯೂ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮಾಧ್ಯಮ ಅಕಾಡೆಮಿಯ ಕಾರ್ಯಗಳ ಕುರಿತು ಉಪನ್ಯಾಸ

ಕರ್ನಾಟಕ ಮಾಧ್ಯಮ ಅಕಾಡೆಮಿಯ ಸದಸ್ಯ ಕೆ. ನಿಂಗಜ್ಜ ಮಾತನಾಡಿ, ಮಾಧ್ಯಮ ಅಕಾಡೆಮಿಯು ಪತ್ರಕರ್ತರ ವೃತ್ತಿಪರ ಕೌಶಲ್ಯ ಅಭಿವೃದ್ಧಿ, ತರಬೇತಿ ಕಾರ್ಯಕ್ರಮಗಳು ಹಾಗೂ ವಿವಿಧ ಕಲ್ಯಾಣ ಸೌಲಭ್ಯಗಳನ್ನು ಒದಗಿಸುತ್ತಿದೆ ಎಂದು ವಿವರಿಸಿದರು. ಪತ್ರಕರ್ತರು ತಮ್ಮ ವೃತ್ತಿಪರ ಸಾಮರ್ಥ್ಯವನ್ನು ನಿರಂತರವಾಗಿ ಹೆಚ್ಚಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಘದ ಕಾರ್ಯಚಟುವಟಿಕೆಗಳ ಪರಿಚಯ

ಕಾರ್ಯಕ್ರಮದ ಪ್ರಸ್ತಾವಿಕ ಭಾಷಣ ಮಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಎನ್. ವೀರಭದ್ರಗೌಡ ಅವರು, ಸಂಘದ ಕಾರ್ಯಚಟುವಟಿಕೆಗಳು, ಸದಸ್ಯರಿಗೆ ನೀಡಲಾಗುತ್ತಿರುವ ಸೌಲಭ್ಯಗಳು ಹಾಗೂ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ನೇತೃತ್ವದಲ್ಲಿ ಸಂಘ ಬಲಿಷ್ಠವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡಿದರು.ಎಸ್‌ಪಿ ಡಾ. ಸುಮನ್ ಡಿ. ಪೆನ್ನೇಕರ್ ಸಂದೇಶ

ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಸುಮನ್ ಡಿ. ಪೆನ್ನೇಕರ್ ಮಾತನಾಡಿ, ಸಮಾಜದ ಪ್ರತಿಯೊಬ್ಬರೂ ಸಾಮಾಜಿಕ ಬದ್ಧತೆಯಿಂದ ಕೆಲಸ ಮಾಡಬೇಕಿದೆ ಎಂದರು.

"ಪತ್ರಕರ್ತರ ಲೇಖನಿ ಅತ್ಯಂತ ಶಕ್ತಿಶಾಲಿ ಅಸ್ತ್ರ. ಅವರು ಬರೆದ ಒಂದು ಸುದ್ದಿ ಲಕ್ಷಾಂತರ ಜನರನ್ನು ತಲುಪುತ್ತದೆ. ಆದ್ದರಿಂದ ಪತ್ರಕರ್ತರು ನಿಷ್ಪಕ್ಷಪಾತವಾಗಿ ಹಾಗೂ ಜವಾಬ್ದಾರಿಯಿಂದ ಕೆಲಸ ಮಾಡುತ್ತಿರುವುದು ಶ್ಲಾಘನೀಯ" ಎಂದು ಹೇಳಿದರು.

ವಾರ್ತಾ ಇಲಾಖೆಯ ಮಾಹಿತಿ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ.ವಿ. ತುಕರಾಂ ಮಾತನಾಡಿ, ಅನೇಕ ಮಾಧ್ಯಮ ಸಂಸ್ಥೆಗಳು ತಮ್ಮ ಪ್ರತಿನಿಧಿಗಳಿಗೆ ಸಮರ್ಪಕ ಸಾಮಾಜಿಕ ಭದ್ರತೆ ಒದಗಿಸುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ಪತ್ರಕರ್ತರು ಅಗತ್ಯ ದಾಖಲೆಗಳನ್ನು ಸಲ್ಲಿಸಿದರೆ ಸರ್ಕಾರದಿಂದ ಬಸ್ ಪಾಸ್ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಪಡೆಯಬಹುದು ಎಂದು ತಿಳಿಸಿದರು. ಇಲಾಖೆಯಿಂದ ಪತ್ರಕರ್ತರಿಗೆ ಮೀಡಿಯಾ ಕಿಟ್ ವಿತರಿಸಲಾಗುತ್ತಿದೆ ಎಂದೂ ಮಾಹಿತಿ ನೀಡಿದರು.

ಹಿರಿಯ ಪತ್ರಿಕೆ ವಿತರಕರಿಗೆ ಸನ್ಮಾನ

ಕಾರ್ಯಕ್ರಮದಲ್ಲಿ ಹಲವು ವರ್ಷಗಳಿಂದ ಪತ್ರಿಕೆ ವಿತರಣೆ ಸೇವೆ ಸಲ್ಲಿಸುತ್ತಿರುವ ಬಳ್ಳಾರಿಯ ಶಿವಾಜಿ ಮರಾಟಿ ರಾಜಶೇಖರ, ಸಿರುಗುಪ್ಪದ ಪಿ. ಹುಸೇನ್ ಸಾಬ್ ಹಾಗೂ ಕಂಪ್ಲಿಯ ವೈ.ಬಿ. ಆನಂದರಾವ್ ಅವರನ್ನು ಸನ್ಮಾನಿಸಲಾಯಿತು.ಇದೇ ವೇಳೆ, ಸಂಘದ ಸದಸ್ಯರ ಮಕ್ಕಳಲ್ಲಿ ಈ ವರ್ಷ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಯಿಂದ ಸಿರುಗುಪ್ಪದ ಮಾರೆಪ್ಪ ಅವರಿಗೆ ಸಹಾಯಧನದ ಚೆಕ್ ವಿತರಿಸಲಾಯಿತು.

ಗಣ್ಯರ ಉಪಸ್ಥಿತಿಕಾರ್ಯಕ್ರಮದಲ್ಲಿ ಸಂಘದ ಖಜಾಂಚಿ ಕೆ. ಅಶೋಕ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಹೆಚ್. ಬಸವರಾಜ್, ಸಂಘದ ಜಿಲ್ಲಾ ಹಾಗೂ ತಾಲೂಕು ಪದಾಧಿಕಾರಿಗಳು, ಪತ್ರಕರ್ತರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು, ಸಮಾಜದ ಗಣ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಮುಖ್ಯಾಂಶಗಳು182ನೇ ಪತ್ರಿಕಾ ದಿನಾಚರಣೆ-ಯ ಉದ್ಘಾಟನೆ.ಉತ್ತಮ ಆಡಳಿತಕ್ಕೆ ಮಾಧ್ಯಮಗಳ ಪಾತ್ರವನ್ನು ಜಿಲ್ಲಾಧಿಕಾರಿ ಶ್ಲಾಘನೆ.ಪತ್ರಕರ್ತರಿಗೆ ಭವನ, ಆರೋಗ್ಯ, ಶಿಕ್ಷಣ ಹಾಗೂ ವಾಹನ ಸೌಲಭ್ಯ ಒದಗಿಸುವ ಭರವಸೆ.

ಸಿಎಸ್‌ಆರ್ ನಿಧಿಯಿಂದ ಪತ್ರಕರ್ತರ ಕಲ್ಯಾಣ ಯೋಜನೆಗಳಿಗೆ ಪ್ರಯತ್ನ.ಮಾಧ್ಯಮ ಅಕಾಡೆಮಿಯಿಂದ ವೃತ್ತಿ ಕೌಶಲ್ಯ ಅಭಿವೃದ್ಧಿ ಕುರಿತು ಮಾಹಿತಿ.ಹಿರಿಯ ಪತ್ರಿಕೆ ವಿತರಕರಿಗೆ ಸನ್ಮಾನ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಶಸ್ತಿ.

ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಯಿಂದ ಸಹಾಯಧನ ವಿತರಣೆ.

ಈ ಕಾರ್ಯಕ್ರಮವು ಪತ್ರಕರ್ತರ ವೃತ್ತಿಯ ಮಹತ್ವ, ಮಾಧ್ಯಮಗಳ ಸಾಮಾಜಿಕ ಜವಾಬ್ದಾರಿ ಹಾಗೂ ಪತ್ರಕರ್ತರ ಕಲ್ಯಾಣಕ್ಕಾಗಿ ಸರ್ಕಾರ ಮತ್ತು ಆಡಳಿತ ಕೈಗೊಳ್ಳುತ್ತಿರುವ ಕ್ರಮಗಳನ್ನು ಒತ್ತಿ ಹೇಳಿದ ಮಹತ್ವದ ವೇದಿಕೆಯಾಗಿ ಗಮನ ಸೆಳೆಯಿತು.

# ಬರ ಪರಿಹಾರಕ್ಕೆ ಮೊದಲ ಆದ್ಯತೆ ನೀಡಿ: ಶ್ರೀರಾಮುಲು ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ರಾಜ್ಯದ ಹಲವು ಭಾಗಗಳಲ್ಲಿ ಮಳೆ ಕೊರತೆಯಿಂದಉಂಟಾಗಿರುವಬರಪರಿಸ್ಥಿತಿ ದಿನದಿಂದ ದಿನಕ್ಕೆಗಂಭೀರವಾಗುತ್ತಿದ್ದು, ರೈತರು ಹಾಗೂ ಗ್ರಾಮೀಣ ಜನರ ಸಂಕಷ್ಟ ನಿವಾರಣೆಗೆ ಸರ್ಕಾರ ಬರ ಪರಿಹಾರ ಕಾಮಗಾರಿಗಳಿಗೆ ಅತ್ಯುನ್ನತ ಆದ್ಯತೆ ನೀಡಬೇಕು ಎಂದು ಬಿಜೆಪಿ ಹಿರಿಯ ನಾಯಕ, ಮಾಜಿ ಸಚಿವ ಹಾಗೂ ಶಾಸಕ ಬಿ.ಶ್ರೀರಾಮುಲು ಆಗ್ರಹಿಸಿದರು.ನಗರದ ಸಿರುಗುಪ್ಪ ರಸ್ತೆಯಲ್ಲಿರುವ ತಮ್ಮ ನಿವಾಸದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳೆ ಅಭಾವದಿಂದ ಕೃಷಿ ಚಟುವಟಿಕೆಗಳು ತೀವ್ರ ಹಿನ್ನಡೆ ಅನುಭವಿಸಿದ್ದು, ಬೆಳೆ ಹಾನಿಯಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕುಡಿಯುವ ನೀರಿನ ಕೊರತೆ ಮತ್ತು ಜಾನುವಾರುಗಳಿಗೆ ಮೇವು ಅಭಾವ ಗ್ರಾಮೀಣ ಪ್ರದೇಶಗಳಲ್ಲಿ ಆತಂಕಕಾರಿ ಸ್ಥಿತಿಯನ್ನು ನಿರ್ಮಿಸಿದೆ ಎಂದು ಹೇಳಿದರು.ಬರಪೀಡಿತ ಪ್ರದೇಶಗಳ ಸಮಗ್ರ ಸಮೀಕ್ಷೆಯನ್ನು ಸರ್ಕಾರ ತಕ್ಷಣ ಕೈಗೊಂಡು, ಅರ್ಹ ರೈತರಿಗೆ ಯಾವುದೇ ವಿಳಂಬವಿಲ್ಲದೆ ಪರಿಹಾರಧನವನ್ನು ವಿತರಿಸಬೇಕು ಎಂದು ಒತ್ತಾಯಿಸಿದರು. ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮರ್ಪಕ ಪೂರೈಕೆ, ಮೇವು ಬ್ಯಾಂಕ್‌ಗಳ ಸ್ಥಾಪನೆ, ಜಾನುವಾರುಗಳ ರಕ್ಷಣೆ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ (ಎಂಎನ್‌ಆರ್‌ಇಜಿಎ) ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಮೂಲಕ ಜನರ ಸಂಕಷ್ಟ ನಿವಾರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ ಬರ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿಭಾಯಿಸಬೇಕು. ರೈತರ ಸಮಸ್ಯೆಗಳ ವಿಚಾರದಲ್ಲಿ ರಾಜಕೀಯ ಮಾಡುವ ಬದಲು, ಜನರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ತುರ್ತು ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ ಎಂದು ಅವರು ಅಭಿಪ್ರಾಯಪಟ್ಟರು. ರೈತರ ಕಲ್ಯಾಣಕ್ಕೆ ಸಂಬಂಧಿಸಿದ ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದರ ಜೊತೆಗೆ, ಬರದಿಂದ ತೊಂದರೆಗೊಳಗಾದ ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ಸರ್ಕಾರದ ಸೌಲಭ್ಯಗಳು ತಲುಪುವಂತೆ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಬೇಕು ಎಂದು ಶ್ರೀರಾಮುಲು ಒತ್ತಾಯಿಸಿದರು.

# ರಾಯಚೂರು ಜಿಲ್ಲಾ ಘಟಕದಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ




. ತಂದೆ ತಾಯಿಗಳು ಮಕ್ಕಳಿಗೆ ಜೀವನದ ಪಾಠದ ಜೋತೆಗೆ ಮಕ್ಕಳಿಗೆ ಆರೋಗ್ಯವಾಗಿ ಮತ್ತು ಸಂತೋಷವಾಗಿರಲು ಕಲಿಸಿದರೆ ಅವರ ಬದುಕು ಸುಂದರವಾಗುತ್ತದೆ ಎಂದು ಶ್ರೀ ಮಹರ್ಷಿ ವಾಲ್ಮೀಕಿ ಗುರು ಪೀಠ ರಾಜನಹಳ್ಳಿ ಪರಮಪೂಜ್ಯ ಡಾ. ಪ್ರಸನ್ನಾನಂದ ಸ್ವಾಮೀಜಿಯವರು ಹೇಳಿದರು

ನಗರದ ಜೋಳದ ರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ರಾಜ್ಯ ಸರಕಾರಿ ನೌಕರ ಸಂಘ, ಬಳ್ಳಾರಿ ಮತ್ತು ರಾಯಚೂರು ಜಿಲ್ಲಾ ಘಟಕದಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮಕ್ಕಳು ನೀಟ್ ಪರಿಕ್ಷೆ ಬರೆಯುವುದಕ್ಕಿಂತ ಮುಂಚೆ ಅವರನ್ನು ನೀಟಾಗಿ ಇರುವಂತೆ ಹೇಳುವುದೇ ತಂದೆ ತಾಯಿಗಳ ಕರ್ತವ್ಯ. ಮಕ್ಕಳಿಗೆ ಕಲಿಯುವ ಮನಸ್ಸಿದ್ದರೆ ಕಲಿಯಲು ಸಾಗರದಷ್ಟಿದೆ. ಆದರೆ ಅವರನ್ನು ಒತ್ತಾಯ ಪೂರ್ವಕವಾಗಿ ಅಂಕಗಳ ಹಿಂದೆ ತಂದೆ ತಾಯಿಗಳು ದೂಡುತ್ತಿರುವುದು ವಿಷಾದನೀಯ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಒಂದು ಪ್ರತಿಭೆ ಇದ್ದೇ ಇರುತ್ತದೆ ಅದನ್ನು ಪುರಸ್ಕರಿಸುವ ಕೆಲಸವಾಗಬೇಕು. ಮಕ್ಕಳಿಗೆ ಸಂಸ್ಕಾರ ನೀಡಿ ಉತ್ತಮ ಜೀವನ ರೂಪಿಸಿಕೊಳ್ಳಲು ಸಲಹೆ ನೀಡಬೇಕು ಇದು ತಂದೆ ತಾಯಿಗಳ ಪ್ರಮುಖ ಕರ್ತವ್ಯವಾಗಿದೆ ಎಂದರು.

ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಮಾತನಾಡಿ, ವಿದ್ಯಾರ್ಥಿಗಳಿಗೆ ಗುರು ಮತ್ತು ಗುರಿ ಎರಡು ಮುಖ್ಯ ಈ ಎರಡು ವಿಷಯಗಳನ್ನು ಮನದಲ್ಲಿಟ್ಟುಕೊಂಡು ಜವಾಬ್ದಾರಿಯಿಂದ ತಮ್ಮ ಮುಂದಿನ ಹೆಜ್ಜೆ ಇಡಬೇಕಾಗಿದೆ. ವಿದ್ಯಾರ್ಥಿಗಳಿಗೆ ಜ್ಞಾನದ ಜೊತೆ ಸಂಸ್ಕಾರವನ್ನು ಕಲಿಸುವುದು ಅವಶ್ಯಕವಾಗಿದೆ. ಹಣದಿಂದ ವಿವೇಕವನ್ನು ಪಡೆಯಲು ಸಾಧ್ಯವಿಲ್ಲ ಹೀಗಾಗಿ ತಂದೆಯ ತಾಯಿಗಳು ಮಕ್ಕಳಿಗೆ ಉತ್ತಮ ಮಾರ್ಗದರ್ಶನ ನೀಡುವ ಕೆಲಸವನ್ನು ಮಾಡಬೇಕಾಗಿದೆ. ರಾಜ್ಯ ಸರಕಾರಿ ನೌಕರರ ಸಂಘ ಇಲ್ಲಿಯವರೆಗೆ 60 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ 12 ಕೋಟಿ ರೂ. ಪ್ರತಿಭಾ ಪುರಸ್ಕಾರ ನೀಡಿದೆ ಎಂದರು.

ವಾಗ್ಮಿ ಹರಿಕ ಮಂಜುನಾಥ್ ಅವರು ಮಾತನಾಡಿ ನಮ್ಮ ಮಣ್ಣಿನ ಜ್ಞಾನ ಪರಂಪರೆ ಹಾಗೂ ಸಾಧನೆಯ ಅರಿವು ನಮ್ಮದಾಗಲಿ ಬಳ್ಳಾರಿ:"ಭಾರತೀಯ ಸಂಸ್ಕೃತಿ ಮತ್ತು ವೇದ-ಉಪನಿಷತ್ತುಗಳ ಜ್ಞಾನ ಪರಂಪರೆ ಇಡೀ ಜಗತ್ತಿಗೆ ಅಡಿಪಾಯವಾಗಿದೆ. ನಮ್ಮಲ್ಲಿರುವ ಅಪಾರ ಸಾಮರ್ಥ್ಯ ಮತ್ತು ಜ್ಞಾನದ ಅರಿವು ಪ್ರತಿಯೊಬ್ಬ ಭಾರತೀಯನಿಗೂ ಉಂಟಾದಾಗ ಮಾತ್ರ ದೇಶವು ಜಗತ್ತನ್ನು ಆಳಲು ಸಾಧ್ಯ," ಎಂದು ಹೇಳಿದರು.

ನಾವು ಹುಟ್ಟಿದಾಗ ತಾಯಿ ಸಂತೋಷ ಪಡಬೇಕು, ಬೆಳೆದಾಗ ತಂದೆ ಹೆಮ್ಮೆಪಡಬೇಕು, ಬಾಳಿದಾಗ ಸಮಾಜ ಸಂಭ್ರಮಿಸಬೇಕು ಮತ್ತು ಸತ್ತಾಗ ಸ್ಮಶಾನವೂ ಕಣ್ಣೀರು ಇಡುವಂತಿರಬೇಕು. ಅಂತಹ ಅರ್ಥಪೂರ್ಣ ಬದುಕನ್ನು ನಾವೆಲ್ಲರೂ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಳ್ಳಾರಿ ಮತ್ತು ರಾಯಚೂರು ಜಿಲ್ಲಾಗಳ 350 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿ, ರಾಜ್ಯ ಸರಕಾರಿ ನೌಕರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿಗು ಹಾಗೂ ಜಿಲ್ಲಾ ಅಧ್ಯಕ್ಷ ಡಾ. ನೆಲ್ಕುದ್ರಿ ಸದಾನಂದ ಅವರಿಗೆ ಜಿಲ್ಲಾ ಸರ್ಕಾರಿ ನೌಕರರಿಂದ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ತಿಪ್ಪಾರೆಡ್ಡಿ, ಜಿಲ್ಲಾ ಖಜಾಂಚಿ ಹನುಮಂತರಾಯ್, ರಾಜ್ಯ ಪರಿಷತ್ ಸದ್ಯಸ ಸುರೇಶ ಕುಮಾರ್, ರಾಯಚೂರು ಜಿಲ್ಲಾ ಅಧ್ಯಕ್ಷ ಕೃಷ್ಣ ಶಾವಂತಗೇರಿ, ಕಾರ್ಯದರ್ಶಿ ಭಿಮೇಶ ನಾಯಕ, ಜಿಲ್ಲಾ ಖಜಾಂಚಿ ಪ್ರಸನ್ನ ಕುಮಾರ್, ರಾಜ್ಯ ಪರಿಷತ್ ಸದ್ಯಸ ಎ. ಹಾಸನ್ ಉಲ್ ಹಕ್ ಹಾಗೂ ವಿಜಯನಗರ, ದಾವಣಗೆರಿ, ಗದಗ, ಬಾಗಲಕೋಟೆ, ಕಲಬುರ್ಗಿ, ವಿಜಯಪುರ, ಬೆಂಗಳೂರು, ಬಳ್ಳಾರಿ ಮತ್ತು ರಾಯಚೂರು ರಾಜ್ಯಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

# ಸಮೃದ್ಧ ಮಳೆಗಾಗಿ ಪ್ರಾರ್ಥಿಸಿ ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ನೇತೃತ್ವದಲ್ಲಿ ವರುಣ ಯಾಗ, ಹೋಮ, ಹವನ, ಸಪ್ತ ಭಜನೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಸಮೃದ್ಧ ಮಳೆ, ಬೆಳೆಗಾಗಿ ಪ್ರಾರ್ಥಿಸಿ ಜೆಡಿಎಸ್ ಜಿಲ್ಲಾಧ್ಯಕ್ಷರಾದ ಮೀನಳ್ಳಿ ತಾಯಣ್ಣ ಅವರ ನೇತೃತ್ವದಲ್ಲಿ ನಗರದ ಪಟೇಲ್ ನಗರ ಶ್ರೀ ಸಣ್ಣ ದುರ್ಗಮ್ಮ ದೇವಿ ದೇವಾಲಯದಲ್ಲಿ, ವಿಶೇಷ ಪೂಜೆ, ವರುಣ ಯಾಗ, ಹೋಮ, ಹವನ, 101 ಕಳಸ ಪೂಜೆ, ಸಪ್ತ ಭಜನೆ ಕಾರ್ಯಕ್ರಮವನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು. ವಿವಿಧ ಪಂಡಿತರಿಂದ ವರುಣ ಯಾಗ, ಹೋಮ ಹವನ, ಕಳಸ ಪೂಜೆ, ಶ್ರೀ ಸಣ್ಣ ದುರ್ಗಮ್ಮ ದೇವಿಗೆ ವಿಶೇಷ ಅಲಂಕಾರ, ವಿವಿಧ ಪೂಜೆಗಳು ನೆರವೇರಿದವು. ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರ ಹಿರಿಯ ಪುತ್ರ ರಮೇಶ್ ಮೀನಳ್ಳಿ ಹಾಗೂ ದಂಪತಿಗಳು ಹೋಮ, ಹವನದಲ್ಲಿ ಭಾಗವಹಿಸಿ ಪೂರ್ಣಾಹುತಿ ನೆರವೇರಿಸಿದರು. ನಗರ ಸೇರಿ ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ ನೂರಾರು ರೈತ ಸಮೂಹ, ಭಕ್ತರಿಗೆ ವಿಶೇಷ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷರಾದ ಮೀನಳ್ಳಿ ತಾಯಣ್ಣ ಅವರು ಮಾತನಾಡಿ, ಪ್ರಸಕ್ತ ವರ್ಷ ಮುಂಗಾರು ಮುನಿಸಿಕೊಂಡ ಹಿನ್ನೆಲೆ ದೇಶಕ್ಕೆ ಅಣ್ಣ ನೀಡುವ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಲಕ್ಷಾಂತರ ರೂ.ಖರ್ಚು ಮಾಡಿ ರೈತರು ಬಿತ್ತಿದ ಬೀಜ ಮೊಳಕೆಯೊಡೆದಿಲ್ಲ, ಸಮೃದ್ಧ ಮಳೆ, ಬೆಳೆಗಾಗಿ, ರೈತರ ಜೀವನ ಸಮೃದ್ಧಿಯಿಂದ ಕೂಡಿರಲಿ ನಾಡಿಗೆ ಒಳಿತಾಗಲಿ ಎಂದು ಪ್ರಾರ್ಥಿಸಿ ಜೆಡಿಎಸ್ ಜಿಲ್ಲಾ ಘಟಕದ ಆಶ್ರಯದಲ್ಲಿ ದೇಗುಲದಲ್ಲಿ ವಿಶೇಷ ವರುಣ ಯಾಗ, ಹೋಮ ಹವನ, ಸಪ್ತ ಭಜನೆ ಸೇರಿದಂತೆ ವಿವಿಧ ಪೂಜೆಗಳನ್ನು ಹಮ್ಮಿಕೊಳ್ಳಲಾಗಿದೆ. ರೈತರು ಆರ್ಥಿಕವಾಗಿ ಸ್ಥಿತಿವಂತರಾದರೆ ನಾಡು ಸುಭಿಕ್ಷೆಯಾಗಿರಲಿದೆ. ರೈತರೇ ಉಸಿರು, ದೇವರ ಕೃಪೆ, ಆಶೀರ್ವಾದದಿಂದ ಸಮೃದ್ಧ ಮಳೆಯಾಗಲಿ, ನಾಡು ಸಮೃದ್ಧಿಯಿಂದ ಕೂಡಿರಲಿ ಎಂದು ಪ್ರಾರ್ಥಿಸುವೆ ಎಂದರು.

> ಪ್ರಸಕ್ತ ವರ್ಷ ಮುಂಗಾರು ಕೈಕೊಟ್ಟ ಹಿನ್ನೆಲೆ ಜಿಲ್ಲೆ ಸೇರಿದಂತೆ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಭೀಕರ ಬರ ಆವರಿಸಿದೆ. ಸರ್ಕಾರ ಕೂಡಲೇ ಬರ ಜಿಲ್ಲೆ ಎಂದು ಘೋಷಿಸಬೇಕು, ರೈತರಿಗೆ ಸೂಕ್ತ ಪರಿಹಾರ ವಿತರಿಸಬೇಕು.
> ಮೀನಳ್ಳಿ ತಾಯಣ್ಣ - ಜೆಡಿಎಸ್ ಜಿಲ್ಲಾಧ್ಯಕ್ಷರು ಬಳ್ಳಾರಿ.

ಈ ಸಂದರ್ಭದಲ್ಲಿ ಸಂಡೂರು ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಕುರೆಕೊಪ್ಪ ಸೋಮಪ್ಪ, ನಗರ ಘಟಕದ ಅಧ್ಯಕ್ಷ ಹೊನ್ನೂರುಸ್ವಾಮಿ,

ರೈತ ಘಟಕದ ಜಿಲ್ಲಾಧ್ಯಕ್ಷ ಲಕ್ಷ್ಮೀಕಾಂತ ರೆಡ್ಡಿ, ಎಸ್ಟಿ ಘಟಕದ ಜಿಲ್ಲಾಧ್ಯಕ್ಷ ಅದ್ದಿಗೇರಿ ರಾಮಣ್ಣ, ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ವಸಂತಕುಮಾರ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಜೆ.ಪುಷ್ಪಾ, ಕಾರ್ಮಿಕ ಘಟಕ ಅಧ್ಯಕ್ಷ ಭಾವಿ ಶಿವಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮದಿರೆ ವಿಜಯಕುಮಾರ್, ಕಿರಣ್ ಕುಮಾರ್, ಕಂಪ್ಲಿ ವಿಧಾನಸಭೆ ಕ್ಷೇತ್ರದ ಅಧ್ಯಕ್ಷ ಎಳ್ಳೆ ಮೇಘರಾಜ್, ಸಂಡೂರು ಅಧ್ಯಕ್ಷ ಹೊಸಗೇರಪ್ಪ, ಅವಾಂಬವಿ ಬಸವ, ದಿವಾಕರ, ಸೇರಿದಂತೆ ನೂರಾರು ಕಾರ್ಯಕರ್ತರು, ವಿವಿಧ ಮುಖಂಡರು ಭಾಗವಹಿಸಿದ್ದರು.

# ದೇಶ ಭಕ್ತರ ನಾಡು, ಸೈನಿಕರ ನೆಲೆಬೀಡು ಬನ್ನಿಕೊಪ್ಪಗ್ರಾಮ : ಮಾಜಿ ಸೈನಿಕ ವೆಂಕಟಾಪುರ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಜಿಲ್ಲಾ ಕುಕನೂರು ತಾಲ್ಲೂಕಿನ ದೇಶಭಕ್ತರ ನಾಡೆಂದೇ ಕರೆಸಿಕೊಳ್ಳುವ ಬನ್ನಿಕೊಪ್ಪ ಗ್ರಾಮದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ, ಸೈನಿಕರ ಹಾಗೂ ರೈತರ ಸ್ಮಾರಕದ ಉದ್ಯಾನದಲ್ಲಿ 27ನೇಯ ಕಾರ್ಗಿಲ್ ವಿಜಯೋತ್ಸವವನ್ನು ವಿಶೇಷ ಪೂಜೆ, ಮಗಳಾರತಿಯೊಂದಿಗೆ ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಆಚರಿಸಲಾಯಿತು.

ಸಂದರ್ಭದಲ್ಲಿ ಮಾತನಾಡಿದ ಮಾಜಿ ಸೈನಿಕ ಹಾಗೂ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ನಾಗರಾಜ ವೆಂಕಟಾಪುರ ಬನ್ನಿಕೊಪ್ಪ ಗ್ರಾಮ 26 ಜನ ಸ್ವಾತಂತ್ರ್ಯ ಹೋರಾಟಗಾರರನ್ನು ಮತ್ತು 28 ಜನ ವೀರ ಯೋಧರನ್ನು ನಾಡಿನ ಅನನ್ಯ ಸೇವೆಗೆ ಕೊಡುಗೆ ನೀಡಿದ ವಿಶಿಷ್ಟ ಗ್ರಾಮ ಎಂದು ಜಿಲ್ಲೆಯಲ್ಲಿ ಹಿರಿಮೆಯನ್ನು ಹೊಂದಿದೆ.

ಊರಿನಲ್ಲಿರುವ ನಿರ್ಮಾಣವಾದ ಸ್ವಾತಂತ್ರ್ಯ ಹೋರಾಟಗಾರರ ಸೈನಿಕರ ಹಾಗೂ ರೈತರ ಸ್ಮಾರಕ ನಮ್ಮೂರಿನ ಹೆಮ್ಮೆ ಎಂದು ಹೇಳುತ್ತಾ ಕಾರ್ಗಿಲ್ ಯುದ್ಧದ ಕುರಿತು ತಮ್ಮ ಸೇನೆಯಲ್ಲಿನ ಅನುಭವವನ್ನು ಎಳೆಯಾಗಿ ವಿವರಿಸಿದರು. ಮಕ್ಕಳಿಗೆ ಸೇನೆಗೆ ಸೇರಲು ಏನೇನು ಮಾಡಬೇಕು, ದೈಹಿಕ ಮತ್ತು ಮಾನಸಿಕ ಆರೋಗ್ಯ ಸದೃಢವಾಗಿ ಕಾಪಾಡಿಕೊಳ್ಳಲು ಸಲಹೆ ನೀಡಿದರು.

ಊರಿನ ಹಿರಿಯರು ಹಾಗೂ ಮಾಜಿ ಸೈನಿಕರಾದ ಬಸವರಾಜ ಮಾಳೆಕೊಪ್ಪರವರು ಸೈನಿಕ ಸೇವೆಯಲ್ಲಿನ ಕಠಿಣ ಪರಸ್ಥಿತಿ ಮತ್ತು ಕಾರ್ಗಿಲ್ ಯುದ್ಧದ ಬಗ್ಗೆ ಬೆಳಕು ಚೆಲ್ಲಿದರು. ನಂತರ ಗ್ರಾಮದ ಆದರ್ಶಪ್ರಾಯ ದೈಹಿಕ ಶಿಕ್ಷಕರಾದ ಶ್ರೀ ಸಂಗನಗೌಡ ಖ ವೀರಪ್ಪಗೌಡರ್ ಮಾತನಾಡಿ ಮಕ್ಕಳು ಉತ್ತಮ ಆರೋಗ್ಯ ಮತ್ತು ಸರಿಯಾದ ರೂಢಿಗಳನ್ನು ಬೆಳೆಸಿಕೊಂಡರೆ ಅವರೇ ಮುಂದೆ ದೇಶದ ಸೈನಿಕರಾಗುವರು ಎಂದು ಹೇಳಿದರು. ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರರಾದ ನಾರಾಯಣ ದೊಡ್ಡಮನಿಯವರು ಸುಸೂತ್ರವಾಗಿ ನಿರೂಪಿಸಿದರು.

ಈ ಸಂದರ್ಭದಲ್ಲಿ ಊರಿನ ಅತೀ ಹಿರಿಯ ರೈತರಾದ ಚನ್ನಪ್ಪ ಗೊಂದಿ, ಇತ್ತೀಚೆಗೆ ನಿವೃತ್ತರಾದ ಕಾಲೇಜು ಉಪನ್ಯಾಸಕರಾಗಿದ್ದ ಗಿರಿಜಾ ಕನ್ನಾರಿ, ಹಾಗೂ ನಿವೃತ್ತ ಏಖಖಿಲಅ ಕಂಟ್ರೋಲರರಾದ ವೆಂಕಣ್ಣ ಯಾರಾಶಿ ಯವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಊರಿನ ಮಾಜಿ ಸೈನಿಕರು ಗುರು-ಹಿರಿಯರು, ತಾಯಂದಿರು, ಯುವಕ ಮಿತ್ರರು ಹಾಗೂ ಮುದ್ದು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪಾಲ್ಗೊಂಡು ಭಾರತ ಮಾತಾ ಕೀ ಜೈ, ವಂದೇ ಮಾತರಂ, 27ನೇ ಕಾರ್ಗಿಲ್ ವಿಜಯೋತ್ಸವಕ್ಕೆ ಜಯವಾಗಲಿ, ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ವೀರ ಯೋಧರಿಗೆ ಜಯವಾಗಲಿ, ಬನ್ನಿಕೊಪ್ಪದ ವೀರ ಯೋಧರಿಗೆ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ಜಯವಾಗಲಿ, ಬನ್ನಿಕೊಪ್ಪದ ರೈತರಿಗೆ ಜಯವಾಗಲಿ ಮತ್ತು ಬನ್ನಿಕೊಪ್ಪ ಚಿರಾಯುವಾಗಲಿ ಎಂದು ಮುಂತಾದ ಜಯಘೋಷಗಳೊಂದಿಗೆ ಕಾರ್ಯಕ್ರಮವನ್ನು ದೇಶಭಕ್ತಿಯೊಂದಿಗೆ ಯಶಸ್ವಿಗೊಳಿಸಿದರು.

## ಗಾಣಿಗ ಸಮಾಜದ ಜಿಲ್ಲಾಧ್ಯಕ್ಷರಾಗಿ ಶೇಖರಗೌಡ ಆಯ್ಕೆ



**ಬಾಗಲಕೋಟೆ:** ಜಿಲ್ಲಾ ಗಾಣಿಗ ಸಮಾಜದ ನೂತನ ಅಧ್ಯಕ್ಷರಾಗಿ ಬಾದಾಮಿಯ ಶೇಖರಗೌಡ ಪಾಟೀಲ ಆಯ್ಕೆಯಾಗಿದ್ದಾರೆ.

ನವನಗರದ ಜ್ಯೋತಿ ಕೋ-ಆಪರೇಟಿವ್ ಸೊಸೈಟಿಯ ಸಭಾಭವನದಲ್ಲಿ ರವಿವಾ ಅಖಿಲ ಭಾರತ ಗಾಣಿಗರ ಸಂಘದ ಪದಾಧಿಕಾರಿಗಳು ಮತ್ತು ಜಿಲ್ಲಾ ಗಾಣಿಗ ಸಮಾಜದ ಮುಖಂಡರು, ತಾಲ್ಲೂಕಾಧ್ಯಕ್ಷರು, ಪದಾಧಿಕಾರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಗಾಣಿಗ ಸಮಾಜದ ಗೌರವಾಧ್ಯಕ್ಷರಾಗಿ ಬಾಗಲಕೋಟೆಯ ಅಶೋಕ ಲಾಗಲೋಟಿ, ನೂತನ ಜಿಲ್ಲಾಧ್ಯಕ್ಷರಾಗಿ ಶೇಖರಗೌಡ ಪಾಟೀಲ ಮತ್ತು ಉಪಾಧ್ಯಕ್ಷರಾಗಿ ಮುಧೋಳದ ಮಹಾಲಿಂಗಪ್ಪ ತೇಲಿ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನಾಗಿ ನಿಂಗಣ್ಣ ಗೋಡಿ ಅವರನ್ನು ಆಯ್ಕೆ ಮಾಡಲಾಯಿತು.

ರಾಜ್ಯ ಘಟಕದ ಗೌರವಾಧ್ಯಕ್ಷ ಆರ್.ಜಿ.ಪಾಟೀಲ, ಕಾರ್ಯಾಧ್ಯಕ್ಷ ಅಶೋಕ ನವಲಗುಂದ ಮತ್ತು ಉಪಾಧ್ಯಕ್ಷ ಅಶೋಕ ಶಿರೂರ ಮತ್ತು ಯಲ್ಲಪ್ಪ ಗಣಿ ಅದ್ಯಕ್ಷತೆಯಲ್ಲಿ ನೂತನ ಪಧಾದಿಕಾರಿಗಳ ಆಯ್ಕೆ ನಡೆಯಿತು. ಸಭೆಯಲ್ಲಿ ಜಿಲ್ಲೆಯ ಎಲ್ಲಾ ತಾಲೂಕಿನ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಸಲಹೆಗಳನ್ನು ಸ್ವೀಕರಿಸಿ ಜಿಲ್ಲೆಯ ಹಿರಿಯರ ತಂಡವನ್ನು ರಚಿಸಿ ಜಿಲ್ಲಾ ಅಧ್ಯಕ್ಷ ಸ್ಥಾನದ ಆಂಕಾಕ್ಷಿಗಳ ಹೆಸರುಗಳನ್ನು ಪಡೆದುಕೊಂಡು ಚರ್ಚೆ ಮಾಡಿ ಅಂತಿಮವಾಗಿ ರಾಜ್ಯ ಸಮೀತಿಯ ಕಾರ್ಯಾಧ್ಯಕ್ಷ ಅಶೋಕ ನವಲಗುಂದ ನೂತನ ಪಧಾದಿಕಾರಿಗಳ ಹೆಸರನ್ನು ಘೋಷಣೆ ಮಾಡಿದರು. ಇದಕ್ಕೆ ಬಾಗಲಕೋಟೆ ಜಿಲ್ಲಾ ಹಾಗೂ ಎಲ್ಲಾ ತಾಲೂಕಿನ ಪಧಾದಿಕಾರಿಗಳು ಹಿರಿಯರು ಯುವಕರು ಒಪ್ಪಿಗೆ ಸೂಚಿಸಿದರು.

## ಹಣ ದುರ್ಬಳಕೆ, ಜಾತಿ ನಿಂದನೆ ಆರೋಪ: ತನಿಖೆಗೆ ಒತ್ತಾಯ




**ಗಂಗಾವತಿ:** ತಾಲೂಕಿನ ಹೊಸ್ಕೇರಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಸ್ಪೂರ್ತಿ ಸಂಜೀವಿನಿ ಒಕ್ಕೂಟದ ಪದಾಧಿಕಾರಿಗಳು ಮಾಧ್ಯಮದ ಮುಂದೆ ತಮ್ಮ ಅಳಿಲನ್ನು ತೋಡಿಕೊಂಡಿದ್ದಾರೆ , ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರ್ತಿ ದ್ರಾಕ್ಷಾಯಣಿ ಹೂಗಾರ ವಿರುದ್ಧ ಹಣ ದುರ್ಬಳಕೆ, ಫೋರ್ಜರಿ ಸಹಿ ಹಾಗೂ ಜಾತಿ ನಿಂದನೆ ಸೇರಿದಂತೆ ಹಲವು ಗಂಭೀರ ಆರೋಪಗಳನ್ನು ಮಾಡಿದರು.

ಒಕ್ಕೂಟದ ಕಾರ್ಯದರ್ಶಿ ಎಂ. ರಾಮಲಕ್ಷ್ಮಿ, ಖಜಾಂಚಿ ಎನ್. ಶರಣಮ್ಮ, ಎಲ್‌ಸಿಆರ್‌ಪಿ ಜೆ. ಅನೀತಾ ನಾಯಕ ಹಾಗೂ ಸುನೀತಾ ಮಾತನಾಡಿ, ನಾರಿಸಖಿ ಮತ್ತು ಎಲ್‌ಸಿಆರ್‌ಪಿ ಗೌರವಧನವನ್ನು ಹಲವು ವರ್ಷಗಳಿಂದ ಪದಾಧಿಕಾರಿಗಳ ಸಹಿ ಪಡೆಯದೇ ಫೋರ್ಜರಿ ಸಹಿ ಮಾಡಿ ಹಣ ದುರ್ಬಳಕೆ ಮಾಡಲಾಗಿದೆ ಎಂದು ಆರೋಪಿಸಿದರು. ಅಲ್ಲದೆ, ದಲಿತ ಸಮುದಾಯದ ಮಹಿಳೆ ಜೆ. ಅನೀತಾ ಅವರಿಗೆ ಜಾತಿ ನಿಂದನೆ ಮಾಡಲಾಗಿದೆ ಎಂದೂ ದೂರಿದರು.

ಈ ಕುರಿತು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. 30-06-2026ರಂದು ನಡೆದ ಸಭೆಯಲ್ಲಿ ಫೋರ್ಜರಿ ಸಹಿ ನಡೆದಿರುವುದು ದೃಢಪಟ್ಟರೂ ಸಂಬಂಧಪಟ್ಟವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳಲಿಲ್ಲ ಎಂದು ಆರೋಪಿಸಿದರು.

ದೂರು ದಾಖಲಿಸಿದರೆ ಮೂರು ವರ್ಷ ಜೈಲು ಶಿಕ್ಷೆ ಆಗುತ್ತದೆ ಎಂದು ಕೆಲ ಅಧಿಕಾರಿಗಳು ಬೆದರಿಕೆ ಹಾಕಿದ್ದಾರೆ ಎಂದು ಅವರು ಆರೋಪಿಸಿದರು. ಜೊತೆಗೆ, ಅವ್ಯವಹಾರವನ್ನು ಪ್ರಶ್ನಿಸಿದರೆ ಕೆಲಸದಿಂದ ತೆಗೆದುಹಾಕುವುದಾಗಿ ಬೆದರಿಕೆ ಹಾಕಲಾಗುತ್ತಿದೆ ಎಂದೂ ತಿಳಿಸಿದರು.

ಹೊಸ್ಕೇರಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮುಖ್ಯ ಪುಸ್ತಕ ಬರಹಗಾರ್ತಿ ದ್ರಾಕ್ಷಾಯಣಿ ಹೂಗಾರ, ಕೃಷಿ ವ್ಯವಸ್ಥಾಪಕ ಮುದ್ದಣ್ಣೇಶ, ಸಿಎಸ್ ಮಲ್ಲಿಕಾರ್ಜುನ ಹಾಗೂ ಪಿಆರ್‌ಐ ಕೀರ್ತಿ ಅವರ ವಿರುದ್ಧ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಂಡು ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

## ಖಜಾನಾಧಿಕಾರಿ ಸೇರಿ ಇಬ್ಬರು ಲೋಕಾ ಬಲೆಗೆ

**ಬಾಗಲಕೋಟೆ:** ನಿವೃತ್ತ ನೌಕರರ ಪಿಂಚಣಿ ಹಾಗೂ ನಿವೃತ್ತಿ ಸೌಲಭ್ಯಗಳ ಕಡತ ವಿಲೇವಾರಿ ಮಾಡಲು ಲಂಚಕ್ಕೆ ಬೇಡಿಕೆ ಇಟ್ಟಿದ್ದ ಆರೋಪದಡಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕು ಖಜಾನೆ ಇಲಾಖೆಯ ಇಬ್ಬರು ಅಧಿಕಾರಿಗಳು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.




ತಾಲೂಕಾ ಖಜಾನಾಧಿಕಾರಿ ಎಸ್.ಎಸ್.ಬಿರಾದಾರ ಹಾಗೂ ಅದೇ ಇಲಾಖೆಯ ಸಿಬ್ಬಂದಿ ವಿನಾಯಕ ಹೊನವಾಡ ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಈ ಸಂಬಂಧ ಜಮಖಂಡಿ ನಿವಾಸಿ ಚೇತನ ತರತರಿ ನೀಡಿದ ದೂರಿನ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೋಲಿಸರು ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಚೇತನ ತರತರಿ ತಮ್ಮ ಮಾವನಿಗೆ ನಿವೃತ್ತಿಯ ನಂತರ ದೊರಕಬೇಕಾದ ಪಿಂಚಣಿ ಹಾಗೂ ಸೌಲಭ್ಯಗಳನ್ನು ಮಂಜೂರು ಮಾಡಿಕೊಡಲು ಅರ್ಜಿ ಸಲ್ಲಿಸಿದ್ದು, ಈ ಕೆಲಸ ಮಾಡಿಕೊಡಲು ಖಜಾನಾಧಿಕಾರಿ ಎಸ್.ಎಸ್.ಬಿರಾದಾರ 70 ಸಾವಿರ ರೂ.ಗಳ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಆದರೆ 40 ಸಾವಿರಕ್ಕೆ ಒಪ್ಪಿ ಚೇತನ, ಲೋಕಾಯುಕ್ತರಿಗೆ ದೂರು ನೀಡಿದ್ದರು. 40 ಸಾವಿರ ಹಣ ಸ್ವೀಕರಿಸುವ ವೇಳೆ ದಾಳಿ ಮಾಡಿರುವ ಲೋಕಾಯುಕ್ತ ಪೋಲಿಸರು ಇಬ್ಬರನ್ನೂ ವಶಕ್ಕೆ ಪಡೆದಿದ್ದಾರೆ.

ಲೋಕಾಯುಕ್ತ ಡಿಎಸ್‌ಪಿ ಸುರೇಶರೆಡ್ಡಿ ಎಂ.ಎಸ್. ಮಾರ್ಗದರ್ಶನದಲ್ಲಿ ಪಿಎಸ್‌ಐಗಳಾದ ವಿ.ಎನ್.ಕಡಿ, ಎಂ.ಬಿ. ಬಿರಾದಾರ, ಎನ್.ಆರ್. ಖಿಲಾರೆ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ನೂತನ ವಕೀಲರಿಗೆ ಅಭಿನಂದನಾ ಸಮಾರಂಭ

• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಪಟ್ಟಣದ ಮುಂಡರಗಿ ಶ್ರೀ ಅನ್ನದಾನೇಶ್ವರ ಶಾಖಾಮಠದ ಸಭಾಭವನದಲ್ಲಿ ಎಂ ಎಸ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಅಖಿಲ ಭಾರತ ವಕೀಲರ ಪರೀಕ್ಷೆ ಉತ್ತೀರ್ಣರಾದ ವಕೀಲರಿಗೆ ಮತ್ತು ನೂತನವಾಗಿ ಆಯ್ಕೆಯಾದ ಕೊಪ್ಪಳ ಜಿಲ್ಲಾ ವಕೀಲರ ಸಂಘದ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಯಿತು. ಕಾರ್ಯಕ್ರಮವನ್ನು ದಿವ್ಯ ಸಾನಿಧ್ಯ ವಹಿಸಿ ಉದ್ಘಾಟನೆ ಮಾಡಿದ ಶ್ರೀ ಮಠದ ಪೂಜ್ಯರು ಹಾಗೂ ನೂತನವಾಗಿ ಎ ಐ ಬಿ ಇ ಪರೀಕ್ಷೆಯನ್ನು ಉತ್ತೀರ್ಣಗೊಳಿಸಿದ ಡಾ.ಮಹಾದೇವ ಮಹಾಸ್ವಾಮಿಗಳು ಮಾತನಾಡುತ್ತಾ, ಶ್ರೀಮಠದ ಭಕ್ತರು ನ್ಯಾಯ ಸಿಗದೇ ಪರದಾಡುವ ಸ್ಥಿತಿಯನ್ನು ಕಣ್ಣಾರೆ ಕಂಡು ವಕೀಲ ಪದವಿ ಪಡೆಯುವ ಸಂಕಲ್ಪವನ್ನು ಮಾಡಿ ಪರೀಕ್ಷೆಗೆ ಮುಂದಾದ ಸಂದರ್ಭವನ್ನು ನೆನಪಿಸಿಕೊಂಡರು. ಹಣ ಸಂಪಾದಿಸಲು ವಕೀಲರಾಗುವ ಬದಲು ನ್ಯಾಯಕ್ಕಾಗಿ, ಶೋಷಿತರಿಗೆ ಸೂಕ್ತ ಮಾರ್ಗದರ್ಶನ ಹಾಗೂ ಕಾನೂನಿನ ಸಹಾಯ ಹಸ್ತ ಚಾಚುವ ಗುರಿ ವಕೀಲರು ಹೊಂದಬೇಕು. ಆರ್ಥಿಕವಾಗಿ ಸಬಲರಲ್ಲದವರಿಗೂ ಸಹ ನ್ಯಾಯ ಸಿಗಬೇಕೆಂದು ಸಂಕಲ್ಪ ಮಾಡಿ ಸ್ವಾಸ್ಥ ಸಮಾಜ ನಿರ್ಮಾಣ ಮಾಡುವ ಸಂಕಲ್ಪ ವಕೀಲರದ್ದಾಗಿರಬೇಕು ಎಂದು ಕರೆ ನೀಡಿದರು.



ಮಧ್ಯಮ ವರ್ಗದ ಹಾಗೂ ಹಿಂದುಳಿದ ಜನತೆಗೆ ನ್ಯಾಯ ಒದಗಿಸುವ ಉದ್ದೇಶ ಹೊಂದಿದ್ದರೆ ಹಣ ತಾನಾಗಿಯೇ ಬರುತ್ತದೆ ಆದ್ದರಿಂದ ವಕೀಲರು ನ್ಯಾಯಯುತವಾಗಿ ತಮ್ಮ ಕಾರ್ಯ ನಿರ್ವಹಿಸಬೇಕು ಜೊತೆಗೆ ನ್ಯಾಯಾಲಯಗಳಲ್ಲಿ ಇತ್ತೀಚಿನ ದಿನಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು ಸಾಧ್ಯವಾದಷ್ಟು ಕಕ್ಷಿದಾರರಿಗೆ ಕಾನೂನು ಅರಿವು ನೀಡಿ ಅವರ ವ್ಯಾಜ್ಯಗಳನ್ನು ಬಗೆಹರಿಸಿ ನ್ಯಾಯಾಲಯಗಳಲ್ಲಿ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡಿದಾಗ ಸಮಾಜ ಸುಧಾರಣೆಯಾಗಲು ಸಾಧ್ಯ ಎಂದು ಹೇಳಿದರು.

ಕುಕನೂರು ಯಲಬುರ್ಗಾ ವಕೀಲರ ಸಂಘದ ತಾಲೂಕ ಅಧ್ಯಕ್ಷ ಸುಭಾಷ್ ಹೊಂಬಳ ಮಾತನಾಡುತ್ತ ಕುಕುನೂರು ಪಟ್ಟಣ ಸರ್ವಾಂಗಣವಾಗಿ ಬೆಳೆಯುತ್ತಿರುವುದು ಶ್ಲಾಘನೀಯವಾಗಿದ್ದು ವಕೀಲರಿಗೆ ನಿರಂತರ ಅಧ್ಯಯನವೇ ಪ್ರಮುಖ ವೃತ್ತಿಯಾಗಿರುತ್ತದೆ, ಈ ಸಮಾಜವು ವಕೀಲರಿಗೆ ವಿಶೇಷ ಘನತೆ ಗೌರವ ನೀಡುತ್ತಿದ್ದು ಅದನ್ನು ಸ್ವಾಸ್ಥ ಸಮಾಜ ನಿರ್ಮಾಣದಲ್ಲಿ ಉಪಯೋಗಿಸಿಕೊಳ್ಳಬೇಕು ಜೊತೆಗೆ ತಮ್ಮ ಕಕ್ಷಿದಾರರೊಂದಿಗೆ ಶಾಂತಿ ಸೌಜನ್ಯದೊಂದಿಗೆ ಕಾರ್ಯನಿರ್ವಹಿಸುತ್ತ ವಕೀಲರು ಸಮಯ ಪ್ರಜ್ಞೆ ಹೊಂದಿರಬೇಕು ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ರವಿ ಅಗೋಲಿ ಮಾತನಾಡುತ್ತಾ ಕಾನೂನು ವಿದ್ಯಾಭ್ಯಾಸ ಮುಗಿಸಿ ಉತ್ತೀರ್ಣರಾದ ಎಲ್ಲರನ್ನೂ ಒಗ್ಗೂಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದ್ದು ಇದಕ್ಕೆ ಜಿಲ್ಲಾಧ್ಯಕ್ಷರ ಆಸಕ್ತಿ ಹಾಗೂ ಜಿಲ್ಲಾಧ್ಯಕ್ಷ ಎ.ವಿ ಕಣಿವೆಯವರ ಮಾರ್ಗದರ್ಶನ ಅತಿ ಮುಖ್ಯವಾಗಿದೆ ಹಾಗೂ ಶ್ರೀಮಠದ ಪೂಜ್ಯರು ಪ್ರತಿ ವರ್ಷ ಇದೇ ರೀತಿ ಹೊಸ ವಕೀಲರಲ್ಲಿ ಪ್ರೇರಣೆ ನೀಡುವ ಕಾರ್ಯ ಮಾಡಲಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವನ್ನು ಯಲಬುರ್ಗಾ ಮುರುಡಿಮಠದ ಶ್ರೀಗಳು ಮತ್ತು ರಾಜೂರ ಶ್ರೀಗಳು ವಹಿಸಿಕೊಂಡಿದ್ದರು. ಜೊತೆಗೆ ವೇದಿಕೆಯಲ್ಲಿ ಕೊಪ್ಪಳ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪ್ರಕಾಶ್ ಆನಂದಳ್ಳಿ, ವಕೀಲರಾದ ಬಿ ವಿ ಸಜ್ಜನ, ಅಂದನಗೌಡ ಮಾಲಿ ಪಾಟೀಲ, ಬಸವರಾಜ ಮೇಲು ಸಕ್ಕರೆ, ಪುಷ್ಪ ಬೇವೂರ, ಆನಂದ್ ಉಳ್ಳಾಗಡ್ಡಿ, ಮಹಾಂತೇಶ್ ಬೂದುಗುಂಪಿ, ಬಸವರಾಜ ಜಂಗ್ಲಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

## ಸಸ್ಯ ಸಂತೆ: ದಾಖಲೆಯ ಸಸಿಗಳ ಮಾರಾಟ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನಗರದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ನಡೆದ ಸಸ್ಯ ಸಂತೆಗೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದ್ದು, ಮೊದಲ ದಿನವೇ ದಾಖಲೆ ರೀತಿಯಲ್ಲಿ ಸಸಿಗಳ ಮಾರಾಟ ನಡೆದಿದೆ. ಸಸ್ಯ ಸಂತೆಯ ಎರಡನೇ ದಿನ ಬೆಳಿಗ್ಗೆಯಿಂದಲೇ ಜಿಲ್ಲೆಯ ವಿವಿಧ ಭಾಗಗಳಿಂದ ಜನರು ಕುಟುಂಬ ಸಮೇತರಾಗಿ ಆಗಮಿಸಿ ವಿವಿಧ ಬಗೆಯ ಅಲಂಕಾರಿಕ, ಹಣ್ಣಿನ, ಔಷಧಿಯ, ನೆರಳು ನೀಡುವ ಹಾಗೂ ಮನೆ ತೆ-ೂಟಕ್ಕೆ ಸೂಕ್ತವಾದ ಸಸಿಗಳನ್ನು ಖರೀದಿಸುತ್ತಿರುವುದು ಕಂಡುಬಂದಿತು.

ಪರಿಸರ ಸ್ನೇಹಿ ಬದುಕಿನತ್ತ ಜನರು ಹೆಚ್ಚಿನ ಆಸಕ್ತಿ ತೋರಿದ ಹಿನ್ನಲೆಯಲ್ಲಿ ಸಸ್ಯ ಸಂತೆಯಲ್ಲಿ ದಿನವೀಡಿ ಜನಸಂದಣಿ ಕಂಡುಬಂದಿತು. ಸಸ್ಯ ಸಂತೆಯ ಮೊದಲ ದಿನವಾದ ಶನಿವಾರದಂದು ತೋಟಗಾರಿಕೆ ವಿವಿಯ ಮಳಿಗೆಯಿಂದಲೇ 5 ಲಕ್ಷ ರೂ.ಗಳ ಬೆಲೆಯ ಸಸಿಗಳ ಮಾರಾಟ ನಡೆದಿದೆ. ಸಸ್ಯ ಸಂತೆಯಲ್ಲಿ ಮಹಿಳೆಯರು ಅಲಂಕಾರಿಕ ಹಾಗೂ ಹೂವಿನ ಸಸಿಗಳ ಖರೀದಿಗೆ ಮುಗಿಬಿದ್ದಿದ್ದರು. ಗುಲಾಬಿ, ಮಲ್ಲಿಗೆ, ದಾಸವಾಳ ಸೇರಿದಂತೆ ವಿವಿಧ ಬಗೆಯ ಹೂವಿನ ಸಸಿಗಳು ಹಾಗೂ ಮನೆ ಮತ್ತು



ಉದ್ಯಾನಗಳ ಅಲಂಕಾರಕ್ಕೆ ಸೂಕ್ತವಾದ ಅಲಂಕಾರಿಕ ಸಸಿಗಳನ್ನು ಆಸಕ್ತಿಯಿಂದ ಖರೀದಿಸಿದರು. ಇದರ ಜೊತೆಗೆ ಹಣ್ಣಿನ, ಔಷಧೀಯ, ಸುಗಂದದ್ರವ್ಯ, ನಡೆತೋಪು ಗಿಡಗಳು ಹಾಗೂ ನರ್ಸರಿ ಗಿಡಗಳು, ವಿವಿಧ ಬಗೆಯ ಹಣ್ಣುಗಳ ಗಿಡಗಳು. ಅಲಂಕಾರಿಕ ಪಾಟ್‌ಗಳು ಜೈವಿಕ, ರಾಸಾಯನಿಕ ಗೊಬ್ಬರ ಖರೀದಿಗೆ ಉತ್ತಮ ಬೇಡಿಕೆ ಕಂಡುಬಂದಿತು.

ಸಸ್ಯಗಳ ನಿರ್ವಹಣೆ, ನೀರಾವರಿ, ಗೊಬ್ಬರ ಬಳಕೆ, ಹಾಗೂ ಆರೈಕೆ ಕುರಿತು ತೋಟಗಾರಿಕೆ ತಜ್ಞರಾದ ಡಾ.ಆನಂದ ನಂಜಪ್ಪನವರ, ಡಾ.ವಸಂತ ಗಾಣಿಗೇರ ಹಾಗೂ ಇತರೆ ಸಿಬ್ಬಂದಿಗಳು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಪರಿಸರ ಸಂರಕ್ಷಣೆ ಮತ್ತು ಮನೆಮನೆಗಳಲ್ಲಿ ಹಸಿರು ಬೆಳೆಸುವ ಉದ್ದೇಶದಿಂದ ಆಯೋಜಿಸಲಾದ ಈ ಸಸ್ಯ ಸಂತೆಯಲ್ಲಿ ವಿದ್ಯಾರ್ಥಿಗಳು, ರೈತರು, ಮಹಿಳೆಯರು ಹಾಗೂ ಪ್ರಕೃತಿ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಸ್ಯ ಸಂತೆಯಲ್ಲಿ ಒಟ್ಟು 70 ಮಳಿಗೆಗಳನ್ನು ಹಾಕಲಾಗಿದ್ದು, ಅದರಲ್ಲಿ 10 ಮಳಿಗೆ ತೋಟಗಾರಿಕೆ ವಿವಿಯಗಳದ್ದಾದರೆ, ಇನ್ನುಳಿದ 60 ಮಳಿಗೆಗಳು ಖಾಸಗಿ ಮಳಿಗೆಗಳಿದ್ದವು. ಇದರ ಜೊತೆಗೆ 5 ಎಫ್‌ಪಿಓಗಳು ಸಹ ಇದ್ದವು.

ಅಮೇರಿಕಾ ಮೂಲದವರಾದ ಬಾಗಲಕೋಟೆಯ ಅಳಿಯ ಜೈಸನ್ ರೈಸ್ ತಮ್ಮ ಪತ್ನಿ ಭಾಗ್ಯಶ್ರೀ ಅವರೊಂದಿಗೆ ಸಸ್ಯ ಸಂತೆಗೆ ಭೇಟಿ ನೀಡಿ ವೀಕ್ಷಣೆ ಮಾಡಿದರು. ಜೈಸನ್ ಅವರು ಬಾಗಲಕೋಟೆಯ ಖ್ಯಾತ ವೈದ್ಯರಾದ ಡಾ.ಶ್ರೀಕಾಂತ ತೇಲಸಂಗ ಅವರ ಅಳಿಯ. ಸಸ್ಯ ಸಂತೆಯಲ್ಲಿ ಮಾರಾಟಕ್ಕಿಡಲಾದ ಅಲಂಕಾರರಿಕ, ಹೂವಿನ, ಹಣ್ಣಿನ ಮತ್ತು ಔಷಧೀಯ ಸಸಿಗಳನ್ನು ಆಸಕ್ತಿಯಿಂದ ವೀಕ್ಷಿಸಿ ಸಸ್ಯಗಳ ವೈವಿದ್ಯತೆ ಮತ್ತು ಅಚ್ಚಕಟ್ಟಾದ ವ್ಯವಸ್ಥೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂತೆಯಲ್ಲಿ ಥೈವಾನ್ ಹಾಗೂ ಥೈಲ್ಯಾಂಡ್ ದೇಶದ ಹಲಸಿನ ತಳಿಯನ್ನು ಸಹ ಪ್ರದರ್ಶನ ಹಾಗೂ ಮಾರಾಟಕ್ಕೆ ಇಡಲಾಗಿತ್ತು. ಥೈವಾನ ತಳಿ ಎಡರೂವರೆ ವರ್ಷದಲ್ಲಿ ಫಲ ನೀಡುತ್ತಿದ್ದು, ವರ್ಷಕೆ 3 ಬಾರಿ ಪೀಕ್ ತೆಗೆಯಬಹುದಾಗಿದೆ. ಈಗಾಗಲೇ ಜಿಲ್ಲೆಯ ವಡಗೇರಿ, ಹುನಗುಂದ, ಕೂಡಲಸಂಗಮ, ಶಿರೂರ, ಹೊನ್ನಾಕಟ್ಟಿ, ಬಾದಾಮಿ, ತುಂಬರಮಟ್ಟಿಯಲ್ಲಿ ಬೆಳೆಯಲು ಪ್ರಾರಂಭಿಸಿದ್ದಾರೆ ಎಂದು ಅಮರೇಶ ಪೂರದ ಹೆಳುತ್ತಾರೆ. ಅದೇ ರೀತಿ ಥೈಲ್ಯಾಂಡನ ನಿನ್ನಿತಾಯಿ ಹಲಸಿನ ತಳಿ ಒಂದೂವರೆ ವರ್ಷದಲ್ಲಿ ಫಲ ನೀಡುತ್ತಿದ್ದು, ವರ್ಷದಲ್ಲಿ ಇದು ಕೂಡಾ 3 ಫಸಲನ್ನು ತೆಗೆಯಬಹುದಾಗಿದೆ. ಇದರಿಂದ ಒಂದು ಫಸಲಿಗೆ 3 ರಿಂದ 4 ಲಕ್ಷ ರೂ.ಗಳಷ್ಟಾಗುತ್ತದೆ. ಈ ಹಣ್ಣಿನ ಬಗ್ಗೆ ಜನರು ಮಾಹಿತಿ ಪಡೆದುಕೊಂಡರು.

ತೋಟಗಾರಿಕೆ ವಿವಿ ಹಮ್ಮಿಕೊಂಡ ಸಸ್ಯ ಸಂತೆಯಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ನಂದೇಶ್ವರ ಗ್ರಾಮದ ಮುಕುಂದ ಬೋಜನ್ನವರ ಪ್ರದರ್ಶಿಸಿದ ಅಂಡಮಾನ್ ಎಂಬ ತೆಂಗಿನ ತಳಿಯು ಎಲ್ಲರ ಗಮನ ಸೆಳೆಯಿತು. ನೋಡಲು ದೊಡ್ಡ ಗಾತ್ರದಲ್ಲಿದ್ದು, ಮಾರಾಟಕ್ಕೆ ತಂದ ತಳಿಯ ಗಿಡಗಳನ್ನು ಜನರು ಖರಿದೀಸಿದರು. ಈ ತಳಿ ನೆಟ್ಟ 5 ವರ್ಷದಲ್ಲಿ ಫಲ ಕೊಡುತ್ತಿದ್ದು, ಒಂದು ಗಿಡಕ್ಕೆ 60 ರಿಂದ 70 ಟೆಂಗಿನ ಕಾಯಿಗಳನ್ನು ಬಿಡುತ್ತದೆ. ಪರಿಣಿತ ತೆಂಗು ಬೆಳೆಗಾರ ಮುಕುಂದ ಅವರು ಈ ತಳಿಯ ಬೆಳೆಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯ ತೆಂಗು ತಳಿ ಸಂರಕ್ಷಕ ಪ್ರಶಸ್ತಿ ನೀಡಿ ಗೌರವಿಸಿದೆ.

## ಕುಕ್ಕುಂದರ ಸಾಹಿತ್ಯದಲ್ಲಿ ಭಾಷಾ ಸೌಂದರ್ಯ ಕುಕ್ಕುಂದರ ಅರಳಿದೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ರಾಜಶೇಖರ ಕುಕ್ಕುಂದ ಅವರ ಪದ್ಯಗಳು ಲಯಬದ್ಧತೆ, ನಾದಮಯತೆ ಹಾಗೂ ಕನ್ನಡ ಭಾಷೆಯ ಸೊಗಡಿನಿಂದ ಕೂಡಿದ್ದು, ಅವರ ಕೃತಿಗಳಲ್ಲಿ ಭಾಷಾ ಸೌಂದರ್ಯ ಅನಾವರಣಗೊಂಡಿದೆ ಎಂದು ಸಾಹಿತಿ ಬಸು ಬೇವಿನಗಿಡದ ಹೇಳಿದರು.

ನಗರದ ಬಸವೇಶ್ವರ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಆಯೋಜಿಸಿದ್ದ ಪುಸ್ತಕ ಬಿಡುಗಡೆ, ಗೌರವಾಭಿನಂದನೆ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಡಾ.ವಿನಾಯಕ ಕಮತರ ಅವರ ಸಂಪಾದಕತ್ವದ 'ಕುಂದದ ಕುಕಿಲು' ಕೃತಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ರಾಜಶೇಖರ ಕುಕ್ಕುಂದ ತಮ್ಮ ಕವಿತೆಗಳಲ್ಲಿ ಸಹಜವಾದ ಪ್ರಾಸಗಳನ್ನು ಬಳಸುವ ಮೂಲಕ ಬದುಕಿನ ಅನುಭವಗಳನ್ನು ಅಭಿವ್ಯಕ್ತಿಗೊಳಿಸಿದ್ದಾರೆ. 'ಕುಂದದ ಕುಕಿಲು' ಕೃತಿ ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ



ಅವರು ನೀಡಿರುವ ಮಹತ್ವದ ಕೊಡುಗೆಯನ್ನು ಪರಿಚಯಿಸುತ್ತದೆ. ಅವರ ಪದ್ಯಗಳು ರುಚಿಕಟ್ಟಾಗಿದ್ದು, ಕನ್ನಡ ಭಾಷೆಯ ಸೊಬಗನ್ನು ಸಾರುತ್ತವೆ. ಮಕ್ಕಳು ಹಾಗೂ ಹಿರಿಯರ ನಡುವಿನ ವಾತ್ಸಲ್ಯ, ಧ್ವನಿ ಚಮತ್ಕಾರ, ಕುಟುಂಬ ಹಾಗೂ ಸಾಮಾಜಿಕ ಜೀವನದ ಮೌಲ್ಯಗಳನ್ನು ಅವರ ಪದ್ಯಗಳು ಮನೋಜ್ಞವಾಗಿ ಕಟ್ಟಿಕೊಡುತ್ತವೆ. ಮಕ್ಕಳಲ್ಲಿ ಕಂಡುಬರುವ ಕೀಳರಿಮೆಯಂತಹ ಸಮಸ್ಯೆಗಳ ಕುರಿತು ಇನ್ನಷ್ಟು ಮಕ್ಕಳ ಸಾಹಿತ್ಯ ಸೃಷ್ಟಿಯಾಗಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬಿವಿವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಅಶೋಕ ಸಜ್ಜನ (ಬೇವೂರ) ಮಾತನಾಡಿ, ಡಾ.ಶಿವರಾಮ ಕಾರಂತರು ಮಕ್ಕಳ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಪದ್ಯಗಳನ್ನು ಓದಿಯೇ ತಾವು ಬರವಣಿಗೆಗೆ ಪ್ರೇರಣೆ ಪಡೆದಿದ್ದಾಗಿ ತಿಳಿಸಿದರು. ರಾಜಶೇಖರ ಕುಕ್ಕುಂದ ಅವರು ಮುಂದೆಯೂ ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಇನ್ನಷ್ಟು ಮೌಲಿಕ ಕೊಡುಗೆಗಳನ್ನು ನೀಡಲಿ ಎಂದು ಹಾರೈಸಿದರು.

ಅತಿಥಿ ಮಲ್ಲಿಕಾರ್ಜುನ ಶೆಲ್ಲಿಕೇರಿ, ಮಕ್ಕಳ ಸಾಹಿತ್ಯದಲ್ಲಿ ಹಲವು ಪ್ರಕಾರಗಳಿದ್ದು, ರಾಜಶೇಖರ ಕುಕ್ಕುಂದ ಅವರು ಮುಖ್ಯವಾಗಿ ಕಾವ್ಯ ಪ್ರಕಾರದಲ್ಲಿಯೇ ಹೆಚ್ಚಿನ ಸಾಹಿತ್ಯ ರಚಿಸಿದ್ದಾರೆ. ಅವರ ಪದ್ಯಗಳ ಪ್ರಮುಖ ಗುಣ ಸರಳತೆ ಮತ್ತು ಮಕ್ಕಳ ಮನಸ್ಸನ್ನು ತಟ್ಟುವ ಅಭಿವ್ಯಕ್ತಿ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವೇಶ್ವರ ತಾಂತ್ರಿಕ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಬಿ.ಆರ್.ಹಿರೇಮಠ ವಹಿಸಿದ್ದರು. ಕನ್ನಡ ಸಲಹಾ ಮಂಡಳಿಯ ಸದಸ್ಯ ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಡಾ.ರೇಣುಕಾ ಪ್ರಸಾದ್, ಗಿರೀಶ್ ಸೊಲ್ಲಾಪುರ, ರಾಜಕುಮಾರ ಕುಲಕರ್ಣಿ, ಮಂಡಲಗಿರಿ ಪ್ರಸನ್ನ ಸೇರಿದಂತೆ ಅನೇಕ ಸಾಹಿತ್ಯಾಸಕ್ತರು ಭಾಗವಹಿಸಿದ್ದರು.

## ಮಕ್ಕಳ ಸಾಹಿತ್ಯದಿಂದ ಸಮಾಜಕ್ಕೆ ಮೌಲ್ಯಯುತ ಕೊಡುಗೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಉತ್ತರ ಕರ್ನಾಟಕದ ಮಕ್ಕಳ ಸಾಹಿತ್ಯ ವಿಶಿಷ್ಟ ಬೆಳವಣಿಗೆಯ ಹಾದಿಯಲ್ಲಿ ಸಾಗಿದ್ದು, ಸಮಾಜಕ್ಕೆ ಮೌಲ್ಯಯುತ ಕೊಡುಗೆ ನೀಡಿದೆ ಎಂದು ಮಕ್ಕಳ ಸಾಹಿತಿ ಡಾ.ಆನಂದ ಪಾಟೀಲ ಹೇಳಿದರು.

ನಗರದ ಬಸವೇಶ್ವರ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಆಯೋಜಿಸಿದ್ದ ಉತ್ತರ ಕರ್ನಾಟಕದ ಮಕ್ಕಳ ಸಾಹಿತ್ಯ ಕುರಿತ ಕಾರ್ಯಕ್ರಮದಲ್ಲಿ "ಉತ್ತರ ಕರ್ನಾಟಕದ ಮಕ್ಕಳ ಸಾಹಿತ್ಯ-ಒಂದು ವಿಶ್ಲೇಷಣೆ" ವಿಷಯದ ಕುರಿತು ಅವರು ಉಪನ್ಯಾಸ ನೀಡಿದರು.

ಮಕ್ಕಳ ಸಾಹಿತ್ಯದ ಬೆಳವಣಿಗೆಯನ್ನು ಮೂರು ಹಂತಗಳಲ್ಲಿ ವಿವರಿಸಿದ ಅವರು, ಮೊದಲ ಹಂತದಲ್ಲಿ ಶಿಕ್ಷಣದ ಪಠ್ಯಕ್ರಮದ ಮೂಲಕ ಬಾಲ ಸಾಹಿತ್ಯ ಆರಂಭವಾಯಿತು. ಎರಡನೇ ಹಂತದಲ್ಲಿ ಶಿಕ್ಷಕ-ಸಾಹಿತಿಗಳು ತಮ್ಮ ಬಾಲ್ಯದ ಹಳ್ಳಿ ಜೀವನವನ್ನು ಸಾಹಿತ್ಯದಲ್ಲಿ ಕಟ್ಟಿಕೊಟ್ಟರು. ಮೂರನೇ ಹಂತದಲ್ಲಿ ಶಿಕ್ಷಕರಲ್ಲದ ಲೇಖಕರು ಮಕ್ಕಳ ಸಾಹಿತ್ಯ ರಚನೆಗೆ ಮುಂದಾದರು ಎಂದು ಹೇಳಿದ ಡಾ.ಆನಂದ, ಲೇಖಕರು ತಮ್ಮ ಬಾಲ್ಯದ ಅನುಭವಗಳನ್ನು ಕಥೆ ಮತ್ತು ಕವನಗಳ ರೂಪದಲ್ಲಿ ಮೂಡಿಸಿ ಹೊಸ ಹರಿವನ್ನು ತಂದರು ಎಂದರು.

ಲೇಖಕ ತಮ್ಮಣ್ಣ ಬೀಗಾರ ಮಾತನಾಡಿ, ಉತ್ತರ ಕನ್ನಡ ಜಿಲ್ಲೆಯ ಸಾಹಿತಿಗಳು ಮಕ್ಕಳ ಸಾಹಿತ್ಯಕ್ಕೆ




ಹೊಸ ದಿಕ್ಕು ನೀಡಿದ್ದು, ಸಾಹಿತ್ಯ ಹೃದಯದ ತುಡಿತದಿಂದ ಮೂಡಿಬರಬೇಕು. ತಮ್ಮ ಬಾಲ್ಯದ ಅನುಭವಗಳನ್ನು ಮಕ್ಕಳ ಸಾಹಿತ್ಯದೊಂದಿಗೆ ಅನುಸಂಧಾನಗೊಳಿಸಿದ್ದೇನೆ. ಮಕ್ಕಳ ಸಾಹಿತ್ಯ ಕಲಾತ್ಮಕವಾಗಿರಬೇಕು ಎಂದು ಹೇಳಿದರು.

ಡಾ.ವಿನಾಯಕ ಕಮತದ ಮಾತನಾಡಿ, ಮಕ್ಕಳಿಗಾಗಿ ಬರೆಯುವುದು ಎಂದರೆ ತನ್ನೊಳಗಿನ ಮಗುವಿನ ಅಭಿವ್ಯಕ್ತಿಯನ್ನು ಹೊರಹಾಕುವುದಾಗಿದೆ. ಮಕ್ಕಳ ಮನಸ್ಸನ್ನು ಅರಿತು, ಅವರ ದೃಷ್ಟಿಕೋನದಿಂದ ಸಾಹಿತ್ಯ ರಚನೆಯಾಗಬೇಕು. ಮಕ್ಕಳ ಸಾಹಿತ್ಯವು ಸೃಜನಶೀಲತೆಯ ಪ್ರತಿಬಿಂಬವಾಗಿದೆ ಎಂದು ಅಭಿಪ್ರಾಯಪಟ್ಟರು.

ಲೇಖಕ ರಾಜಶೇಖರ ಕುಕ್ಕುಂದ ಮಾತನಾಡಿ, ಬಾಲ್ಯದ ಅನುಭವಗಳು ಹಾಗೂ ಪ್ರಕೃತಿಯೊಂದಿಗಿನ ನಂಟು ತಮ್ಮ ಬರವಣಿಗೆಗೆ ಪ್ರೇರಣೆಯಾಯಿತು. ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದರೂ ಸಾಹಿತ್ಯದ ಆಸಕ್ತಿ ಕಡಿಮೆಯಾಗಲಿಲ್ಲ. ಕವಿತೆ ಬರೆಯುವಾಗ ಮಗುವಿನ ಮನಸ್ಸು ಹೊಂದಿರಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಸವೇಶ್ವರ ತಾಂತ್ರಿಕ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಬಿ.ಆರ್.ಹಿರೇಮಠ ಮಾತನಾಡಿ, ಕಥೆ-ಕಾದಂಬರಿಗಳ ಓದು ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುತ್ತದೆ. ಪುಸ್ತಕಗಳನ್ನು ಓದಿ ವಿಮರ್ಶಾತ್ಮಕವಾಗಿ ಆಲೋಚಿಸುವ ಗುಣವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕನ್ನಡ ಸಲಹಾ ಮಂಡಳಿಯ ಸದಸ್ಯ ಡಾ.ವಿಜಯಕುಮಾರ ಕಟಗಿಹಳ್ಳಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿವಿವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಅಶೋಕ ಸಜ್ಜನ (ಬೇವೂರ), ಬಸು ಬೇವಿನಗಿಡದ, ಮಲ್ಲಿಕಾರ್ಜುನ ಶೆಲ್ಲಿಕೇರಿ, ಡಾ.ರೇಣುಕಾ ಪ್ರಸಾದ್, ಗಿರೀಶ್ ಸೊಲ್ಲಾಪುರ, ರಾಜಕುಮಾರ ಕುಲಕರ್ಣಿ, ಮಂಡಲಗಿರಿ ಪ್ರಸನ್ನ ಇದ್ದರು.

ಮಲ್ಲಮ್ಮ ನುಡಿ | ಸಂಪುಟ: 14 Volume | ಸಂಚಿಕೆ: 103 Issue | ಪ್ರಾದೇಶಿಕ ಕನ್ನಡ ದಿನ ಪತ್ರಿಕೆ | ಮಂಗಳವಾರ 28.07.2026


# ಬೆಟ್ಟಪ್ಪ ರಾವಣ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ




**ಪೀಣ್ಯ, ದಾಸರಹಳ್ಳಿ:** ಏಷ್ಯಾ ಇಂಟರ್ನ್ಯಾಷನಲ್ ಕಲ್ಚರಲ್ ರಿಸರ್ಚ್ ವಿಶ್ವವಿದ್ಯಾಲಯ ವತಿಯಿಂದ ಹೊಸೂರಿನಲ್ಲಿ ನಡೆದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ಸಮಾರಂಭದಲ್ಲಿ ಕಾವರನಹಳ್ಳಿ ಗ್ರಾಮ SG ಕೋಟೆ ಹೋಬಳಿ ಬಂಗಾರಪೇಟೆ ತಾಲೂಕು ವಾಸವಾಗಿರುವ ನಿವಾಸಿ ಸಮಾಜ ಸೇವಕ ಉ ಬೆಟ್ಟಪ್ಪ ರಾವಣ್ ಅವರಿಗೆ ಸಮಾಜ ಸೇವಾ ಕ್ಷೇತ್ರದಲ್ಲಿ ಹಾಗೂ ಪ್ರಜಾ ಶಕ್ತ ಸೇವಾ ಸಂಘ ಸಂಸ್ಥಾಪಕರು ಕಾವರನಹಳ್ಳಿ ಮುಖಂಡರು ಇವರ ಸೇವೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ.ಕೆ.ಎ. ಮನೋಕರನ್ ಮಾಜಿ ಶಾಸಕರು ತಮಿಳುನಾಡು, ಪ್ರಣವ ಸ್ವರೂಪ ಮುನಿ ನಿರಂಜನಪೂಜ್ಯ ಶ್ರೀ ಶ್ರೀ ಡಾ. ಕೃಷ್ಣಮೂರ್ತಿ ಮಹಾಸ್ವಾಮಿಗಳು, ಶ್ರೀ ಕ್ಷೇತ್ರ ಧರ್ಮ ಧ್ವಜ ಪ್ರತಿಷ್ಠಾನ, ಏಷ್ಯಾ ಅಂತರರಾಷ್ಟ್ರೀಯ ಸಂಸ್ಕೃತಿ ಅಕಾಡೆಮಿ ಅಮೇರಿಕನ್ ವಿಸ್ಡಮ್ ಪೀಸ್ ವಿಶ್ವವಿದ್ಯಾಲಯ, ಡಾ. ಕರಾಟೆ ಎ ಪಿ ಶ್ರೀನಾಥ್, ಎಪಿಎಂಸಿ ನಿರ್ದೇಶಕ ಹೊಳೆನರಸೀಪುರ, ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕರು ಎಸ್ ಟಿ. ಸೋಂಬೇ ಗೌಡ, ರಾಷ್ಟ್ರೀಯ ಹಾಗೂ ಡಿಎಂಸಿಎಸ್ ನಿರ್ದೇಶಕರು ಕರ್ನಾಟಕ ಉಚ್ಚ ನ್ಯಾಯಾಲಯದರಿ ಈಶ್ವರಚಂದ್ರ ಬಸಪ್ಪ ಇಂಗಳಗಿ ಕಾವರನಹಳ್ಳಿ ಬೆಟ್ಟಪ್ಪ ರಾವಣ್ ಕೃತಿ ಮಧು ಹರೀಶ್ ಮುರುಳಿ ರೆಡ್ಡಿ ಅಣ್ಣ ಅಮರ್ ನೀರಜ್ ಮುಂತಾದವರು ಉಪಸ್ಥಿತರಿದ್ದರು.




**ಬೆಂಗಳೂರಿನ ವಿದ್ಯಾರಣ್ಯ ಪುರದ ದೇವಮಾತಾ ಉದ್ಯಾನವನದಲ್ಲಿ ಈಶ ಮಲ್ಟಿಸ್ಪೆಶಾಲಿಟಿ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು. ಡಾ. ಹರಿಪ್ರಿಯ ಶ್ರೀ ಹಾಗೂ ಪಿ.ಆರ್.ಒ ವಾಸುದೇವ ಸಿ ಹಾಜರಿದ್ದರು.**

# ಕರ್ತವ್ಯನಿಷ್ಠೆ ಪತ್ರಕರ್ತರ ಸೇವೆ ಸಮಾಜದ ಪ್ರಜಾಪ್ರಭುತ್ವದ ಜೀವಾಳ



**ಕಲಬುರಗಿ:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ರಿ), ಜಿಲ್ಲಾ ಘಟಕ ಕಲಬುರಗಿ ವತಿಯಿಂದ ಪತ್ರಿಕಾ ಭವನದ ಪತ್ರಕರ್ತರ ಸಾಂಸ್ಕೃತಿಕ ಸಭಾಂಗಣದಲ್ಲಿ ಸೋಮವಾರ ಪತ್ರಿಕಾ ದಿನಾಚರಣೆ ಹಾಗೂ ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಅದ್ದೂರಿಯಾಗಿ ನಡೆಯಿತು.

ಕಾರ್ಯಕ್ರಮವನ್ನು ಕಲಬುರಗಿ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಉದ್ಘಾಟಿಸಿ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಕರ್ತರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸಮಾಜದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಮಾಧ್ಯಮಗಳು ಪ್ರಮುಖ ಜವಾಬ್ದಾರಿ ನಿರ್ವಹಿಸುತ್ತಿವೆ ಎಂದು ಹೇಳಿದರು. ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಮಾತನಾಡಿ, ಸಮಾಜದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ಮತ್ತು ಮಾಧ್ಯಮಗಳ ಸಮನ್ವಯ ಅಗತ್ಯವಾಗಿದೆ. ವಾಸ್ತವಾಂಶಗಳನ್ನು ಆಧರಿಸಿದ ಜವಾಬ್ದಾರಿಯುತ ಸುದ್ದಿಗಳು ಸಮಾಜದ ಹಿತಕ್ಕೆ ಪೂರಕವಾಗುತ್ತವೆ ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕರ್ನಾಟಕ ಮಾಧ್ಯಮ ಅಕಾಡೆಮಿಯ ಮಾಜಿ ಸದಸ್ಯ ದೇವಿಂದ್ರಪ್ಪ ಕಪನೂರ ಸೇರಿದಂತೆ ಹಲವು ಗಣ್ಯರು ವಿಶೇಷ ಆಹ್ವಾನಿತರಾಗಿ ಹಾಗೂ ಗೌರವ ಅತಿಥಿಗಳಾಗಿ ಭಾಗವಹಿಸಿದರು. ಜಿಲ್ಲಾ ಘಟಕದ ಅಧ್ಯಕ್ಷ ಬಾಬುರಾವ ಯಡ್ರಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪತ್ರಕರ್ತರ ಹಕ್ಕುಗಳ ರಕ್ಷಣೆ, ವೃತ್ತಿ ಅಭಿವೃದ್ಧಿ ಹಾಗೂ ಸಮಾಜಮುಖಿ ಪತ್ರಿಕೋದ್ಯಮಕ್ಕೆ ಸಂಘ ಸದಾ ಬದ್ಧವಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ವಿ.ಎನ್. ಕಾಗಲಕರ್ ಪ್ರಶಸ್ತಿ ಹಾಗೂ ವಾರ್ಷಿಕ ಪ್ರಶಸ್ತಿಗಳನ್ನು ವಿವಿಧ ಮಾಧ್ಯಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ಹಾಗೂ ಯುವ ಪತ್ರಕರ್ತರಿಗೆ ಪ್ರದಾನ ಮಾಡಿ ಗೌರವಿಸಲಾಯಿತು.

ವಿ.ಎನ್. ಕಾಗಲಕರ್ ಪ್ರಶಸ್ತಿಗೆ ಪ್ರಭಾಕರ ಜೋಶಿ, ಚಂದ್ರಕಾಂತ ಹುಣಸಗಿ, ಪ್ರವೀಣ ರೆಡ್ಡಿ, ದೇವೇಂದ್ರಪ್ಪ ಅವಂಟಿ ಹಾಗೂ ಚಂದ್ರಶೇಖರ ಕೌಲಗಾ ಭಾಜನರಾದರು. ವಾರ್ಷಿಕ ಪ್ರಶಸ್ತಿಯನ್ನು ಸಂಗಮನಾಥ ರೇವತಗಾಂವ, ಬ್ರಹ್ಮಾನಂದ ಅರಳಿ, ರಮೇಶ ಮೇಳಕುಂದಾ, ಬಾಬುರಾವ ಕೋಬಾಳ, ಶರಣಬಸಪ್ಪ ಅನವರ್, ದತ್ತಾತ್ರೇಯ ಪಾಟೀಲ, ಮಲ್ಲಿಕಾರ್ಜುನ ಜೋಗ್, ಸಂತೋಷ ನಾಡಗಿರಿ, ಸೋಮೇಶಗೌಡ ಪಾಟೀಲ, ಶಿವಕುಮಾರ ಕುಸಾಳೆ, ಭೀಮಣ್ಣ ಬಾಲಯ್ಯ, ಮೋಹಿಜ್ ಪಟೇಲ್, ಶರಣು ಪೂಜಾರಿ, ಸಂಗಮೇಶ ಹಿರೇಮಠ, ಶಿವಕುಮಾರ ಹಳ್ಳಿಖೇಡ, ಭೀಮಪ್ಪ ಮರಕಲ್, ಫಿರೋಜ್ ಅಹ್ಮದ್, ದಸ್ತಗೀರ ನದಾಫ್, ಸಾ.ಸಿ. ಬೆನಕನಳ್ಳಿ, ಶರಣು ಮಹಾಗಾಂವ, ವಿಜಯಕುಮಾರ ಜೆಡಗಿ, ಮಂಜುನಾಥ ದೊಡ್ಡಮನಿ, ಮಹದ್ ಮಶಾಕ್ ಹಾಗೂ ನಾಗರಾಜ ಗದ್ದಿ, ಪ್ರಕಾಶ ಜಂಗಲೆ ಸೇರಿದಂತೆ ವಿವಿಧ ಪತ್ರಿಕೆ ಹಾಗೂ ಸುದ್ದಿ ವಾಹಿನಿಗಳ ಪ್ರತಿನಿಧಿಗಳಿಗೆ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭೀಮಾಶಂಕರ ಎಂ. ಫಿರೋಜಾಬಾದ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ರಾಜಕುಮಾರ ಉದನೂರ, ಭವಾನಿಸಿಂಗ್ ಠಾಕೂರ. ಅಕ್ರಂಪಾಶಾ ಮೋಮಿನ್ .ಅರುಣ ಕದಂ. ಸಂಘದ ಪದಾಧಿಕಾರಿಗಳು, ಸದಸ್ಯರು, ವಿವಿಧ ಮಾಧ್ಯಮ ಸಂಸ್ಥೆಗಳ ಪತ್ರಕರ್ತರು ಹಾಗೂ ಗಣ್ಯರು ಉಪಸ್ಥಿತರಿದ್ದರು.

# ಅಕ್ರಮ ಭೂ ಕಬಳಿಕೆ: ಪಿಡಿಒಗಳ ವಜಾಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬಂಗಾರಪೇಟೆ

ಮುಳಬಾಗಿಲು ತಾಲೂಕಿನ ಸನ್ನಾವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಿರಾಯಿತಿ ಭೂಮಿಯನ್ನು ಭೂ ಪರಿವರ್ತನೆ ಮಾಡದೆ ಅಕ್ರಮ ಖಾತೆಗಳನ್ನು ಸೃಷ್ಟಿಸಿ ಭೂ ಕಬಳಿಕೆದಾರರ ಬೆಂಬಲಿಕೆ ನಿಂತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಈ ಕೂಡಲೇ ವಜಾ ಗೊಳಿಸಬೇಕು ಎಂದು ಕರ್ನಾಟಕ ರಿಪಬ್ಲಿಕನ್ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ, ಚಿಕ್ಕನಾರಾಯಣ ಆಗ್ರಹಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಿಪಬ್ಲಿಕನ್ ಸಂಘಟನೆ ಹಾಗೂ ಆಲ್ ಇಂಡಿಯಾ ಬಹುಜನ ಸಮಾಜವಾದಿ ಪಾರ್ಟಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಳಬಾಗಿಲು ತಾಲೂಕಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ತುಳಸಿ ರಾಮಶೆಟ್ಟಿ ಹಾಗೂ ಪದ್ಮಾವತಿ ರವರು ಸಾಗುವಳಿ ಭೂಮಿಯನ್ನು ವಾಣಿಜ್ಯೋದ್ಯಮಕ್ಕೆ ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳ ಭೂಪಡಿವರ್ತನೆಯಾಗದೆ ಖಾತೆಗಳನ್ನು ಮಾಡಿಕೊಟ್ಟಿರುತ್ತಾರೆ. ಪ್ರತಿ ಖಾತೆಗೆ ಇಂತಿಷ್ಟು ಎಂಬಂತೆ ಲಕ್ಷಾಂತರ ರೂಪಾಯಿ ಹಣವನ್ನು ಕಬಳಿಸಿದ್ದಾರೆ ಇದಕ್ಕೆ ಪೂರಕವಾದ ದಾಖಲೆಗಳನ್ನು ಜಿಲ್ಲಾ ಪಂಚಾಯಿತಿ ಅಧಿಕಾರಿಗಳಿಗೆ



ಕೊಟ್ಟರು ಯಾವುದೇ ಪ್ರಯೋಜನವಾಗುತ್ತಿಲ್ಲ ಆದಕಾರಣ ಮುಂದಿನ ದಿನಗಳಲ್ಲಿ ಉಗ್ರಹೋರಾಟ ಮಾಡಲಾಗುವುದು ಎಂದರು.

**ಭ್ರಷ್ಟರ ಬೆಂಬಲಕ್ಕೆ ನಿಂತ ಅಧಿಕಾರಿ:** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ತುಳಸಿ ರಾಮ ಶೆಟ್ಟಿ ಹಾಗೂ ಪದ್ಮಾವತಿ ರವರ ಅಕ್ರಮಗಳ ಬಗ್ಗೆ ಅನೇಕ ಬಾರಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಉಪ ಕಾರ್ಯದರ್ಶಿಯಾದ ರಮೇಶ್ ಬಾಬು ರವರಿಗೆ ದಾಖಲೆ ಸಮೇತ ದೂರು ಕೊಟ್ಟರು ಯಾವುದೇ ಪ್ರಯೋಜನವಾಗಲಿಲ್ಲ ಅವರ ನಡೆಯನ್ನು ಗಮನಿಸಿದ್ದೆ ಆದಲ್ಲಿ ಭ್ರಷ್ಟರ ಬೆಂಬಲಕ್ಕೆ ನಿಂತು ಇವರು ಸಹ ಹಣ ಸಂಪಾದಿಸಿದ್ದಾರೆ ಎಂದು ಗೋಚರಿಸುತ್ತದೆ ಎಂದರು.

**ನಕಲಿ ದಾಖಲೆಗಳ ಸೃಷ್ಟಿ ಸರ್ಕಾರದ ಅನುದಾನ ಗುಳುಂ:** ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೆ ತಂದು ಕೋಟ್ಯಾಂತರ ರೂಪಾಯಿ ಬಿಡುಗಡೆ ಮಾಡುತ್ತಿದ್ದಾರೆ ವಿಪರ್ಯಾಸ ಭ್ರಷ್ಟ ಅಧಿಕಾರಿಗಳ ಕಣ್ಣ ಮುಚ್ಚಾಲೆ ಆಟದಿಂದಾಗಿ ಅಭಿವೃದ್ಧಿ ಮರಿಚಿಕೆಯಾಗುತ್ತಿರುವುದು ಅತ್ಯಂತ ದುರಾದೃಷ್ಟಕರ ಪಂಚಾಯತಿ ಅಭಿವೃದ್ಧಿ ಅಧಿಕಾರಿ ತುಳಸಿರಾಮ್ ಶೆಟ್ಟಿ ಹಾಗೂ ಪದ್ಮಾವತಿ ರವರು ತಾವು ಕರ್ತವ್ಯ ನಿರ್ವಹಿಸಿರುವ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಪ್ರವರ್ಗ 1, 15ನೇ ಹಣಕಾಸು ಯೋಜನೆ, ಹಣವನ್ನು ಸಂಪೂರ್ಣವಾಗಿ

## ಹೋರಾಟದ ಎಚ್ಚರಿಕೆ

**ಇಂಥ ಭ್ರಷ್ಟ ಅಧಿಕಾರಿಗಳ ವಿರುದ್ಧ ಆಗಸ್ಟ್ ಎರಡರಂದು ತಾಲೂಕು ಪಂಚಾಯಿತಿ ಕಾರ್ಯಾಲಯ ಮುಳಬಾಗಿಲು ತಾಲೂಕಿನಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಈ ಕೂಡಲೇ ಅಧಿಕಾರಿಗಳು ಎಚ್ಚೆತ್ತುಕೊಂಡು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.**

ದುರ್ಬಳಕೆ ಮಾಡಿಕೊಂಡು ನಕಲಿ ಬಿಲ್ಲುಗಳನ್ನು ಸೃಷ್ಟಿಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುವುದರ ಮೂಲಕ ಅಪಾರ ಪ್ರಮಾಣದ ಹಣವನ್ನು ಗುಳು ಮಾಡಿರುತ್ತಾರೆ. ಇವರನ್ನು ಶಿಕ್ಷಿಸಬೇಕಾದ ಅಧಿಕಾರಿಗಳು ಮೌನಕ್ಕೆ ಜಾರಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ ಎಂದು ಆಕ್ರೋಶ ಅವರ ಹಾಕಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಅಮರೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ ನಾರಾಯಣ, ತಾಲೂಕು ಪ್ರಧಾನ ಕಾರ್ಯದರ್ಶಿ ಶಂಕರ್ ನಾಗ್, ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ ಮಂಜುನಾಥ್, ತಾಲೂಕ ಅಧ್ಯಕ್ಷ ತಿಪ್ಪಯ್ಯ, ಇತರರು ಉಪಸ್ಥಿತರಿದ್ದರು.

# ವಕ್ಫ್ ಸಂಸ್ಥೆಯ ಆಡಳಿತ ಹಾಗೂ ಕಲ್ಯಾಣ ಕಾರ್ಯಕ್ರಮಗಳ ಕುರಿತು ಪರಿಶೀಲನೆ





• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರಾದ ಡಾ. ಹಫೀಜ್ ಸಯ್ಯದ್ ಮೊಹಮ್ಮದ್ ಅಲಿ ಅಲ್ ಹುಸ್ಸೈನಿ ಅವರು ಕಲಬುರಗಿಯ ಯತೀಂ ಖಾನಾ, ಅಂಜುಮನ್ ಅನ್ಸಾರುಸ್–ಸುಫ್ಫಾಗೆ ಭೇಟಿ ನೀಡಿ, ವಕ್ಫ್ ಸಂಸ್ಥೆಯ ಆಡಳಿತ, ಕಾರ್ಯನಿರ್ವಹಣೆ ಹಾಗೂ ಕಲ್ಯಾಣ ಕಾರ್ಯಕ್ರಮಗಳ ಕುರಿತು ಪರಿಶೀಲನೆ ನಡೆಸಿದರು.

ಭೇಟಿಯ ವೇಳೆ ಡಾ. ಅಲ್ ಹುಸ್ಸೈನಿ ಅವರು ಯತೀಂ ಖಾನಾದ ACF Administrator ಮೊಹಮ್ಮದ್ ಮುಜೀಬುದ್ದೀನ್ ಹಾಗೂ ಕಲಬುರಗಿ ವಕ್ಫ್ ಅಧಿಕಾರಿ ಪರ್ವೇಜ್ ಆಲಂ ಅವರೊಂದಿಗೆ ಪರಿಶೀಲನಾ ಸಭೆ ನಡೆಸಿದರು. ಸಭೆಯಲ್ಲಿ ಸಂಸ್ಥೆಯ ದೈನಂದಿನ ಆಡಳಿತ, ವಕ್ಫ್ ಆಸ್ತಿಗಳ ನಿರ್ವಹಣೆ, ಶೈಕ್ಷಣಿಕ ಮತ್ತು ಕಲ್ಯಾಣ ಕಾರ್ಯಕ್ರಮಗಳು ಹಾಗೂ ಮಕ್ಕಳಿಗೆ ನೀಡಲಾಗುತ್ತಿರುವ ಸೇವೆಗಳ ಗುಣಮಟ್ಟವನ್ನು ಇನ್ನಷ್ಟು ಉತ್ತಮಗೊಳಿಸುವ ಕುರಿತು ಸವಿಸ್ತಾರವಾಗಿ ಚರ್ಚಿಸಲಾಯಿತು.

ಭೇಟಿಯ ಭಾಗವಾಗಿ ಅಧ್ಯಕ್ಷರು ವಿದ್ಯಾರ್ಥಿಗಳು, ಆಡಳಿತಾಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಂವಾದ ನಡೆಸಿ, ಅವರ ಅಗತ್ಯತೆಗಳನ್ನು ತಿಳಿದುಕೊಂಡು ಸಂಸ್ಥೆಯ ಕಾರ್ಯನಿರ್ವಹಣೆ ಕುರಿತು ಅಭಿಪ್ರಾಯಗಳನ್ನು ಸಂಗ್ರಹಿಸಿದರು. ಬಳಿಕ ಅವರು ಯತೀಂ ಖಾನಾದ ಆವರಣವನ್ನು ಪರಿಶೀಲಿಸಿ, ವಸತಿ, ಶಿಕ್ಷಣ, ಊಟದ ವ್ಯವಸ್ಥೆ ಹಾಗೂ ನಿವಾಸಿ ಮಕ್ಕಳಿಗೆ ಒದಗಿಸಲಾಗುತ್ತಿರುವ ಇತರೆ ಮೂಲಭೂತ ಸೌಲಭ್ಯಗಳನ್ನು ವೀಕ್ಷಿಸಿದರು.

ಡಾ. ಅಲ್ ಹುಸ್ಸೈನಿ ಅವರು ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯ ಕಾರ್ಯವನ್ನು ಶ್ಲಾಘಿಸಿದರು. ವಕ್ಫ್ ಸಂಸ್ಥೆಗಳ ಆಡಳಿತದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ಹಾಗೂ ಮಕ್ಕಳಿಗೆ ಉತ್ತಮ ಆರೈಕೆಯನ್ನು ಕಾಪಾಡಿಕೊಳ್ಳುವ ಮಹತ್ವವನ್ನು ಅವರು ಒತ್ತಿ ಹೇಳಿದರು.

ಅಲ್ಲದೆ, ಅನಾಥ ಹಾಗೂ ಹಿಂದುಳಿದ ಮಕ್ಕಳಿಗೆ ಉತ್ತಮ ಶೈಕ್ಷಣಿಕ ಅವಕಾಶಗಳು ಮತ್ತು ಸಮಗ್ರ ಕಲ್ಯಾಣ ಒದಗಿಸುವ ಉದ್ದೇಶದ ಎಲ್ಲಾ ಯೋಜನೆಗಳಿಗೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಮುಂದೆಯೂ ತನ್ನ ಸಂಪೂರ್ಣ ಬೆಂಬಲವನ್ನು ನೀಡಲಿದೆ ಎಂದು ಅವರು ಭರವಸೆ ನೀಡಿದರು.

# ಶಾಲಾ ಮಕ್ಕಳಿಗೆ ರಂಗಭೂಮಿ ಕಲೆ ಕುರಿತು ಅರಿವು..!

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಇಂದಿನ ಡಿಜಿಟಲ್ ಯುಗದಲ್ಲಿ ಮೊಬೈಲ್ ಮತ್ತು ಟಿವಿ ಪರದೆಗಳಿಗೆಷ್ಟೇ ಸೀಮಿತವಾಗುತ್ತಿರುವ ಮಕ್ಕಳಲ್ಲಿ ಸೃಜನಶೀಲತೆ ಹಾಗೂ ಕಲಾಭಿರುಚಿಯನ್ನು ಬೆಳೆಸುವ ನಿಟ್ಟಿನಲ್ಲಿ ವಿಜಯಪುರ ನಗರದ ಸಿದ್ಧೇಶ್ವರ ಕೋಚಿಂಗ್ ಕ್ಲಾಸ್ ಒಂದು ವಿಭಿನ್ನ ಹೆಜ್ಜೆಯನ್ನಿಟ್ಟಿದ್ದು, ಸಂಸ್ಥೆಯು ಶಾಲಾ ವಿದ್ಯಾರ್ಥಿಗಳಿಗಾಗಿ ರಂಗಭೂಮಿ ಕಲೆ ಮತ್ತು ಸಂವಹನ ಕುರಿತು ವಿಶೇಷ ಅರಿವು ಮೂಡಿಸುವ ಸಲುವಾಗಿ ಮತ್ತು ರಂಗಭೂಮಿ ಕಲಾವಿದರಿಗೆ ನೆರವಾಗುವ ದೃಷ್ಟಿಯಿಂದ ಶಾಲಾ ಮಕ್ಕಳಿಗೆ ನಾಟಕ ಪ್ರದರ್ಶನದಲ್ಲಿ ಭಾಗವಹಿಸಿ ಕಲಾವಿದರಿಗೆ ಬೆಂಬಲವಾಗಿ ಮತ್ತು ಮಕ್ಕಳು ರಂಗಭೂಮಿ ಕಲೆಯಲ್ಲಿ ಆಸಕ್ತಿ ತೋರುವ ಕಾರ್ಯ ಮಾಡಿದ್ದು ಮಕ್ಕಳು ಕೇವಲ ಪಠ್ಯಪುಸ್ತಕದ ಶಿಕ್ಷಣಕ್ಕಷ್ಟೇ ಆದ್ಯತೆ ನೀಡದೆ, ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ರಂಗಭೂಮಿ ಹೇಗೆ ಸಹಕಾರಿ ಎಂಬುದನ್ನು ಈ ಕಾರ್ಯಕ್ರಮದಲ್ಲಿ



ಮನವರಿಕೆ ಮಾಡಿಕೊಡಲಾಯಿತು.

ರಂಗಭೂಮಿಯು ಮಕ್ಕಳಲ್ಲಿ ಆತ್ಮವಿಶ್ವಾಸ, ಧೈರ್ಯ, ಸ್ಪಷ್ಟ ಸಂವಹನ ಶಕ್ತಿ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸಲು ಅತ್ಯುತ್ತಮ ಮಾಧ್ಯಮವಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಸುರೇಶ್ ಜತ್ತಿ ವಿವರಿಸಿದರು...

ವಿದ್ಯಾಭ್ಯಾಸದ ಜೊತೆಗೆ ಕಲೆ, ಸಂಸ್ಕೃತಿ ಮತ್ತು ಕಲಾವಿದರನ್ನು ಪೋಷಿಸುವಕ ಕಾಯಕಕ್ಕೆ ಸಿದ್ಧೇಶ್ವರ ಕೋಚಿಂಗ್ ಕ್ಲಾಸ್ ಮುಂದಾಗಿದ್ದು ಈ ವಿಶಿಷ್ಟ ಪ್ರಯತ್ನಕ್ಕೆ ಪೋಷಕರಿಂದ ಹಾಗೂ ಸಾರ್ವಜನಿಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ. ಇಂತಹ ಕಾರ್ಯಕ್ರಮಗಳು



ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತರಲು ಹಾಗೂ ಅವರ ಸಾಂಸ್ಕೃತಿಕ ಮನೋಭಾವವನ್ನು ಹೆಚ್ಚಿಸಲು ಪೂರಕವಾಗಿವೆ.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಸುರೇಶ್ ಜತ್ತಿ ಅವರನ್ನು ಕಲಾವಿದರು ಸನ್ಮಾನಿಸಿದರು, ಮಲ್ಲಿಕಾರ್ಜುನ ಮಾಡ್ಡೆ, ಸದಾಶಿವ ಹಿರೇಮಠ, ಗಿರಿ ದಾವಣಗೆರೆ, ಮಹಾಂತೇಶ ಬ್ಯಾಡಗಿ, ಸೀಮಾ ಮೈನ್ದರ್ಗಿ ಸೇರಿದಂತೆ ಶಾಲೆಯ ಶಿಕ್ಷಕ, ಶಿಕ್ಷಕಿಂ–ಯರು ಉಪಸ್ಥಿತರಿದ್ದರು.

# ಜಿಲ್ಲಾಸ್ಪತ್ರೆಗೆ ರಾಜ್ಯಮಟ್ಟದ ಗೌರವ: ಹೆರಿಗೆಯಲ್ಲಿ ಅಭೂತಪೂರ್ವ ಸಾಧನೆ!



**ವಿಶೇಷ ವರದಿ**
**● ಮಧೂರ ತಿಳಗೂಳಕರ**
**ಜಿಲ್ಲಾ ವರದಿಗಾರರು**

ಉತ್ತರಕರ್ನಾಟಕದ ಆಶಾಕಿರಣವಾಗಿರುವ ವಿಜಯಪುರದ ಜಿಲ್ಲಾ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆರೋಗ್ಯ ಕ್ಷೇತ್ರದಲ್ಲಿ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ನೆಟ್ಟಿದೆ..! ಹೌದು ತಾಯಿ ಮತ್ತು ಮಗುವಿನ ಸುರಕ್ಷತೆಗೆ ಮೊದಲ ಆದ್ಯತೆ ನೀಡುತ್ತಾ, ಸಹಜ ಹೆರಿಗೆಗಳನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಕರ್ನಾಟಕದಲ್ಲೇ 2ನೇ ಅತ್ಯುತ್ತಮ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಕೇವಲ ವಿಜಯಪುರ ಜಿಲ್ಲೆಗೆ ಸಿಮಿತವಾಗದೆ, ನೆರೆಯ ರಾಜ್ಯಕ್ಕೂ ಇದು ಭರವಸೆಯ ಬೆಳಕಾಗಿದೆ ವಿಜಯಪುರ ಜಿಲ್ಲಾಸ್ಪತ್ರೆ, ಅತ್ಯುತ್ತಮ ಸೇವೆ ಮತ್ತು ವೈದ್ಯರ ಮೇಲಿರುವ ಅಪಾರ ವಿಶ್ವಾಸದಿಂದಾಗಿ, ಕೇವಲ ವಿಜಯಪುರ ಜಿಲ್ಲೆಯಷ್ಟೇ ಅಲ್ಲದೆ ಕಲಬುರಗಿ, ಯಾದಗಿರಿ, ಬೆಳಗಾವಿ, ಬಾಗಲಕೋಟೆ ಸೇರಿದಂತೆ ನೆರೆಯ ಮಹಾರಾಷ್ಟ್ರದ ನಾನಾ ಭಾಗಗಳಿಂದಲೂ ಗರ್ಭಿಣಿಯರು ಹೆರಿಗೆಗಾಗಿ ಇಲ್ಲಿಗೆ ಆಗಮಿಸುತ್ತಿದ್ದಾರೆ. ಸಾರ್ವಜನಿಕರ ಈ ಭರವಸೆಯೇ ಆಸ್ಪತ್ರೆಯ ಯಶಸ್ಸಿನ ನಿಜವಾದ ಶಕ್ತಿಯಾಗಿದ್ದು ಶೇ. 65 ಕ್ಕೂ ಹೆಚ್ಚು ನಾರ್ಮಲ್ ಡಿಲಿವರಿಯಾಗಿವೆ ,

ಇಂದಿನ ದಿನಗಳಲ್ಲಿ ಶಸ್ತ್ರಚಿಕಿತ್ಸೆ ಸಂಖ್ಯೆ ಹೆಚ್ಚಾಗುತ್ತಿರುವಾಗ, ವಿಜಯಪುರ ಜಿಲ್ಲಾಸ್ಪತ್ರೆ ಮಾತ್ರ ಸಹಜ ಹೆರಿಗೆಗೆ ಪ್ರಥಮ ಆದ್ಯತೆ ನೀಡುತ್ತಿದೆ. ಆಸ್ಪತ್ರೆಯಲ್ಲಿ




ಶೇಕಡಾ 65% ಕ್ಕೂ ಹೆಚ್ಚು ಸಹಜ ಹೆರಿಗೆಗಳೇ ಆಗುತ್ತಿರುವುದು ವಿಶೇಷವಾಗಿದೆ ! ತಾಯಿ ಅಥವಾ ಮಗುವಿನ ಜೀವಕ್ಕೆ ಅಪಾಯವಿರುವಂತಹ ಅತ್ಯಂತ ತುರ್ತು ಸಂದರ್ಭಗಳಲ್ಲಿ ಮಾತ್ರ ಸಿಜೇರಿಯನ್ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ.

**ದಿನನಿತ್ಯದ ಸೇವೆ:** ದಿನಕ್ಕೆ ಸರಾಸರಿ 25 ರಿಂದ 30 ಹಾಗೂ ತಿಂಗಳಿಗೆ 700 ರಿಂದ 800 ಹೆರಿಗೆಗಳು ಇಲ್ಲಿ ಅತ್ಯಂತ ಕಾಳಜಿಯಿಂದ ನೆರವೇರುತ್ತವೆ.

**ಕಳೆದ 4 ವರ್ಷಗಳ ಯಶಸ್ಸಿನ ಹಾದಿ:**

- 2023: 6,152 ಸಹಜ ಹೆರಿಗೆಗಳು (3,597 ಸಿಜೇರಿಯನ್)
- 2024: 5,271 ಸಹಜ ಹೆರಿಗೆಗಳು (3,553 ಸಿಜೇರಿಯನ್)
- 2025: 4,457 ಸಹಜ ಹೆರಿಗೆಗಳು (3,096 ಸಿಜೇರಿಯನ್)
- 2026 (ಜನವರಿ–ಮೇ): 1,825 ಸಹಜ ಹೆರಿಗೆಗಳು (1,171 ಸಿಜೇರಿಯನ್).

ಖಾಸಗಿ ಆಸ್ಪತ್ರೆಗಳನ್ನೂ ಮೀರಿಸುವ ಹೈಟೆಕ್ ಸೌಲಭ್ಯಗಳು, ಹೌದು ಗರ್ಭಿಣಿಯರಿಗೆ ಯಾವುದೇ ಕೊರತೆಯಾಗದಂತೆ ಆಸ್ಪತ್ರೆಯಲ್ಲಿ ಆಧುನಿಕ ಸೌಲಭ್ಯಗಳನ್ನು ಒದಗಿಸಲಾಗಿದ್ದು 24 ಗಂಟೆಗಳ ಕಾಲ ತುರ್ತು ಪ್ರಸೂತಿ ಸೇವೆ, ಅನುಭವಿ ಸ್ತ್ರೀ–



**ತಾಯಿ ಮತ್ತು ಮಗುವಿನ ಅತ್ಯುತ್ತಮ ಆರೋಗ್ಯದ ದೃಷ್ಟಿಯಿಂದ ಸಹಜ ಹೆರಿಗೆಯೇ ಸೂಕ್ತ. ವೈದ್ಯಕೀಯವಾಗಿ ಕಡ್ಡಾಯ ಎನಿಸಿದಾಗ ಮಾತ್ರ ಸಿಜೇರಿಯನ್ ಮಾಡಲಾಗುತ್ತದೆ. ನಮ್ಮ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಯ ನಿರಂತರ ಶ್ರಮದಿಂದ ಈ ರಾಜ್ಯಮಟ್ಟದ ಸಾಧನೆ ಸಾಧ್ಯವಾಗಿದೆ.**
**–ಡಾ. ಶಿವಾನಂದ ಮಾಸ್ತಿಹೋಳಿ (ಜಿಲ್ಲಾ ಶಸ್ತ್ರಚಿಕಿತ್ಸಕರು, ವಿಜಯಪುರ ಜಿಲ್ಲಾಸ್ಪತ್ರೆ)**

ರೋಗ, ಅರಿವಳಿಕೆ ಹಾಗೂ ನವಜಾತ ಶಿಶು ತಜ್ಞರ ಸತತ ಮೇಲ್ವಿಚಾರಣೆ, ನವಜಾತ ಶಿಶು ತೀವ್ರ ನಿಗಾ ಘಟಕ , ಹುಟ್ಟಿದ ಮಗುವಿಗೆ ತಕ್ಷಣದ ಹೈಟೆಕ್ ಆರೈಕೆ ತಾಣವಾಗಿದೆ..

ಇನ್ನು ಗರ್ಭಿಣಿಯರಿಗೆ ಸಕಾಲಿಕ ತಪಾಸಣೆ, ಪೌಷ್ಟಿಕ ಆಹಾರದ ಕುರಿತು ಅರಿವು, ರಕ್ತಹೀನತೆ ನಿಯಂತ್ರಣ ಹಾಗೂ ಮುಖ್ಯವಾಗಿ ಮಾನಸಿಕ ಧೈರ್ಯ ತುಂಬುವ ಮೂಲಕ ಗರ್ಭಿಣಿಯರಿಗೆ ನೆರವಾಗಿದ್ದು ಪ್ರತಿನಿತ್ಯ ಅತಿಯಾದ ರೋಗಿಗಳ ಒತ್ತಡ ಹಾಗೂ ಸೀಮಿತ ಆಸ್ಪತ್ರೆ ಹಾಸಿಗೆಗಳ ಸವಾಲಿನ ನಡುವೆಯೂ, ಲಕ್ಷಾಂತರ ತಾಯಂದಿರ ಮಡಿಲು ತುಂಬಿಸುತ್ತಿರುವ ವಿಜಯಪುರ ಜಿಲ್ಲಾಸ್ಪತ್ರೆಯ ವೈದ್ಯರು, ಶಸ್ತ್ರಚಿಕಿತ್ಸಕರು ಮತ್ತು ಆಸ್ಪತ್ರೆಯ ಪ್ರತಿಯೊಬ್ಬ ಸಿಬ್ಬಂದಿಯ ನಿಸ್ವಾರ್ಥ ಸೇವೆಯಿಂದಲೇ ಇಂದು ವಿಜಯಪುರ ಜಿಲ್ಲಾಸ್ಪತ್ರೆ ರಾಜ್ಯದ ಎರಡನೇ ಅತ್ಯುತ್ತಮ ಆಸ್ಪತ್ರೆಯಾಗಿ ಹೊರಹೊಮ್ಮಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222
PRGI NO. (RNINO:KARKAN/2011/48371)